ಸಾಹಿತ್ಯ ದಾಸೋಹ – 235

ಸಂಚಿಕೆ 59 – ಏಪ್ರಿಲ್ 2025 22.03.2025ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

ಇದು 22, ಮಾರ್ಚ್ 2025ರಂದು ನಡೆದ 235ನೆಯ ಸಾಹಿತ್ಯ ದಾಸೋಹದ ಸಂಚಿಕೆ. ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲರ ಪ್ರಸ್ತುತಿಗಳನ್ನೂ ಸಮಗ್ರವಾಗಿ ವಿಶ್ಲೇಷಿಸಿ ಕೆಲವು ಅಮೂಲ್ಯ ಸಲಹೆಗಳನ್ನು ನೀಡಿದ ಶ್ರೀ ಹೆಚ್. ಶ್ರೀಧರ ರಾವ್ ಅವರಿಗೆ ಮತ್ತು ಎಲ್ಲ ದಾಸೋಹಿಗಳಿಗೆ ವಂದನೆಗಳು.

08. ಮಾರ್ಚ್ 2025 – 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ'. ಅಂದು ನಡೆದ 'ತಿಂಗಳ ಬೆಳಕು–13' ಕಾರ್ಯಕ್ರಮ ಹಾಗೂ ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ಮೂಡಿಬಂದ ಪ್ರಸ್ತುತಿಗಳು ಮಹಿಳೆಯರನ್ನು ಕುರಿತ ವಿಚಾರಗಳಿಗಾಗಿಯೇ ಮೀಸಲಾಗಿದ್ದುವು. ತಿಂಗಳ ಬೆಳಕು–13ರಲ್ಲಿ ವೇದಿಕೆಯ ಹಿರಿಯ ಮಹಿಳಾ ಸದಸ್ಯರು ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀಯರ ಸಾಧನೆಗಳನ್ನು ಕುರಿತು ಮಾತನಾಡಿದರು. ಈ ಎಲ್ಲ ಉಪನ್ಯಾಸಗಳ ಲಿಖಿತ ರೂಪ ಹಾಗೂ ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತವಾದ ಎಲ್ಲ ಲೇಖನಗಳು, ಕವನಗಳು ಇತ್ಯಾದಿ ಗಳನ್ನೊಳಗೊಂಡ ವಿಶೇಷ ಸಂಚಿಕೆಯು ಸದ್ಯದಲ್ಲಿಯೇ ಪಿಡಿಎಫ್ ರೂಪದಲ್ಲಿ ಪ್ರಕಟವಾಗಲಿದೆ.

30 ಮಾರ್ಚ್ 2025 – ಚಾಂದ್ರಮಾನ ಯುಗಾದಿ, ವಿಶ್ವಾವಸು ನಾಮ ಸಂವತ್ಸರದ ಆರಂಭ. ಈದಿನ 'ಸ್ವಾನುಭವದ ಬೇವು–ಬೆಲ್ಲ, ಕಿರು ಪ್ರಬಂಧಗಳ ಹೋಳಿಗೆ' ಎಂಬ ಒಂದು ದಿನದ ವಿಶೇಷ ಅಭಿಯಾನವನ್ನು ಆಯೋಜಿಸಲಾಗಿತ್ತು. ಅಂದು ನಮ್ಮ ಸದಸ್ಯರು ತಮ್ಮ ಜೀವನಾನುಭವದಲ್ಲಿ ಕಂಡುಂಡ ಸಿಹಿ–ಕಹಿ ನೆನಪುಗಳನ್ನು ಕಿರು ಪ್ರಬಂಧ ರೂಪದಲ್ಲಿ ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತಪಡಿಸಬೇಕೆಂದು ಕೋರಲಾಗಿತ್ತು. ಕೇವಲ ಒಂದೇ ದಿನದಲ್ಲಿ ವಿವಿಧ ಲೇಖಕರಿಂದ ಒಟ್ಟು 50 ಪ್ರಬಂಧಗಳು ಮೂಡಿ ಬಂದುವು. ಈ ಎಲ್ಲ ಪ್ರಬಂಧಗಳ ಸಂಕಲನವೊಂದನ್ನು ಹೊರತರುವ ಉದ್ದೇಶವಿದೆ. ಜೆಚ್ಚಿನ ವಿವರಗಳನ್ನು ಮುಂದೆ ತಿಳಿಸಲಾಗುವುದು.

ಸಾಹಿತ್ಯ ದಾಸೋಹ, ಮಹಿಳಾ ದಿನಾಚರಣೆ ಹಾಗೂ ಯುಗಾದಿ ಪ್ರಬಂಧ ರಚನೆ ಅಭಿಯಾನಗಳಿಗೆ ಸ್ಪಂದಿಸಿದ ಎಲ್ಲ ಬರಹಗಾರರಿಗೆ, ಉಪನ್ಯಾಸಕರಿಗೆ ಮತ್ತು ತಾಂತ್ರಿಕ ವರ್ಗಕ್ಕೆ ಮತ್ತು ಮುಖಪುಟಕ್ಕೆ ತಾವು ರಚಿಸಿದ ವರ್ಣ ಕಲಾಕೃತಿಯನ್ನು ಒದಗಿಸಿದ ಶ್ರೀ ಕೆ.ಆರ್.ಎಸ್. ಮೂರ್ತಿಯವರಿಗೆ ನಮ್ಮ ಕೃತಜ್ಞತೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 12.04.2025

ದಾಸೋಹದ ಪುಟಗಳಲ್ಲಿ...

ಮುಖಚಿತ್ರ : ಮೈಸೂರು ದಸರಾ – ವರ್ಣಚಿತ್ರ ಕಲಾಕೃತಿ: ಕೆ.ಆರ್.ಎಸ್. ಮೂರ್ತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾ ಹಿತ್ಯ ದಾ ಸೋಹ ವೇದಿಕೆ

ಸಾಹಿತ್ಯ ದಾಸೋಹ – 235


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

22, ಮಾರ್ಚ್ 2025ರಂದು ಶನಿವಾರ ಇಳಿ ಮಧ್ಯಾಹ್ನ 3.30ಕ್ಕೆ ಸರಿಯಾಗಿ ಮಾರ್ಚ್ ತಿಂಗಳ ಹಾಗು 235ನೆಯ ನೋಡಿಯೋ ಸಾಹಿತ್ಯ ದಾಸೋಹವು ಗೂಗಲ್ ಮೀಟ್‌ನಲ್ಲಿ ಅಂತರ್ಜಾಲ ಮುಖೇನ ಆರಂಭವಾಯಿತು.

ಸಭೆಯ ಸಾರಥ್ಯ ವಹಿಸಿದ್ದ ಶ್ರೀ ಹೆಚ್.ಆರ್. ಗುರುರಾಜ ಶಾಸ್ತ್ರಿಯವರು ಔಪಚಾರಿಕವಾಗಿ ಅಂತರಜಾಲ ಸಭೆಗೆ ಚಾಲನೆ ನೀಡಿದರು. ಶ್ರೀ ಮನೋಹರ ಗೋಖಲೆ ಅವರು ಎಲ್ಲರಿಗೂ ಸ್ವಾಗತ ಕೋರಿ, 235ನೆಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಹೆಚ್. ಶ್ರೀಧರ ರಾವ್ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಯುಗಾದಿ ಶುಭಾಶಯಗಳನ್ನು ಕೋರುತ್ತಾ,

- 02.03.2025ರಂದು ವೇದಿಕೆಯ ಆಶ್ರಯದಲ್ಲಿ ಶ್ರೀ ಪಾ. ರಾಜಗೋಪಾಲ ಅವರ ಸನ್ಮಾನ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರುಗಿತು. ಅಂದು ಸ್ಟೇಟ್ ಬ್ಯಾಂಕ್ ಕನ್ನಡ ಸಂಘ ಮತ್ತು ಸಮನ್ವಯ ಸಮಿತಿಯೊಡನೆ ಐವತ್ತು ವರ್ಷಗಳ ಸುದೀರ್ಘ ಒಡನಾಟ ಹೊಂದಿರುವ ಪ್ರಮುಖ ಸದಸ್ಯರ ಭಾಗವಹಿಸುವಿಕೆ ಹಾಗೂ ಸೇವೆಯನ್ನು ಗುರುತಿಸಲಾಯಿತು.
- ಶ್ರೀ ಧೀರೇಂದ್ರ ಅವರು ನಿರ್ದೇಶಿಸಿದ "ಛಲದಂಕಮಲ್ಲ ಪಾ.ರಾಜಗೋಪಾಲ" ನಾಟಕದ ಯಶಸ್ವೀ ರಂಗ ಪ್ರಯೋಗಕ್ಕಾಗಿ ಶ್ರೀ ಧೀರೇಂದ್ರ ಮತ್ತು ಶ್ರೀರಂಗರಾಜನ್ ಅವರನ್ನು ಅಭಿನಂದಿಸಿದರು. ಗಿರಿಜಾಮೀಸೆ ಹಾಕಿ ನಾಟಕದಲ್ಲಿ ಉತ್ಸಾಹದಿಂದ ಅಭಿನಯಿಸಿದ ಶ್ರೀ ವಿಠ್ಠಲ ಇಜೇರಿಯವರ ಜೀವನೋತ್ಸಾಹ ಅನನ್ಯ ಎಂದು ಸಂತಸ ವ್ಯಕ್ತಪಡಿಸಿದರು. "ಬ್ಯಾಂಕನ್ನಡದ ಜೀವನದಿ ಪಾ.ರಾಜಗೋಪಾಲ" ಅಭಿನಂದನಾ ಗ್ರಂಥವನ್ನು ಎಲ್ಲರೂ ಕೊಂಡು ಓದಬೇಕೆಂದು ಕರೆ ನೀಡಿದರು.
- ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಎಂ.ಎಸ್. ನರಸಿಂಹ ಮೂರ್ತಿಯವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಅತ್ಯಂತ ಹೆಮ್ಮೆಯ ವಿಷಯ. ಇದು ಅವರಿಗೆ 75 ವರ್ಷ ತುಂಬಿದ ಸುಸಂದರ್ಭವೂ ಆಗಿದ್ದು ವೇದಿಕೆಯ ಸದಸ್ಯರು ಬರೆದು ಹಾರೈಸಿದ "ಎಂಎಸ್‌ಎನ್ ನಗೆಹಾರ" ಲೇಖನಗಳ ಸಂಕಲನವು ಪುಸ್ತಕ ರೂಪ ತಾಳಿರುವುದು ನಮ್ಮ ಯಶಸ್ವೀ ಲೇಖನ ಅಭಿಯಾನದ ಫಲ ಎಂದು ತಿಳಿಸಿದರು.



- ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿಗಳಿಗೆ ಭಾಜನರಾಗಿರುವ ವೇದಿಕೆಯ ಸದಸ್ಯರುಗಳಾದ ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿ, ಶ್ರೀಮತಿ ಶಾಂತಿ ವಾಸು ಹಾಗೂ ಶ್ರೀಮತಿ ಲೀಲಾ ವಾಸುದೇವ್ ಅವರನ್ನು ಅಭಿನಂದಿಸಿದರು.
- ಶ್ರೀ ಕೆ.ಜನಾರ್ದನ ತುಂಗ ಅವರ "ಸ್ತಂಭದೀಪಿಕೆ" ಕೃತಿಯು ಈಗಾಗಲೇ ಖರೀದಿಗೆ ಲಭ್ಯವಿದ್ದು, ಈ ಮೌಲಿಕ ಪುಸ್ತಕವನ್ನು ಕೊಂಡು ಓದಲು ಎಲ್ಲ ಸದಸ್ಯರಿಗೆ ಕರೆ ನೀಡಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಪ್ರಸ್ತುತಿಗಾಗಿ ನೋಂದಾಯಿಸಿದ್ದು, ಎಲ್ಲ ಹದಿಮೂರು ದಾಸೋಹಿಗಳು ತಮ್ಮ ಸ್ವರಚಿತ ಬರಹಗಳನ್ನು ವಾಚಿಸಿದರು.

ಎಲ್ಲಾ ಪ್ರಸ್ತುತಿಗಳು ಮುಗಿದ ನಂತರ ಅಧ್ಯಕ್ಷರಾದ ಶ್ರೀ ಹೆಚ್. ಶ್ರೀಧರ ರಾವ್ ಅವರು ತಮ್ಮ ಸ್ವರಚಿತ ಕವನವನ್ನು ವಾಚಿಸಿ, ಅಧ್ಯಕ್ಷೀಯ ನುಡಿಗಳನ್ನು ಮತ್ತು ದಾಸೋಹದ ಪ್ರಸ್ತುತಿಗಳ ಬಗ್ಗೆ ತಮ್ಮ ವಿಶ್ಲೇಷಣೆಯನ್ನು ಮಾಡಿದರು. "ದಾಸೋಹವನ್ನು ಔತಣಕ್ಕೆ ಹೋಲಿಸುವುದಾದರೆ ಇನ್ನೂ ಅನೇಕ ಖಾದ್ಯಗಳನ್ನು ಅಥವಾ ಅನೇಕ ಸಾಹಿತ್ಯ ಪ್ರಕಾರಗಳನ್ನು ಇಂದು ಪ್ರಸ್ತುತಪಡಿಸಿಲ್ಲ. ಸಾಹಿತ್ಯ ಕೃಷಿಯಲ್ಲಿ ಮತ್ತೂ ವೈವಿಧ್ಯಮಯ ಪ್ರಸ್ತುತಿಗಳು ಬರಬೇಕು. ಹೆಚ್ಚು ಮಂದಿ ಸದಸ್ಯರು ಬರೆಯಲು ಪ್ರಯತ್ನಿಸಬೇಕು. ಒಂದು ಬರಹ ಅಥವಾ ಕೃತಿಯು ಸಾಹಿತ್ಯದ ದೃಷ್ಟಿಯಿಂದ ಶ್ರೇಷ್ಠ ಎನಿಸಿಕೊಳ್ಳಲು ಅದು ಓದುಗನ ಬದುಕಿಗೆ ಬಣ್ಣವನ್ನು ಕಟ್ಟಿಕೊಡಬೇಕು. ವಿಮರ್ಶಕರ ಈ ಅಭಿಪ್ರಾಯವನ್ನು ನಾನು ತೆಗೆದುಕೊಂಡಿದ್ದೇನೆ. ಕೃತಿಯು ಅರ್ಥವನ್ನು ಮನನ ಮಾಡಿಕೊಡಬೇಕು. ಓದುಗನ ತಿಳುವಳಿಕೆಯನ್ನು ಇನ್ನಷ್ಟು ವಿಸ್ತಾರಗೊಳಿಸಬೇಕು. ಓದುಗನ ಸಮಾಜ ಮತ್ತು ಬದುಕನ್ನು ನೋಡುವ ದೃಷ್ಟಿಕೋನವನ್ನು ಬದಲಿಸಬೇಕು. ಜೀವನದ ಬಗ್ಗೆ ಪ್ರೀತಿ, ಗೌರವ ಬೆಳೆಸಿಕೊಳ್ಳುವ ಸೂಕ್ಷ್ಮತೆ ನೀಡಬೇಕು" ಎಂದು ಹೇಳಿದ ಅವರು, ವೇದಿಕೆಯ ಸದಸ್ಯರಿಂದ ಪ್ರತಿವರ್ಷವೂ ಹೆಚ್ಚು ಹೆಚ್ಚು ಕೃತಿಗಳು ಬಿಡುಗಡೆಯಾಗುತ್ತಿದ್ದು ವೇದಿಕೆಯ ಲೇಖಕರ ಈ ಕೃತಿಗಳನ್ನು ಅಂತರಿಕವಾಗಿ ಮಾರಾಟ ಮಾಡುವ ಬಗ್ಗೆ ಯೋಚಿಸಬೇಕು ಎಂದು ಸಲಹೆ ನೀಡಿದರು.

ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತವಾದ ಎಲ್ಲಾ ಹದಿಮೂರು ಪ್ರಸ್ತುತಿಗಳ ಬಗ್ಗೆ ಸಮಾಧಾನದ ಸಮರ್ಪಕ ವಿಶ್ಲೇಷಣೆ ನೀಡುವುದಷ್ಟೇ ಅಲ್ಲದೆ ರಚನಾಕಾರರಿಗೆ ಅತ್ಯುತ್ತಮ ಸಲಹೆಗಳನ್ನು ಸಹಾ ನೀಡಿ ಅಧ್ಯಕ್ಷೀಯ ಸ್ಥಾನದ ಗರಿಮೆಯನ್ನು ಶ್ರೀಧರ ರಾವ್ ಅವರು ಮತ್ತಷ್ಟು ಎತ್ತರಕ್ಕೆ ಏರಿಸಿದರು.

ಕೊನೆಯಲ್ಲಿ ಶ್ರೀ ಹೆಚ್.ಆರ್. ಗುರುರಾಜ ಶಾಸ್ತ್ರಿಯವರ ವಂದನಾರ್ಪಣೆಯೊಂದಿಗೆ ಮಾರ್ಚ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಹೆಚ್. ಆರ್.ಗುರುರಾಜ ಶಾಸ್ತ್ರಿ
ಜಿ ಮೀಟ್ ಆತಿಥ್ಯ : ಶ್ರೀಮತಿ ರೇಣುಕಾ ದೇಸಾಯಿ
ವಿಡಿಯೋ ಸಂಸ್ಕರಣೆ : ಶ್ರೀ ರವಿ ಕುಸಬಿ
ಪಿಡಿಎಫ್ ಆವೃತ್ತಿ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

ಇಡೀ ದಾಸೋಹದ ಸಂಪೂರ್ಣ ಚಿತ್ರಣವು ವೇದಿಕೆಯ ಯುಟ್ಯೂಬ್ ವಾಹಿನಿ ಮತ್ತು ಜಾಲತಾಣದಲ್ಲಿ ಲಭ್ಯವಿದೆ.

***

ತಿಂಗಳ ಬೆಳಕು - 13

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ"

ಆರು ವಿಶೇಷ ಉಪನ್ಯಾಸಗಳು

ಕಾರ್ಯಕ್ರಮ ವರದಿ: ಎಸ್. ಶೃಂಗೇಶ್ವರ ಶರ್ಮ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ 8ನೆಯ ಮಾರ್ಚ್ 2025ರಂದು ಸಂಜೆ 5.30ಕ್ಕೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

'ತಿಂಗಳ ಬೆಳಕು' ಮಾಲಿಕೆಯ 12ನೆಯ ಕಾರ್ಯಕ್ರಮದ ಅಂಗವಾಗಿ, ವೇದಿಕೆಯ ಆರು ಜನ ಮಹಿಳಾ ಸದಸ್ಯರು, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಕುರಿತು ಮಾತನಾಡಿದರು. ಗೂಗಲ್ ಮೀಟ್‌ನ ಅಂತರ್ಜಾಲ ಮುಖೇನ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಟಿ.ಎಸ್.ಶ್ರವಣಕುಮಾರಿಯವರು ವಹಿಸಿದ್ದರು.

ಆರಂಭದಲ್ಲಿ ಕಾರ್ಯಕ್ರಮದ ಆಯೋಜಕರಲ್ಲೊಬ್ಬರಾದ ಶ್ರೀ ಶ್ರೀರಂಗರಾಜನ್ ಅವರು ಮಾತನಾಡಿ, 'ಸಾಮಾನ್ಯವಾಗಿ ತಿಂಗಳ ಬೆಳಕು ಕಾರ್ಯಕ್ರಮ ಮೂರು ಅಥವಾ ನಾಲ್ಕನೇ ವಾರ ನಡೆಯುವುದು ವಾಡಿಕೆ. ಆದರೆ ಈ ಬಾರಿ ಮಹಿಳಾ ದಿನಾಚರಣೆಯಂದೇ ಕಾರ್ಯಕ್ರಮ ಆಯೋಜಿಸಬೇಕೆಂದು, ಕೇವಲ ಒಂದು ದಿನ ಮುಂಚಿತವಾಗಿ ನಿರ್ಧರಿಸಿದಾಗ ಎಲ್ಲ ಆರು ಜನ ಮಹಿಳಾ ಸದಸ್ಯರೂ ತಕ್ಷಣವೇ ಸಕಾರಾತ್ಮಕವಾಗಿ ಸ್ಪಂದಿಸಿ, ಪ್ರತಿಯೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯ ಬಗ್ಗೆ ಮಾತನಾಡಲು ಒಪ್ಪಿಕೊಂಡಿರುವುದು ನಮ್ಮ ವೇದಿಕೆಯ ಘನತೆಯನ್ನು ಹೆಚ್ಚಿಸಿದೆ' ಎಂದು ಹೇಳಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ರವಿ ಕುಸಬಿಯವರು ಕಾರ್ಯಕ್ರಮದ ಅಧ್ಯಕ್ಷರು, ಉಪನ್ಯಾಸಕರು ಹಾಗೂ ಸಭಿಕರನ್ನು ಸ್ವಾಗತಿಸಿದರು. ನಂತರ ವಿವಿಧ ಉಪನ್ಯಾಸಕರು ಈ ಕೆಳಕಂಡ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿದರು.

1. ವೇದಕಾಲದ ಮಹಿಳೆಯರು – ಶ್ರೀಮತಿ ಜಯಂತಿ ಮನೋಹರ್
2. ವಿಜ್ಞಾನ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ – ಶ್ರೀಮತಿ ಜಿ.ವಿ. ನಿರ್ಮಲ
3. ಕನ್ನಡ ಸಾಹಿತ್ಯ ಹಾಗೂ ಮಹಿಳೆ – ಶ್ರೀಮತಿ ಎಲ್. ಗಿರಿಜಾ ರಾಜ್
4. ಕರ್ನಾಟಕದ ವಿಶೇಷ ಮಹಿಳೆ – ಶ್ರೀಮತಿ ಶಾಂತಾ ನಾಗಮಂಗಲ
5. ಕ್ರೀಡೆಗಳಲ್ಲಿ ಮಹಿಳೆಯರು – ಶ್ರೀಮತಿ ರೇಣುಕಾ ದೇಸಾಯಿ
6. ಕನ್ನಡದ ಸಣ್ಣ ಕತೆಗಾರ್ತಿಯರು – ಶ್ರೀಮತಿ ಟಿ.ಎಸ್. ಶ್ರವಣ ಕುಮಾರಿ

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶ್ರವಣಕುಮಾರಿಯವರು ಇಡೀ ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿದರಲ್ಲದೆ ಕನ್ನಡದ ಸಣ್ಣ ಕತೆಗಾರ್ತಿಯರ ಬಗ್ಗೆ ತಮ್ಮ ಉಪನ್ಯಾಸವನ್ನೂ ಮಾಡಿದರು.





ವೇದಿಕೆಯ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಮಾತನಾಡಿ, ಕೇವಲ 24 ಗಂಟೆಗಳ ಅವಧಿಯಲ್ಲಿ ನಿರ್ಧರಿಸಿ, ಎಲ್ಲರನ್ನೂ ಸಂಪರ್ಕಿಸಿ ಏರ್ಪಡಿಸಿದ ಈ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿದೆ ಎಂದು ಹೇಳಿದರಲ್ಲದೆ, ಇಂದು ಇಡೀ ದಿನ ನಮ್ಮ ವಾಟ್ಸಾಪ್ ವೇದಿಕೆಯನ್ನು ಮಹಿಳೆಯರನ್ನು ಕುರಿತ ಬರಹಗಳ ಪ್ರಸ್ತುತಿಗೇ ಮೀಸಲಾಗಿಡಲಾಗಿತ್ತು. ಇದಕ್ಕೆ ಸ್ಪಂದಿಸಿದ ಅನೇಕರು ಉತ್ತಮ ಲೇಖನ, ಕವನಗಳನ್ನು ಬರೆದಿದ್ದಾರೆ. ಇಂದಿನ ಉಪನ್ಯಾಸದಲ್ಲಿ ಓದಿದ ಲೇಖನಗಳೂ ಸೇರಿದಂತೆ, ವಾಟ್ಸಾಪ್ ವೇದಿಕೆಯಲ್ಲಿ ಮೂಡಿಬಂದ ಬರಹಗಳನ್ನೂ ಸೇರಿಸಿ ಒಂದು ವಿಶೇಷ ಪಿಡಿಎಫ್ ಸಂಚಿಕೆಯನ್ನು ಹೊರತರಲಾಗುವುದು ಎಂದರು. ಅತ್ಯಂತ ಕ್ಷಿಪ್ರವಾಗಿ ವಿವಿಧ ವಿಷಯಗಳನ್ನು ಅಧ್ಯಯನ ಮಾಡಿ, ಬರೆದುಕೊಂಡು ಬಂದು ಉಪನ್ಯಾಸ ನೀಡಿದ ಹಾಗೂ ವಾಟ್ಸಾಪ್ ವೇದಿಕೆಯಲ್ಲಿ ಪ್ರಸ್ತುತಪಡಿಸಿದ ಎಲ್ಲ ಬರಹಗಾರರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಕೊನೆಯಲ್ಲಿ ಶ್ರೀ ಶ್ರೀರಂಗರಾಜನ್ ಅವರು ಎಲ್ಲರಿಗೂ ವಂದಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಮಾರು ಒಂದೂವರೆ ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ಸಮಯಾಭಾವದಿಂದ ಪ್ರತಿಯೊಬ್ಬ ಉಪನ್ಯಾಸಕರೂ ಕೇವಲ ಹತ್ತು ನಿಮಿಷಗಳ ಅವಧಿಯಲ್ಲಿ ಅತ್ಯಂತ ಸಂಕ್ಷಿಪ್ತವಾಗಿ ತಂತಮ್ಮ ವಿಷಯಗಳನ್ನು ಮಂಡಿಸಬೇಕಾಯಿತು. ಅವರೆಲ್ಲರ ವಿಸ್ತೃತ ಲೇಖನಗಳನ್ನು ಮಹಿಳಾ ದಿನಾಚರಣೆಯ ಅಂಗವಾಗಿ ಹೊರತರಲಿರುವ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಇದಲ್ಲದೆ, ಕಾರ್ಯಕ್ರಮದ ಸಂಪೂರ್ಣ ಚಿತ್ರಣ ನಮ್ಮ ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ಲಭ್ಯವಿದೆ.

***

ಕವಿಮನ

ಚತುರ ಸಮರ

ಒಂದು ಒಂದು ಎರಡು
ಬಣ್ಣ ಎರಡು, ಬಣವೆರಡು.
ಎರಡು ಎರಡು ನಾಲ್ಕು
ಚೌಕಾಕಾರದ ಮಣೆ ಹಾಕು.

ನಾಲ್ಕು ನಾಲ್ಕು ಎಂಟು
ತಂಡಕ್ಕೆ ಎಂಟೆದೆ ಭಂಟರೆಂಟು.
ಎಂಟು ಎಂಟು ಹದಿನಾರು
ದಳವೊಂದರಲ್ಲಿವರೇ ಆಟಗಾರರು

ಹದಿನಾರು ಹದಿನಾರು ಮೂವತ್ತೆರಡು
ಮಣೆಯಲಿ ಕಾಯಿ ಹರಡು.
ಮೂವತ್ತೆರಡು ಮೂವತ್ತೆರಡು ಅರವತ್ನಾಲ್ಕು
ವಿದ್ಯೆ ಇರುವಷ್ಟೆ ಮನೆಗಳಲ್ಲಾಡಿ ಗೆಲ್ಲಬೇಕು.

ಒಂದೊಂದೇ ಹೆಜ್ಜೆ ಇಡುವ ರಾಜ ಏಕೆಂದು ನಾ ಕಾಣೆ
ಎಲ್ಲಾ ದಿಕ್ಕಲ್ಲೂ ಚಲಿಸುವ ರಾಣಿಯೇ ಜಾಣೆ.
ಕರ್ಣಯವಾಗಿಯೇ ನಡೆವುದೋ ಅದು ಒಂಟೆ
ನೇರವಾಗಿ ನಡೆವ ಗಜವ ತಡೆಯುವುದುಂಟೇ?

ಎರಡೂವರೆ ಮನೆ ದಾಟಿ ಜಿಗಿವುದೋ ಹಯ
ಉಪಾಯದಿಂದ ನಡೆಸು ನಿನ್ನ ಕಾಯ.
ಆತುರ ಪಡದ ಚತುರನಿಗೆ ದಕ್ಕುವ ಜಯ
ಯಾವ ಆಟವೆಂದು ಊಹಿಸಬಲ್ಲೆಯಾ?

– ಸ್ನೇಹ ಶಶಿಧರ್
05.03.2025

ಮನಸೇ...

ಮನಸೇ ಓ ಮನಸೇ ನೀ
ಜನಿಸಿದ ಬಗೆ ಹೇಗೆ
ನಾ ಹುಟ್ಟಿದಾಗ ಜೊತೆಯಿರಲಿಲ್ಲ
ನನಗಿಂತ ಶೀಘ್ರ ಜೊತೆಯಲ್ಲೇ ಬೆಳೆದೆಯಲ್ಲ

ನೀನಿರದಿದ್ದಾಗ ನಮಗೆಂದರು ದೇವರು
ನೀನಮ್ಮ ಹೊಕ್ಕಾಗ
ನಾವಾದೆವು ಮಾನವರು

ಅಪರಂಜಿಯಾದ ನನ್ನ ಅಪಹರಿಸಿದೆಯಲ್ಲ
ಉಪಕಾರ ನೀ ಮಾಡಲಿಲ್ಲ
ಹಪಹಪಿಸಿ ನಾ ನೊಂದೆನಲ್ಲ

ಪರಿಸರದ ವಿಷಯಗಳ ನನ್ನಲಿ ತುಂಬಿ
ವಿಷಯಗಳೇ ಮನಸಾಯಿತವುಗಳ ನಂಬಿ
ಪರಿಸರದ ಸಂತೋಷ ನಿನ್ನ ಸಂತೋಷ
ಪರಿಪರಿಯ ದುಃಖಕೆ
ಕಂಡಿತು ನಿನ್ನಲೂ ದೋಷ

ವಿಷಯಗಳು ಒಳಹೊಕ್ಕು
ಮನಸಾಗುವುದಾದರೆ
ವಿಷಯಗಳು ಒಳ ಹೋಗದಿರೆ
ಮನಸಿಗೆ ನೆಲೆ ಇಲ್ಲ ಬರಿ ಶೂನ್ಯ ಒಳಗೆಲ್ಲ

ವಿಷಯಗಳ ದೂರವಿಡು
ಮನಸಿಗೆ ನೆಲೆ ಕೊಡದಿರು
ಅದೇ ಧ್ಯಾನ ಅದೇ ಮೌನ
ಬೇಡವಾದರೂ ಇದೇ ಜೀವನ

– ರಂ.ನರಸಿಂಗರಾವ್
12.03.2025

ಕವಿಮನ

ಕೈ ಹಿಡಿದು ನಡೆಸೆ ಮಾನಿನಿ

ಮನೆ ಬೆಳಗೋ ಮಾನಿನಿಯೆ
ನೀ ನೋಡೆಯಾ
ಮನುಕುಲವ ಕಣ್ತೆರೆಸಿ
ಕಾಪಾಡೆಯಾ

ಭಿತ್ತಿಯೊಳು ಬಂಧಿಯಾಗಿ
ಕಳೆದೆ ಶತ ಶತಮಾನ
ಪುರುಷನಾ ನೆರಳಲಿ ನರಳುತ
ಹಂಬಲಿಸಿ ಬಿಡುಗಡೆಗಾಗಿ

ಭಿತ್ತಿಯೊಳು ವಿದ್ಯೆ ಧಾರೆಯೆರೆದು
ಭೇದವ ತೋರದೆ ಹಾಲುಣಿಸಿದೆ
ಮನೆ ಮನವ ಅರಳಿಸಿ ಕಣ್ಣಾದೆ ನೀ
ನಿಸ್ವಾರ್ಥ ಸೇವೆಗೆ ಮುಡಿಪಾದೆ

ಶೋಷಣೆಯ ಹತ್ತಿಕ್ಕಿ ವಿದ್ಯೆ ಗಳಿಸಿ
ಸಮಾನತೆ ಪಡೆದು ಖ್ಯಾತಳಾದೆ
ಮನೆಯೀಗ ಬರಿದಾಯ್ತು ನೀನಿಲ್ಲದೆ
ಸೂತ್ರವಿರದ ಗಾಳಿಪಟದಂತೆ

ಗಂಡು ಹೆಣ್ಣೆಂಬ ಭೇದವನಳಿಸದೆ
ಸಮಾನತೆಯ ಕೆಲಸ ತಿಳಿಸದೆ
ಒಳಗೂ ಹೊರಗೂ ದುಡಿವ ಎತ್ತಾದೆ
ಒಳ ಹೊರಗೆ ದುಡಿಮೆ ನೀ ಕಲಿಸೆಯಾ

ಅಕ್ಕರೆಯ ಮಕ್ಕಳಲಿ ತಿದ್ದಿ ತೀಡುತ
ಬುದ್ಧಿ ಹೇಳುವರಾರು ನಿನ್ನ ವಿನಃ
ಸಂಸ್ಕೃತಿ ಸೌರಭ ಅರಳಿಸುವರಾರು
ಸುಶಿಕ್ಷಿತ ಸಮಾಜ ಬೇಕಲ್ಲವೆ

ದಂಡಿಸು ದುರ್ನಡೆಯ ಕಂಡಲ್ಲಿ
ಮಂಡಿಸು ಪ್ರೇಮ ಸಂದೇಶವ
ಖಂಡಿಸು ಅತ್ಯಾಚಾರ ಅನಾಚಾರಗಳ
ವಂದಿಸುವಂತಾಗು ಜಗದ್ವ್ಯಾಪಿಯಾಗು

– ಕಮಲಾಕ್ಷಿ
19.03.2025

ಪರಮಾರ್ಥ

ಆಗಸುವ ದಿಟ್ಟಿಸುತ
ಧೇನಿಸುತ ಕುಳಿತೆ
ಈ ಬಾಳಿಗರ್ಥವೇನೆಂದು
ನಗೆಮಿಂಚು ಚೆಲ್ಲುತ್ತ
ಕಾಲಡಿಯಲಿ ಚಿಗುರಿತ್ತು
ಮುದ್ದು ಸಸಿಯೊಂದು

ಸಕ್ಕರೆ ಕಣ ಹೊತ್ತುಕೊಂಡು
ಬಿರಬಿರನೆ ಸಾಗಿರುವ
ಇರುವೆ ಸಾಲು ಸಾಲು
ಪೊಟರೆಯಿಂದ ಇಣುಕುತ್ತ
ಛಂಗನೆ ಜಿಗಿಯುತ ಬಂದ
ಪುಟ್ಟ ಪುಟ್ಟ ಅಳಿಲು

ದಿನಕರನ ಕೆಂಪು ಕಿರಣ
ಬಂಗಾರದ ತೋರಣ
ಕಾಮನಬಿಲ್ಲಿನ ಕಣ್ಣಲಿ
ಮೆರೆದ ಸಪ್ತವರ್ಣ
ತಾರಗಳ ತೋಟದಲ್ಲಿ
ತಂಪೆರೆದ ಶಶಿಕಿರಣ

ಅರ್ಥ ಅರಸುವುದು ವ್ಯರ್ಥ
ಬದುಕುವುದೇ ಪರಮಾರ್ಥ
ಕ್ಷಣಕ್ಷಣವೂ ಇರಬೇಕು
ಮೈಮನ ಜೀವಂತ
ಕರ್ಮವ ಕಳೆಯುತ
ಕರಗಲು ಬದುಕು ಪ್ರಶಾಂತ

– ಬಿ.ಎಸ್. ಶ್ರೀನಿವಾಸ್
09.04.2025

ಕವಿಮನ

ಸುರತಕೆ ಸುಪ್ಪತ್ತಿಗೆ

ಮನುಷ್ಯರನೆಸದು ಮಸಣದಲ್ಲಿ
ರಕ್ಕಸರು ಸುಖವಾಗಿ ಅರಮನೆಯಲ್ಲಿ
ಹೆಣವಾದವರು ಅರೆಸತ್ತವರು ಸೆರೆಮನೆಯಲ್ಲಿ
ಧೂಳು ತುಂಬಿದೆ ಎಲ್ಲೆಡೆಯಲ್ಲಿ
ಮೈದಾನಕೆ ರಸ್ತೆಯಲ್ಲಿ

ಕಿರಿಯುವ ಹಲ್ಲುಗಳು ಬಾಚಿವೆ ತುಟಿಗಳಾಚೆ
ಕುಲಕುವ ಕೈಗಳಿಂದ ಧುಮುಕುತಿದೆ ಕಣ್ಣೀರು
ಹೊಳೆವ ಪಾಪಾಸುಗಳು
ಪಿಪಾಸುಗಳ ಕಣ್ಣಲ್ಲಿ ಪ್ರತಿಫಲಿಸುತ್ತಿವೆ
ಅಲ್ಲೇನು.. ಅಲ್ಲೇನು... ಪಾಪೆಯೊಳಗೆ
ತಕ್ಷಕನ ಸೀಳು ನಾಲಗೆಯ ಬೆಂಕಿಯುಗುಳು
ಭಸ್ಮವೆಲ್ಲೆಡೆ
ಅಗ್ನಿಪರ್ವತದಡಿಯ "ಪಾಂಪೆ"
ಹಿರೋಷಿಮಾ ನಾಗಸಾಕಿ

ಕಾದ ಬಾಂಡಲೆಯಲ್ಲಿ ಅಂಡಲೆಯವರು
ಸಿಡಿದು ಬೀಳುತ್ತಿದ್ದಾರೆ ಅರಳುಗಳಂತೆ
ಚೆಲ್ಲಾಡಿದೆ ಉಂಡೆಸೆದ ಎಲೆಗಳು

ಆಹಾ... ಇವರಿಬ್ಬರದೆಂಥಾ ಗೆಳೆತನ
ಕರಗಿತೇ ಶತಮಾನದ ಹಗೆತನ
ತಣ್ಣಗಿನ ತಿಸರಾಟ ಕೊಸರಾಟ
ಕದ್ದ ಕಂಬಳಿ ಹೊಡೆದ ಉಂಬಳಿ
ಇವರ ಉಗ್ರಾಣದಲಿ ದಾಸ್ತಾನು

ಆಹಾ... ಏನಪ್ಪುಗೆ
ನಾಚುತ್ತಾನೆ ಧೃತರಾಷ್ಟ್ರ
ಕಂಚಿನ ಬೊಂಬೆಗಳಿಲ್ಲ
ಎಲ್ಲಾ ಸಜೀವ ಜೀವಗಳು

ಮಡಿಯೆಲ್ಲ ಹುಡಿಯಾಗಿ ಏಲವಿಲಿಸಿದೆ
ಜಗದಂಗಳವೆ ಸುರತಕೆ ಸುಪ್ಪತ್ತಿಗೆಯಾಗಿದೆ
ಥೋ... ಎಂದು ಗುಟರಿಟ್ಟು ಗಗನದಿಂ ಬರುವ
ಗಂಗೆಯೂ ತೊಳೆಯಳು ಇವರ ಸ್ವಾರ್ಥರಂಜಿತ ಲೊಟ್ಟೆ
ಲೊಳಲೊಟ್ಟೆ ಲೋಳೆಯಾಟ

ಕೊಪ್ಪರಿಗೆ ಬಳಸಿದ ಕಾಳನಾಗನ ಪರಿ
ಪರಿತಪಿಸುವವರ ಗದರಿ
"ಜಾಗಾ" ಬಿಡೋ ನಾನಲ್ಲೇ ಇರುವೆ
ಕಾಯುವೆ ಕಾದದಂತೆ ಕಾದಲನಾಗಿ
ನಿನ್ನದೆಂದು ನೀ ನುಡಿವ ನೆಲ

ಎತ್ತಿದರೆ ಉಸಿರು
ಹೊಸಕುವೆ ಕರಿ ಇರುವೆಯಂತೆ
ಈ ಭೂಮಿ ಆ ಕಡಲು ಮೇಲಾಕಾಶ
ಒಳಗಿರುವ ಖನಿಜ ಕಣಜವೆನ್ನ ಗುಕ್ಕು
ಮರು ನುಡಿಯದೆ ಕಕ್ಕು

ಅಗೋ ಅಲ್ಲಿ ಹಳದಿ ಬೆಟ್ಟದ ಮೇಲೆ
ನಾವಿಬ್ಬರೂ ಕೂಡಿ
ಹಾರಿಸುವೆವು ಬಿಳಿಯ ಬಾವುಟ
ಹಂಚಿಕೊಳ್ಳುವೆವು ನೊಬಲ್ ಶಾಂತಿ ಪಾರಿತೋಷಕ

ಇಂದ್ರನಂತೆ ಕಳ್ಳುಡಿಗೆಯಲಿ ರಮಿಸುವುದಿಲ್ಲ
ಮುಖವಾಡವಿಲ್ಲ
ಬಿಡುಬೀಸಾಗಿ ತೋಳಿಗೆ ತೋಳ ಕೂಡಿಸಿ ಅಪ್ಪುವೆವು
ಜಗವನ್ನು ನಿಮಗೆ ಕೋಳವ ತೊಡಿಸಿ
ಇದು ಇಪ್ಪತ್ತೊಂದನೆಯ ಶತಮಾನ
ಹಳೆಯ ಕಂಪನಿ ವಸಾಹತುಗಳು ಮುಚ್ಚಿವೆ
ರೆಕ್ಕೆ ಬಿಚ್ಚಿವೆ ಸ್ವಾತಂತ್ರ್ಯವೆಂಬ ಭಾವದ ಬಂಟರೆ
ಬಗ್ಗಿ ನೋಡಿಕೊಳ್ಳಿ
ದಬ್ಬೆ ಕಟ್ಟಿದ ನಿಮ್ಮ ಕುಂಟು ಕಾಲುಗಳ

ನಿಮ್ಮ ಮಾತುಗಳನ್ನು ನಾವೇ ಆಡುತ್ತೇವೆ
ತೊಂದರೆ ಬೇಡ ನೆನಪಿಟ್ಟುಕೊಳ್ಳಿ
ಆಗಲೂ ಈಗಲೂ ರಕ್ಕಸ ಸಿಡಿತಲೆಗಳ
ಮೀಸೆಯ ಮೇಲಿಟ್ಟುಕೊಂಡವನೇ ಗಂಡಸು.

– ಬೆಂ.ಶ್ರೀ. ರವೀಂದ್ರ
02.04.2025

ಕವಿಮನ

ಖಾಲಿಯಾಗಬೇಕು

೧
ಮೌನವಾಗಿರಲು ಬಿಡದ
ಆಮಿಷಗಳಿಗೆ ಶರಣಾದೆ
ಗೊಂದಲಗಳಿಗೆ ಬಿದ್ದೆ

ಖಾಲಿಯಾಗಲೆಂದು
ತೋಡಿಕೊಂಡಷ್ಟೂ
ತುಂಬಿಕೊಳ್ಳುತ್ತಾ ಹೋದೆ

೨
ಅಂದು ಅವನ ಮಾತುಗಳ ಕೇಳಿ ಖುಷಿಯಾಗಿತ್ತು
ನಾನು ಬರೆಯಬೇಕೆಂದಿದ್ದ ಕವನದ ಸಾಲುಗಳೆಲ್ಲ
ಅಲ್ಲೇ ಚದುರಿ ಬಿದ್ದಿದ್ದವು
ಹೆಕ್ಕಿ ಆರಿಸಿಕೊಂಡೆ.

೩
ಅವನು ಹೇಳಿದ್ದ-
ಹರಿವ ನದಿ ದಂಡೆ ಕೂತು ತಣಿ
ಹೂಬಿಟ್ಟ ತೋಟದಲಿ ಅಡ್ಡಾಡು

ಹರಿದ ನದಿ ಅರಳಿದ ಹೂವು
ಏನಾಗುವುದು ಮುಂದೆ ಎಂದೆ

ನದಿ ಹರಿದು ನೆಲ
ತಣಿಯುವುದು
ಹೂವು ಬೀಜವಾಗಿ
ಮರವಾಗಿ ಹಣ್ಣಾಗಿ
ಹಕ್ಕಿಯ ಧ್ವನಿಯಾಗಿ
ಹಾಡಾಗುವುದು

ಹೊತ್ತ ದೇಹಕ್ಕಿಂತ ಹೆಚ್ಚು ಮುಖ್ಯ
ಆಗೊಮ್ಮೆ ಈಗೊಮ್ಮೆ ಗೋಚರಿಸುವ ಆತ್ಮ.

೪
ಮನಸ್ಸು ಹರಿದಾಡುವ ಜಾಡಿನ
ಕ್ರಾಸಿನಲ್ಲಿ ಅವನು
ಎದುರಾಗಬಹುದೆ ಮತ್ತೊಮ್ಮೆ
ಯೋಚಿಸುತ್ತಾ ಇದ್ದೇನೆ

– ಪೋಲೇನಹಳ್ಳಿ ರಮೇಶ್ (ಪೋರ)
26.03.2025

ಗೊರಕೆ ಪುರಾಣ

- ಸಿಂಧು ಹರಿಥಸ್

ಒಮ್ಮೆ ದೇವಲೋಕದಲ್ಲಿ ದೇವತೆಗಳು, ಋಷಿಗಳು, ಗಂಧರ್ವರು, ಯಕ್ಷ- ಕಿನ್ನರರು ಎಲ್ಲರಿಗೂ ಒಂದು ಸ್ನೇಹ ಕೂಟವನ್ನು ಏರ್ಪಡಿಸಲಾಗಿತ್ತು. ಎಲ್ಲರೂ ಸಂತೋಷದಿಂದ ಕಾಲ ಕಳೆಯುತ್ತಿದ್ದರು. ಒಬ್ಬ ಯಕ್ಷನು ಮಾತ್ರ ಬಿಟ್ಟ ಬಾಯಿ ಬಿಟ್ಟ ಹಾಗೆ ಏನನ್ನೋ ನೋಡುತ್ತ ನಿಂತಿದ್ದನು. ಯಕ್ಷನು ದಿಟ್ಟಿಸಿ ನೋಡುತ್ತಿರುವುದನ್ನು ಗಮನಿಸಿದ ನಾರದರು, "ಎಲೈ ಯಕ್ಷನೇ, ಏನು ಹಾಗೇ ನೋಡುತ್ತಿರುವೆ?" ಎಂದು ಪ್ರಶ್ನಿಸಿದರು.

"ಮುನಿವರ್ಯರೆ, ದೇವಲೋಕಕ್ಕೆ ಇದು ನನ್ನ ಮೊದಲ ಭೇಟಿ. ದೇವತೆಗಳ ಮುಖ ಚಹರೆ, ಚಿಹ್ನೆ, ವಾಹನ ಇತ್ಯಾದಿಗಳನ್ನು ನೋಡಿ ಅವರನ್ನು ಗುರುತಿಸಿದೆ. ಆದರೆ, ಅದೋ ನೋಡಿ ಅಲ್ಲಿ ಕುಳಿತಿರುವಳಲ್ಲ ಆ ದೇವಿ ಯಾರು? ಅವರನ್ನು ನೋಡುತ್ತಲೇ ಮನಸ್ಸಿಗೆ ಶಾಂತಿ ದೊರೆಯುತ್ತಿದೆ. ಆಯಾಸವೆಲ್ಲಾ ಕಳೆಯುವ ಭಾವನೆ. ಆಕೆಯ ಬಳಿ ಇರುವ ಆ ಪುಟ್ಟ ಹುಡುಗ ಯಾರು? ಒಮ್ಮೊಮ್ಮೆ ಆಕೆಯನ್ನು ಹಿಂಬಾಲಿಸುತ್ತಿದ್ದಾನೆ, ಮತ್ತೆ ನೋಡಿದರೆ ಅವನು ಮಾಯ! ಅವರಿಬ್ಬರ ಬಗ್ಗೆ ತಿಳಿಯುವ ಕುತೂಹಲ. ಅವರ ಬಗ್ಗೆ ತಿಳಿಸುವಿರಾ?" ಎಂದು ಕೇಳಿಕೊಂಡನು.

ಯಕ್ಷನು ವರ್ಣಿಸಿದ ದೇವಿ ಮತ್ತು ಆ ಹುಡುಗನನ್ನು ನೋಡಿ, ನಾರದರು ನಗುತ್ತಾ ಹೇಳಿದರು.

"ಯಕ್ಷನೇ, ಕೇಳು. ಆ ದೇವಿಯೇ, ಸಕಲ ಜೀವರಾಶಿಗಳಿಗೆ ಶಾಂತಿ ನೀಡಿ, ಪುನರುತ್ಸಾಹ ಕರುಣಿಸುವ ನಿದ್ರಾದೇವಿ! ಅವಳ ಬಳಿ ಓಡಾಡುತ್ತಿರುವ ಹುಡುಗ ಅವಳ ಪುತ್ರ ಗೊರಕೆ. ನಿನಗೆ ಗೊರಕೆ ಪುರಾಣವನ್ನು ಹೇಳುತ್ತೇನೆ ಕೇಳು!" ಎಂದು ಗೊರಕೆ ಪುರಾಣವನ್ನು ವಿವರಿಸಿದರು.

ಭೂಲೋಕದಲ್ಲಿ ಶೇಖರ ಎಂಬ ಒಬ್ಬ ಹುಡುಗನಿದ್ದ. ಅವನ ಮೇಲೆ ನಿದ್ರಾದೇವಿಯ ಕೃಪೆ ಯಥೇಚ್ಛವಾಗಿತ್ತು. ನಿದ್ರಾದೇವಿಯನ್ನು ಗೊರಕೆಯು ಸಾಮಾನ್ಯವಾಗಿ ಹಿಂಬಾಲಿಸುತ್ತಿದನು. ಹಾಗಾಗಿ ಶೇಖರ ನಿದ್ರೆ ಮಾಡಿದಾಗೆಲ್ಲಾ ಗೊರಕೆ ಅವನನ್ನು ಬಿಡುತ್ತಿರಲಿಲ್ಲ. ಶೇಖರನ ಸುತ್ತಲಿನ ಜನರಿಗೆ ಅವನ ಗೊರಕೆಯಿಂದ ಸಮಸ್ಯೆ ಉಂಟಾಗುತ್ತಿತ್ತು!

ಮದುವೆ ವಯಸ್ಸಿಗೆ ಬಂದ ಶೇಖರನನ್ನು ಅವನ ತಾಯಿ ಸರೋಜಮ್ಮ, ಪಕ್ಕದ ಊರಿಗೆ ಹುಡುಗಿ ನೋಡಲು ಕರೆದು ಕೊಂಡು ಹೋಗುತ್ತಿದ್ದರು. ರೈಲಿನಲ್ಲಿ ಶೇಖರನಿಗೆ ನಿದ್ರೆಯ ಮಂಪರು ಹತ್ತಿತು. ಗೊರಕೆಯೂ ಶುರುವಾಯಿತು. ಸಹ ಪ್ರಯಾಣಿಕರೊಬ್ಬರು, "ಕಿವಿ ತೂತಾಗ್ತಿದೆ. ನಿಮ್ ಹುಡ್ಗಂಗೆ ಗೊರ್ಕೆ ನಿಲ್ಸೋಕೆ ಹೇಳಿ" ಎಂದು ಸಿಡುಕಿದರು. ಮಗನ ಗೊರಕೆ ಅವನ ಹಿಡಿತದಲ್ಲಿಲ್ಲ ಎಂದು ತಿಳಿದಿದ್ದ ಸರೋಜಮ್ಮ, ಮೇಲಿದ್ದ ಸೂಚನೆಯತ್ತ ಬೆರಳು ಮಾಡಿ, "ಅಲ್ನೋಡಿ, ರೈಲಿನ ಪ್ರಯಾಣದಲ್ಲಿ ಧೂಮ್ರಪಾನ, ಮದ್ಯಪಾನ ನಿಷೇಧಿಸಿದೆ ಅಂತ ಬರೆದಿದೆ. ಗೊರಕೆ ನಿಷೇಧಿಸಿದೆ ಅಂತ ಬರ್ದಿಲ್ಲ. ಅಡ್ಜಸ್ಟ್ ಮಾಡ್ಕೊಳ್ಳಿ" ಅಂತ ದಬಾಯಿಸಿಬಿಟ್ಟರು.

ಶೇಖರ ಊರು ತಲುಪಿ, ಲತಾಳನ್ನು ಭೇಟಿ ಮಾಡಿ, ಪರಸ್ಪರ ಒಪ್ಪಿ, ಮದುವೆಯೂ ಆದರು. ಗಂಡಹೆಂಡತಿ ಮೊದಲ ಬಾರಿ ಮನೆದೇವರ ದರ್ಶನಕ್ಕೆ ಬಸ್ಸಿನಲ್ಲಿ ಹೋಗುತ್ತಿದ್ದರು. ಅಲ್ಲೂ ಶೇಖರನ ಗೊರಕೆ ಶುರು! ಅವನ ಪಕ್ಕದಲ್ಲಿ ಕುಳಿತಿದ್ದ ಮುದುಕಿಯೊಬ್ಬರು, "ಅಯ್ಯೋ ಪಾಪ. ಬಸ್ನಲ್ಲಿ ಬಂದು ಮಲಗಿದ್ದಾನೆ. ಮನೇಲಿ ಹೆಂಡ್ತಿ ಕಾಟ, ನಿದ್ದೆ ಮಾಡಕ್ಕಾಗಲ್ಲ ಅನ್ಸತ್ತೆ" ಎಂದು ಲತಾಳ ಬಳಿಯೇ ಅನುಕಂಪ ವ್ಯಕ್ತಪಡಿಸಿದರು. ಲತಾಳಿಗೆ ಶೇಖರನ ಗೊರಕೆ ಮೇಲಿನ ಬೇಸರ ಒಂದೆಡೆಯಾದರೆ ಮುದುಕಿಯ ಮಾತಿನಿಂದ ಕೋಪ ಇನ್ನೊಂದೆಡೆ.

ಇದೇ ರೀತಿ ಎಷ್ಟೋ ಸನ್ನಿವೇಶಗಳಲ್ಲಿ ಗೊರಕೆಯಿಂದಾಗಿ ಹಲವು ಮಾತುಗಳು, ನಿಂದನೆಗಳು ಬಂದ ಕಾರಣ ಇದಕ್ಕೆ ಪರಿಹಾರ ಹುಡುಕಲು ಶೇಖರ ನಾಟಿ ವೈದ್ಯರ ಬಳಿ ಹೋದ.

"ಇದೇನಿಲ್ಲ ಬುಡಿ. ಇನ್ನೂ ಎಂತೆಂಥದೋ ರೋಗ ವಾಸಿ ಮಾಡಿಲ್ಲ ನಾನು. ಒಂದ್ ತಿಂಗ್ಳು ಕೊಡಿ ಸಾಕು. ಗೊರ್ಕೆ ಓಡೋಂಟೋಯ್ತದೆ" ಎಂದು ಹೇಳಿ ಯಾವುದೋ ಬೇರಿನ ರಸ ಕೊಟ್ಟರು. ಔಷಧಿ ಕುಡಿದ ನಂತರ ಹೋಗಿದ್ದು ಶೇಖರನ ಗೊರಕೆ ಅಲ್ಲ, ಊಟದ ಮೇಲಿನ ಆಸಕ್ತಿ! ಔಷಧಿ ಸರಿಹೊಂದದೆ ಅದನ್ನು ನಿಲ್ಲಿಸಿದ.

ನಂತರ ಒಬ್ಬ ಫಕೀರನ ಬಳಿ ಉಪಾಯ ಹುಡುಕಲು ಹೊರಟ, "ಸಾಬ್, ಇದು ಶೈತಾನ್ದು ಕೆಲ್ಸ" ಅಂತ ಹೇಳಿ ನವಿಲಿನ ಗರೀಲಿ ಹೊಡೆದು, ಬೂದಿ ಎರಚಿದ ಫಕೀರ, "ಇನ್ಮೇಲ್ ನೋಡಿ ಅವಾಜ್ ಇಲ್ದೆ ನಿದ್ದೆ ಮಾಡ್ತೀರಿ" ಎಂದ. ಗೊರಕೆ ಹೋಗೋ ಬದಲು, ನಿದ್ದೆಯಲ್ಲಿ ಬೆಚ್ಚಿ ಬೀಳಲು ಆರಂಭಿಸಿದ ಶೇಖರ.

ಕಡೆಗೆ ಇದ್ಯಾವ ವಿಧಾನವೂ ಸರಿಹೋಗದೆ, ಅಲೋಪಥಿ ವೈದ್ಯರ ಮೊರೆ ಹೋದ ಶೇಖರ. "ನಿಮ್ಮ ಮೂಗಲ್ಲಿ ದುರ್ಮಾಂಸ ಬೆಳ್ದಿದೆ. ಕತ್ತರಿಸಿದ್ರೆ ಸಾಕು, ಗೊರ್ಕೆ ಮಾಯ ಆಗತ್ತೆ" ಅಂತ ಸಲಹೆ ಕೊಟ್ಟರು. ಅದೇ ರೀತಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ.

ಅರಿವಳಿಕೆಯ ಮಂಪರಿನಲ್ಲಿದ್ದ ಶೇಖರನ ಕನಸಿನಲ್ಲಿ ಸಾಕ್ಷಾತ್ ನಿದ್ರಾದೇವಿ ಬಂದಳು. ಕೆಂಗಣ್ಣಿನಿಂದ, "ಶೇಖರ, ನಿನಗೆ ನಾನು ವಿಶೇಷವಾಗಿ ಕೃಪೆಯನ್ನು ನೀಡಿದ್ದೆ. ಆಗಾಗ ಬರುತ್ತಿದ್ದ ನನ್ನ ಮಗನನ್ನು ತೊಲಗಿಸಲು ಇಷ್ಟು ಪ್ರಯತ್ನ ಪಡುತ್ತಿರುವಿಯಲ್ಲ. ಇನ್ನು ನಿನಗೆ ನನ್ನ ಅನುಗ್ರಹ ಸಿಗದು. ನಿದ್ರೆಯಿಲ್ಲದೆ ಹುಚ್ಚನಾಗುವೆ" ಎಂದು ಶಪಿಸಿದಳು.

ದೇವಿಯ ವಕ್ರದೃಷ್ಟಿಗೆ ಹೆದರಿದ ಶೇಖರನು ತನ್ನನ್ನು ಕ್ಷಮಿಸಿ, ಉದ್ಧರಿಸಲು ಪರಿಪರಿಯಾಗಿ ಬೇಡಿಕೊಂಡನು. ಪರಮ ದಯಾಳುವಾದ ದೇವಿಯು,

"ಕೊಟ್ಟ ಶಾಪ ಹಿಂಪಡೆಯುವ ಹಾಗಿಲ್ಲ. ಆದರೆ ನೀನು ಬೇಡಿಕೊಳುತ್ತಿರುವುದರಿಂದ ಷರತ್ತಿನೊಂದಿಗೆ ನಿನಗೆ ನಿದ್ರೆಯನ್ನು ಕರುಣಿಸುವೆ. ನೀನು ಹಾಗೂ ನಿನ್ನ ಮುಂದಿನ ಪೀಳಿಗೆಯವರೆಲ್ಲರೂ ನನ್ನನ್ನು ಕರೆದಾಗಲೆಲ್ಲಾ ನನ್ನ ಮಗನೂ ಜೊತೆಗೆ ಬರುತ್ತಾನೆ" ಎಂದು ಹೇಳಿ ಅಂತರ್ಧಾನಳಾದಳು.

ಮುಂದೆ ಶೇಖರ, ಅವನ ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲರೂ 'ಗೊರಕೆ ವಂಶದವರು' ಎಂದು ಪ್ರಸಿದ್ಧರಾದರು – ಇಷ್ಟು ಹೇಳಿ ನಾರದರು ಶ್ರೀಮನ್ ನಾರಾಯಣನ ಬಳಿ ಹೊರಟು ಹೋದರು.

ಈ ಕಥೆಯನ್ನು ಹೇಳಿದವರಿಗೂ, ಕೇಳಿದವರಿಗೂ ನಿದ್ರಾದೇವಿಯ ಕೃಪಾಕಟಾಕ್ಷವು ಸದಾ ಇರುವುದು ಹಾಗೂ ಒಮ್ಮೊಮ್ಮೆ ಬರುವ ಅವಳ ಮಗನನ್ನು ಪ್ರೀತಿ ಆದರಗಳಿಂದ ಸ್ವಾಗತಿಸಬೇಕು ಎಂದು ಹೇಳುವಲ್ಲಿಗೆ ಗೊರಕೆ ಪುರಾಣವು ಸಂಪೂರ್ಣವಾಯಿತು!

***

ಧೀರೋದಾತ್ತ ಮಹಿಳೆ ಅಹಲ್ಯಾಬಾಯಿ

– ಪೂರ್ಣಿಮಾ ಭಗವಾನ್

ಭಾರತದ ಚರಿತೆಯಲಿ ಹೊಳೆಯುವಾ ನಕ್ಷತ್ರ
ಸ್ತ್ರೀರತ್ನ ಅಹಲ್ಯಾ ಬಾಯಿ ಹೋಳ್ಕರ್ ಮಾತೆ
ದಾರಿಯಲಿ ಎದುರಾದ ಎಡರತೊಡರನು ಸರಿಸಿ
ಸೇರಿದಳು ಗುರಿಯನ್ನು ದಿಟ್ಟತನ ಛಲದಿಂದ

ಪತಿ ಅಳಿದ ಸುತ ಮಡಿದ ಅಳಿಯನೂ ಗತಿಸಿದನು
ಸತಿಹೋದ ಮಗಳನ್ನು ನೆನೆಯುತ್ತ ದುಃಖಿಸದೆ
ಪ್ರತಿ ನಿಮಿಷ ಹೋರಾಡಿದಳು ಪಣಕಿಡುತ ಜೀವ
ಇತಿಹಾಸ ನಿರ್ಮಿಸಿದ ವೀರವನಿತೆಯು ಅವಳು

ಮೂರು ಶತಮಾನಗಳ ಹಿಂದಿನಾ ಆಳ್ವಿಕೆಯು
ಸಾರಿ ಹೇಳಿದೆ ಧರ್ಮ ಸಂಸ್ಕೃತಿಯ ಮಹತಿಯನು
ವೈರುಧ್ಯಗಳ ಮೀರಿ ಆಳ್ವಿಕೆಯ ನಡೆಸಿದಳು
ನಾರಿ ಶಕ್ತಿಯ ಕುರುಹು ವಿಶ್ವದೆಲ್ಲೆಡೆ ನೆನಪು

ಮಾಳವ ಕುಟುಂಬದ ಸೊಸೆ ಮಲ್ಹಾರರ ಕಣ್ಮಣಿ
ಆಳ್ವಿಕೆಯು ಮೂವತ್ತು ಸುಧೀರ್ಘ ವರ್ಷಗಳು
ಬಾಳಿದಳು ಬೆಳಕಾಗಿ ಹಲವೃತ್ತಿ ನಿರತರಿಗೆ
ತಾಳ್ಮೆ ಬುದ್ಧಿಯು ಧನವು ಶಂಕರ ಕೊಡುಗೆ ಎನುತ

ನರ್ಮದೆಯ ದಡದಲ್ಲಿ ಕೋಟೆ ಕೊತ್ತಲ ಕಟ್ಟಿ
ಧರ್ಮದಲಿ ಆಳಿದಳು ಮಹಿಳೆ ಸೇನೆಯ ಮಾಡಿ
ಮರ್ಮ ನಂಬಿಕೆ ಶ್ರದ್ಧೆ ಮುಂದಾಲೋಚನೆ ನಡೆ
ಕರ್ಮವದು ನಡೆಯುವುದು ಹೂವು ಎತ್ತಿದ ಹಾಗೆ

ಕಂಪಿಸುತ್ತಿದ್ದ ಕಾಲದಲಿ ಧೃಡ ಚಿತ್ತದಲಿ
ಕಂಪೆಲ್ಲಾ ಊರಿನಲಿ ಪೆಂಪನ್ನು ಪಸರಿಸುತ
ತಂಪೆರೆದು ಬಡ ಮಧ್ಯಮ ವರ್ಗದ ಜನಗಳಿಗೆ
ಸೊಂಪಿನಲಿ ದಾನ ತನ್ನಯ ಕೊಪ್ಪರಿಗೆ ಹಣ

ಜಾಮ್ ಗೇಟನು ದಾಟಿ ನಡೆದರೇ ಮಹೇಶ್ವರ
ಓಂ ಎಂದು ಶಂಕರನ ಶಿವಲಿಂಗ ಮಾಡುತಲಿ
ಸಾಂಪ್ರದಾಯಿಕ ಪೂಜೆ ಮುಂದುವರೆಸಿದ ಮಹಿಳೆ
ನೋಂಪಿಯೊಲು ಆಡಳಿತ ವೈಖರಿಯು ಜನಸೇವೆ

ಇಪ್ಪತ್ತೊಂದು ಕ್ಷೇತ್ರದಲಿ ಶಿವನ ದೇವಾಲಯವು
ಕೊಪ್ಪರಿಗೆ ಸಂಪತ್ತು ಪೂಜೆ ನೈವೇದ್ಯಕ್ಕೆ
ಒಪ್ಪ ಓರಣದ ಸುಪ್ತ ಚೇತನದ ಧೀಮತಿಯು
ಮುಪ್ಪಡರಿದರೂ ಎದೆಗುಂದದಾ ನಡವಳಿಕೆ

ದಶಾಶ್ವಮೇಧ ಘಟ್ಟ ಕಾಶಿಯಲಿ ನಿರ್ಮಿಸುತ
ಕಾಶಿ ವಿಶ್ವನಾಥನ ಮಂದಿರಕೆ ಚೇತನವು
ಆಶ್ವಾಸನೆಯು ಕಾರ್ಯಗತವು ಕರ ದೇಣಿಗೆಯು
ತೋಷದಲಿ ವಿಸ್ತರಿಸಿ ಶಿವ ಮಂದಿರಗಳನ್ನು

ಆದರ್ಶ ನಾರಿಯೂ ಪರಿವರ್ತನೆಗೆ ಸ್ಪೂರ್ತಿ
ದೇಶದಾ ಸಂಸ್ಕೃತಿಯ ಉಳಿಸಿ ಬೆಳೆಸಿದ ಸಾಧ್ವಿ
ವೇಷಭೂಷಣ ಸರಳ ಸಾತ್ವಿಕತೆ ಮೈವೆತ್ತು
ದೇಶಸೇವೆಗೆ ಮುಡಿಪು ಈಶ ಭಕ್ತಿಯ ಕಾಯ

ಎಚ್ಚರದ ನಡೆನುಡಿಯ ಕೆಚ್ಚೆದೆಯ ಧೀಮಂತೆ
ಹಚ್ಚಿದಳು ದೀಪವನು ವೃತ್ತಿಪರರ ಬಾಳಿನಲಿ
ಮೆಚ್ಚುಗೆಯ ಸೂಸುತಲಿ ಅನುಸರಿಸಿ ಹಾದಿಯನು
ಹಚ್ಚೋಣ ದೀವಿಗೆಯ ನಿರಪೇಕ್ಷ ಭಾವದಲಿ.

***

ನನ್ನ ನೀನು ಗೆಲ್ಲಲಾರೆ

– ಸ್ನೇಹ ಶಶಿಧರ

ಹೆಸರು ಕೇಳಿದೊಡನೆ ನೆನಪಿಗೆ ಬರುವುದು ನಮ್ಮ ಅಣ್ಣಾವರು ಡಾ.ರಾಜ್‌ರವರ ಚಲನಚಿತ್ರ. ಆ ಚಿತ್ರದ ಶೀರ್ಷಿಕೆ ಗೀತೆಯಲ್ಲಿ ರಾಜಣ್ಣ ನಾಯಕಿಯಾದ ಮಂಜುಳರವರನ್ನು ಒಂದು ನೃತ್ಯದ ಪೈಪೋಟಿಗೆ ಸೆಳೆಯುತ್ತಾರೆ. ನಾ ಯಾರಿಗೂ ಕಡಿಮೆಯಿಲ್ಲವೆಂದು ಮಂಜುಳಾರವರು ಹೆಜ್ಜೆ ಹಾಕುತ್ತಾರೆ. ಹಾಡಿನ ಕ್ಲೈಮಾಕ್ಸ್‌ನಲ್ಲಿ, ಹೀರೋ ಗೆಲ್ಲಲೇಬೇಕು ಎಂಬ ಹಟದಿಂದ ಡಾ. ರಾಜ್ ತಮ್ಮ ಬಟ್ಟೆಗಳನ್ನು ಒಂದೊಂದೇ ಕಳಚುತ್ತಾ ಬರುತ್ತಾರೆ. ವಿಧಿ ಇಲ್ಲದೆ ನಾಯಕಿ ಸೋಲೊಪ್ಪುತ್ತಾಳೆ. ಚಪ್ಪಾಳೆಯ ಮಹಾಪೂರವೇ ಹರಿದು ಬರುತ್ತದೆ. ಬಟ್ಟೆ ಕಳಚುವುದು ಯಾವ ನೃತ್ಯ? ನಿಜವಾದ ಗೆಲುವು ಯಾರಿಗೆ?

ಇದೇ ಥರದ ಸನ್ನಿವೇಶದ ಒಂದು ಉಲ್ಲೇಖ ನಮ್ಮ ಪುರಾಣದಲ್ಲೂ ಬರುತ್ತದೆ. ತನ್ನ ದೇಹದ ಅರ್ಧ ಭಾಗವನ್ನೇ ಕೊಟ್ಟಿರುವ ಶಿವನಿಗೂ, ಪಾರ್ವತಿ ದೇವಿಗೂ ನೃತ್ಯದ ಸ್ಪರ್ಧೆ ನಡೆಯುತ್ತದೆ. ನೃತ್ಯದಲ್ಲಿ ಪಾರ್ವತಿಯನ್ನು ಮಣಿಸಲು ಆ ನಾಟ್ಯದ ಆದಿದೇವ ನಟರಾಜನಿಗೂ ದಾರಿ ಕಾಣದೇ, ತನ್ನ ಕಾಲನ್ನು ನೆತ್ತಿಯವರೆಗೂ ಎತ್ತಿ ಊರ್ಧ್ವ ಭಂಗಿಯಲ್ಲಿ ನಿಲ್ಲುತ್ತಾನೆ. ಶಕ್ತಿ ಮಾತೆಯೂ ಲಜ್ಜೆಯಿಂದ ಸೋಲೊಪ್ಪುತ್ತಾಳೆ.

ಹೀಗೆ ಲಜ್ಜೆ, ನಾಚಿಕೆ ಎಂಬ ಟ್ರಂಪ್‌ಕಾರ್ಡ್ ಮಾಡಿಕೊಂಡು ಹೆಣ್ಣನ್ನು ಹತ್ತಿಕ್ಕುವ ಹಾಗೆ ಕಂಡರೂ, ಹೆಣ್ಣಿಗೆ ಪೂಜನೀಯ ಸ್ಥಾನ ಕೊಟ್ಟಿರುವುದು ಗಮನಾರ್ಹ. ಪುರಾಣ ಕಾಲದಿಂದಲೂ ಉಮಾಶಂಕರ, ಲಕ್ಷ್ಮೀನಾರಾಯಣ, ಸೀತಾರಾಮ, ರಾಧಾಕೃಷ್ಣ ಎಂದು ಹೆಂಡತಿಗೆ ತಮಗಿಂತ ಅಗ್ರ ಸ್ಥಾನವನ್ನು ನೀಡಿದ್ದಾರೆ. ಹಾಗೂ ಕೌಶಲ್ಯ ನಂದನ, ಗೌರಿಪುತ್ರ, ದೇವಕಿಸುತ, ಗಾಂಗೇಯ ಎಂದು ತಾಯಿಯ ಹೆಸರಿನಿಂದಲೂ ಕರೆಯಿಸಿಕೊಂಡಿದ್ದಾರೆ. ಅಷ್ಟೇ ಯಾಕೆ, ಆಮಂತ್ರಣ ಪತ್ರದಲ್ಲೂ ನಾವು ಬರೆಯುವುದು ಶ್ರೀಮತಿ ಮತ್ತು ಶ್ರೀ ಅಲ್ಲವೇ? ಈಶ್ವರನು ಸತಿಗಾಗಿ ಅರ್ಧದೇಹವನ್ನೇ ನೀಡಿದ. ಲಕ್ಷ್ಮಿಗಾಗಿ ವಿಷ್ಣು ತನ್ನ ವಕ್ಷಸ್ಥಳವನ್ನು ಬಿಟ್ಟಿದ್ದಾನೆ. ರಾಮನು ಮಡದಿಗಾಗಿ ಮಹಾಯುದ್ಧವನ್ನೇ ನಡೆಸಿರುವುದು ನಮಗೆಲ್ಲ ತಿಳಿದೇ ಇದೆ.

ಈಗೀಗ ಹೆಣ್ಣಿನ ಸಬಲೀಕರಣದ ಕಿಚ್ಚು ಜೋರಾಗಿದೆ. ಈ ನಿಟ್ಟಿನಲ್ಲಿ ದೂರದರ್ಶನದಲ್ಲಿ ಪ್ರಸಾರವಾಗುವ ಕೆಲವು ಜಾಹಿರಾತುಗಳು ಸಮಾಜದ ಬದಲಾಗುತ್ತಿರುವ ದೃಷ್ಟಿಕೋನವನ್ನು ಸೂಚಿಸುತ್ತದೆ. ಕೆಲವು ನಿದರ್ಶನಗಳನ್ನು ನೋಡೋಣ:

~ ಮಗಳು (ಹೆಣ್ಣು) ಆಟ ಮುಗಿಸಿಕೊಂಡು ಬರುತ್ತಾಳೆ. ಅವಳ ಮಲಿನ ಬಟ್ಟೆಗಳನ್ನು ತಂದೆ (ಗಂಡು) ಒಗೆಯುತ್ತಾನೆ.

~ ಹುಡುಗ ಪಾತ್ರೆ ತೊಳೆಯುವುದನ್ನು ಕಂಡು ತಂದೆ ಆಶ್ಚರ್ಯಪಟ್ಟಾಗ, ಅಜ್ಜಿ ಅದನ್ನು "ಅಮ್ಮನೇ ಮನೆ ಕೆಲಸ ಮಾಡಬೇಕು ಎಂಬ ಮನಸ್ಥಿತಿಯಿಂದ ಸ್ವಾತಂತ್ರ್ಯ" ಎನ್ನುತ್ತಾಳೆ.

~ ಹುಡುಗಿಯರು ಕ್ರಿಕೆಟ್ ಆಟದಲ್ಲಿ ಪುರುಷರಿಗಿಂತ ಹಿಂದೆ ಇಲ್ಲ ಎಂದು ಸ್ವತಃ ಮಹೇಂದ್ರ ಸಿಂಗ್ ಧೋನಿ ಮತ್ತು ಜಸ್ಪ್ರೀತ್ ಬುಮ್ರ ಬಂದು ಹೇಳುವುದು.

~ "ತನ್ನ ಕೆರೀರಿಗಾಗಿ ಹುಡುಗ ನನ್ನ ಜೊತೆ ಸಾಗಲಾರನೇ?" ಎಂದು ಪ್ರಮೋಷನ್ನಿನಿಂದ ದೂರದ ಊರಿಗೆ ಪ್ರಯಾಣಿಸುತ್ತಿದ್ದ ಹುಡುಗಿ ತನ್ನ ಪ್ರಿಯಕರನನ್ನು ಕೇಳುತ್ತಾಳೆ.

  ~ ನಿಮಗೆ ಅಡುಗೆ ಬರುತ್ತದೆಯೇ? ನೀವು ಅಡುಗೆ ಮಾಡಿದರೆ, ನಾನು ಪಾತ್ರೆ ತೊಳೆಯುತ್ತೇನೆ ಎಂದು ಗಂಡ ಹೆಂಡತಿ ಅನ್ಯೋನ್ಯವಾಗಿ ಕೆಲಸ ಹಂಚಿಕೊಳ್ಳುವುದು, ಒಟ್ಟಿಗೆ ಕಾಫಿ ಮಾಡುವುದು.

  ~ ಜಡೆ ಹೆಣೆಯುವಾಗ, ಮಗಳು "ಸ್ಟ್ರಾಂಗ್ ಅಂದರೆ ರಾಜನ ಥರನಾ?" ಎಂಬ ಪ್ರಶ್ನೆಗೆ "ಇಲ್ಲ, ರಾಣಿ ಥರ", ಎನ್ನುತ್ತಾಳೆ ತಾಯಿ.

ಇಷ್ಟೇ ಯಾಕೆ, ಇಷ್ಟು ದಿನ ಲಘು ಹಾಸ್ಯ, ಶೃಂಗಾರಭರಿತವಾದ "ಪ್ಯಾರ್ ಕೀ ರಾಹ್ ಮೇ ಚಲ್ನಾ ಸೀಖ್" ಎಂದು ಹಾಡುತ್ತಿದ್ದ ಪಾನೀಯವೊಂದರ ಜಾಹೀರಾತು, ಇದು ಕೂಡ ಈಗ ಸ್ತ್ರೀ ಪ್ರಮುಖವಾಗಿ ಒಂದು ಜಾಹೀರಾತು ಹೊರತಂದಿದೆ.

ಹೀಗೆ ಇನ್ನೂ ಹತ್ತು ಹಲವು ಜಾಹಿರಾತುಗಳು ಸಮಾಜದ ಬದಲಾಗುತ್ತಿರುವ ಮನಸ್ಥಿತಿಗೆ ಕನ್ನಡಿ ಹಿಡಿಯುತ್ತಿವೆ. ಇದೇ ರೀತಿ ಸಮಾಜದ ಏಳಿಗೆಗಾಗಿ ಇನ್ನಷ್ಟು ಬದಲಾವಣೆಗಳು ಬರಬೇಕಿದೆ. ಹೆಣ್ಣು ಗಂಡು ಇಬ್ಬರಲ್ಲಿ ಯಾರೂ ಮೇಲಲ್ಲ. ಯಾರೂ ಕೀಳಲ್ಲ. ಇಬ್ಬರೂ ಸೃಷ್ಟಿಯಲ್ಲಿ ಅವರವರ ಕಾರ್ಯನಿರ್ವಹಣೆಗೆ ಅತ್ಯಗತ್ಯ. ಇಬ್ಬರಲ್ಲಿ ಯಾರಿಲ್ಲದಿದ್ದರೂ ಅಸಮತೋಲನವಾಗುವುದು ಖಚಿತ. ಇಬ್ಬರಿಗೂ ಅವರವರ ಕೆಲಸ ಕಾರ್ಯಕ್ಕೆ ಸಲ್ಲಬೇಕಾದ ಗೌರವ ಸಲ್ಲಲೇಬೇಕು.

***

ಕಾವ್ಯ ಕನ್ನಿಕೆಯ ಮಹಿಮೆ

-ಪೂರ್ಣಿಮಾ ಭಗವಾನ್

ಬಣ್ಣಿಸಲದಳವು ಕಾವ್ಯ ಕನ್ನಿಕೆಯ ಮಹಿಮೆ
ಜೀವನೋತ್ಸಾಹದಿ ಮುನ್ನಡೆಸುವ ಗರಿಮೆ ॥

ಜಗವ ತಿಳಿದು ಬಾಳಲು ಸುಜ್ಞಾನವ ನೀಡುವಳು
ಬರೆಯುತಿರಲು ನಿತ್ಯ ಪ್ರೇರಣೆ ಮೂಡಿಸುವಳು
ಸಾಹಿತ್ಯ ಸಂಗೀತ ಸಂಗಮದಿ ಮೈಮರೆಸುವಳು
ಮಹದಾನಂದದಿ ಸಾರ್ಥಕ ಭಾವ ಸೃಷ್ಟಿಸುವಳು ॥

ನೋವುಂಡ ಮನಕೆ ಮದ್ದಾಗಿ ಶಮನಿಸುವಳು
ಬತ್ತಿದುತ್ಸಾಹವನು ಚಿಗುರಿಸಿ ನಳನಳಿಸುವಳು
ಮುದುಡಿದ ಮನವ ಸಾಂತ್ವನದಿ ಮುದಿಸುವಳು
ಅಂಧಕಾರದಿ ಕೋಲ್ಮಿಂಚಾಗಿ ಹಾದಿ ತೋರುವಳು ॥

ಸವಿನೆನಪನು ಮರುಕಳಿಸಿ ಗೆಲುವಾಗಿ ಇರಿಸುವಳು
ಸಂಸ್ಕರಿಸಿ ಸಂಸ್ಕಾರ, ಸುಜ್ಞಾನವ ತಿಳಿಸುವಳು
ಸಹನೆ, ಸದ್ಬುದ್ದಿ, ಸದ್ಭಾವಗಳ ಪೋಷಿಸುವಳು
ಅನುಭವಾಮೃತವನು ಉಣಿಸಿ ಹದಗೊಳಿಸುವಳು ॥

ಅರಿತು ಸರಿಪಡಿಸಿಕೊಳ್ಳುವ ಸಂದೇಶ ಸಾರುವಳು
ಬೌದ್ಧಿಕ ಬೆಳವಣಿಗೆಗೆ ಕೊನೆಯಿಲ್ಲವೆಂದರುಹುವಳು
ಕಲಿಕೆಗೆ ವಯೋಮಾನದ ಮಿತಿಯಿಲ್ಲವೆನುವಳು
ಹಿತವಾದ ಸಾಹಿತ್ಯ ಆಹ್ಲಾದದಿ ಉತ್ಕರ್ಷಕೊಯ್ಯುವಳು ॥

***

ಪೊರೆ ಕಳಚಿತು

– ಉಷಾರಾಣಿ ಟಿ.ಆರ್.

ತನ್ನ ಪಾಲಿನ ಜಮೀನನ್ನು ಅಣ್ಣನ ಹೆಸರಿಗೆ ಮಾಡಿಸಿದ ದಿನ ಬದರಿ ಅತ್ಯಂತ ನಿರಾಳವಾಗಿ ಉಸಿರಾಡಿದ. ಎಂತಹ ಜಮೀನದು,, ಪಕ್ಕದಲ್ಲೇ ನಾಲೆ ಹರಿಯುತ್ತದೆ ಸಂಪದ್ಭರಿತವಾಗಿದ್ದ ಜಾಗ. ಇದರಿಂದ ರಮಾಮಣಿಗಂತೂ ರಾತ್ರೆಯೆಲ್ಲಾ ನಿದ್ದೆ ಹತ್ತಿರಲಿಲ್ಲ. ದಾನಶೂರ ಕರ್ಣನ ಅಪರಾವತಾರ ಎಂದು ಮನಸ್ಸಿನ ಕಹಿಯನ್ನೆಲ್ಲಾ ಕಾರಿದ್ದಳು.

''ಅಪ್ಪಾ ಫೀಸು ಕಟ್ಟೋದಕ್ಕೆ ಹದಿನೈದು ದಿನಗಳು ಮಾತ್ರ ಇದೆ. ನಾನು ಡಾಕ್ಟರ್ ಆಗೋ ಕನಸು ಬಿಟ್ಟು ಮತ್ತೆ ಬಿಎಸ್ಸಿಗೇ ಸೇರಿಬಿಡ್ತೀನಿ''

''ನೋಡೋಣ, ಇನ್ನೂ ಹದಿನೈದು ದಿನಗಳು ಇವೆಯಲ್ಲ. ಹೇಗಾದರೂ ಪ್ರಯತ್ನಪಡೋಣ ದೇವರು ದಾರಿ ತೋರಿಸ್ತಾನೆ.''

''ಇರೋನು ಒಬ್ಬ ಮಗ. ಅವನ ಅಲ್ಪ ಆಸೇನೂ ಪೂರ್ತಿ ಮಾಡೋದಕ್ಕೆ ನಮಗೆ ಆಗಲಿಲ್ಲ. ಆ ಜಮೀನಾದರೂ ನಮ್ಮ ಪಾಲಿಗಿದ್ದಿದ್ದರೆ''.

ರಮಾಮಣಿಯ ಮುಸು ಮುಸು ಅಳುವ ಸದ್ದು ಬದರಿಪ್ರಸಾದನ ಚಿತ್ತ ಸ್ವಾಸ್ಥ್ಯ ಕೆಡಿಸಿತು. ಆಫೀಸಿಗೆ ಹೋಗುವುದೆಂದು ನಿರ್ಧರಿಸಿಯೇ ಬಿಟ್ಟ. ಟೆಂಡರ್ ಹಾಕಿದ್ದ ಸಣ್ಣಯ್ಯನಿಗೆ ಕರೆ ಮಾಡಿದ. ಧ್ವನಿ ನಡುಗುತ್ತಿತ್ತು.

ಮಾರನೆಯ ದಿನ ಬದರಿ ಆಫೀಸಿಗೆ ಬಂದರೆ ಎಲ್ಲರಿಗೂ ಆಶ್ಚರ್ಯ. ''ಅರೆ ಸಾರ್. ಇದೇನು ನೀವು ಈ ದಿನ ರಜೆ ಎಂದು ತಿಳಿದಿದ್ದೆವು'' ಎಂದು ಒಬ್ಬರೆಂದರೆ ಮತ್ತೊಬ್ಬರು ''ಸಾರ್, ಡೆಪ್ಯುಟೇಶನ್ ಮೇಲೆ ಹೋಗುತ್ತಿದ್ದೀರಾ?''

ಬದರಿಗೆ ತಲೆ ಚಿಟ್ಟು ಹಿಡಿಯುತ್ತಿತ್ತು. ತನ್ನ ಚೇಂಬರಿನಲ್ಲಿ ಕುಳಿತು ಎ ಸಿ ಆನ್ ಮಾಡಿದರೂ ಮೈ ಬೆವರುತ್ತಿತ್ತು. ಬದರಿಯ ಬದಲಿಗೆ ಅವನ ಕೈ ಕೆಳಗಿನ ಅಧಿಕಾರಿ ಇನ್‌ಛಾರ್ಜ್ ಹನುಮಂತಪ್ಪ, ''ಮೇ ಐ ಕಮಿನ್'' ಎನ್ನುವ ಸೌಜನ್ಯವೂ ತೋರದೆ ರಭಸದಿಂದ ಒಳಗೆ ನುಗ್ಗಿದ.

''ಸಾರ್ ಈ ದಿನ ನೀವು ರಜೆ ಹಾಕಿಲ್ಲವೇ?''

''ಇಲ್ಲ''

''ಹಾಗಾದರೆ ಡೆಪ್ಯುಟೇಶನ್...!''

'' ಯಾವುದು ಇಲ್ಲ ಕಣ್ರೀ ಹನುಮಂತಪ್ಪ. ನನಗೆ ಕೆಲಸ ಮಾಡೋದಕ್ಕೆ ಬಿಡಿ.''

ಹನುಮಂತಪ್ಪನಿಗೆ ಗಾಬರಿಯಾಯಿತು. ''ಸಾರ್. ಈವತ್ತು ಟೆಂಡರ್ ಓಪನ್ ಮಾಡಬೇಕು ಗೊತ್ತಲ್ವಾ ಸಾರ್?''
''ಹೌದು ಅದಕ್ಕೇನೀಗ?''

"ಅಲ್ಲಾ... ಅದು ಸಣ್ಣಯ್ಯನವರು...., ಹಾಗಲ್ಲ ಸಾರ್ ಅದು ನೀವು ಪ್ರತಿ ಸರ್ತಿಯ ಹಾಗೆ ರಜೆಯಲ್ಲಿರುತ್ತೀರಿ ಎಂದು ತಿಳಿದು ನಾನು ಸಣ್ಣಯ್ಯನವರಿಗೇ ಟೆಂಡರ್ ಸಿಗುವುದೆಂದು ಮಾತು ಕೊಟ್ಟಿರುತ್ತೇನೆ. ನೀವಂತೂ ಕಮೀಷನ್ ಮುಟ್ಟುವವರಲ್ಲ. ಆದರೆ ಪಾಪ ನೀವೇನೂ ಯಾವತ್ತೂ ನಮಗೆ ಆಕ್ಷೇಪಣೆ ಮಾಡಿದವರಲ್ಲ. ಅದಕ್ಕೆ..."

"ಹಾಗೇನಿಲ್ಲ. ಈದಿನ ನಾನು ಇರ್ತೀನಲ್ಲ, ನಾನು ನೋಡಿಕೊಳ್ಳುತ್ತೇನೆ". ಹನುಮಂತಪ್ಪ ಪೆಚ್ಚಾದ. ಅವನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ತೀರ ಗಾಬರಿಯಿಂದ ಸಣ್ಣಯ್ಯನವರಿಗೆ ಫೋನು ಹಚ್ಚಿದ. ಹಾಳಾದ ಫೋನು. ಸಿಗುತ್ತಲೇ ಇರಲಿಲ್ಲ.

ಅವನ ಸ್ಥಿತಿ ನೋಡಿ ಇತರ ಸಹೋದ್ಯೋಗಿಗಳಿಗೆ ಏನೋ ಸಮಾಧಾನ. "ಒಳ್ಳೆಯ ಕೆಲಸ ಮಾಡಿದರು ಬದರಿ ಸಾರ್. ಈ ಹನುಮಂತಪ್ಪ ಲಂಚ ತಿಂದೂ ತಿಂದೂ ಬಹಳ ಕೊಬ್ಬಿದಾನೆ. ಸರಿಯಾಗಿ ಪಾಠ ಕಲಿಸಿದರು" ಎಂದು ಮಾತನಾಡಿಕೊಳ್ಳುತ್ತಿದ್ದರು.

ಟೆಂಡರ್ ತೆರೆಯಿತು. ಸಣ್ಣಯ್ಯನ ಪರವಾಗಿ ಇತ್ಯರ್ಥ ಆಯಿತು. ಹನುಮಂತಪ್ಪ ಕುಳಿತಲ್ಲೇ ಕುದಿಯುತ್ತಿದ್ದ. ಅವನಿಂದ ಪಾಲು ಸ್ವೀಕರಿಸುತ್ತಿದ್ದವರೂ ಕೈ ಕೈ ಹಿಸುಕಿಕೊಂಡರು. ಕಿರುನಗೆಯೊಂದಿಗೆ ಸಣ್ಣಯ್ಯನ ಕಾರು ಚಲಿಸಿದ್ದು ಕಿಟಕಿಯಿಂದ ಎಲ್ಲರೂ ನೋಡಿದರು.

ಸಂಜೆ ಬದರಿ ಅರ್ಜೆಂಟ್ ಕೆಲಸದ ಪ್ರಯುಕ್ತ ಬೇರೆ ಊರಿಗೆ ಹೋಗಿ ಬರುವುದಾಗಿ ಮನೆಯಲ್ಲಿ ತಿಳಿಸಿ, ಮಾರನೆದಿನ ಸಂಜೆ ಹೊತ್ತಿಗೆ ಮನೆಗೆ ವಾಪಸ್ಸಾದ. ಮನೆಯಲ್ಲಿ ಹೆಂಡತಿಗಂತೂ ಅಚ್ಚರಿ. ರಮಾಮಣಿ ಬಿಸಿ ಬಿಸಿ ಕಾಫಿ ಬೆರಸಿ ತಂದಳು. ಕಾಫಿ ಹೀರುತ್ತಾ ಬದರಿ ಕಾಫಿಯ ರುಚಿಗೆ ಮೆಚ್ಚುಗೆ ವ್ಯಕ್ತಪಡಿಸಿದ. "ಇಂತಹ ಸೊಗಸಾದ ಕಾಫಿ ದಿನಾ ಸಿಗುವಂತಿದ್ದರೆ ನಾನು ಮನೆಗೆ ಇದೇ ವೇಳೆಗೆ ಬರುತ್ತೇನೆ". ರಮಾಮಣಿಯ ಕೆನ್ನೆ ಕೆಂಪಾಯಿತು. ಸದಾ ಮುಖ ಗಂಟಿಟ್ಟುಕೊಂಡಿರುತ್ತಿದ್ದ ಗಂಡನ ವರ್ತನೆ ಅವಳಿಗೆ ಮತ್ತಷ್ಟು ಅಚ್ಚರಿ ಮೂಡಿಸಿತು. "ರಮೆ, ಉಲ್ಲಾಸ ಎಲ್ಲಿ?" ಹೆಂಡತಿಯ ಬಗ್ಗೆ ಪ್ರೀತಿಯಿಂದ ಮಾತನಾಡುವಾಗ ರಮಾ ರಮೆಯಾಗುತ್ತಿತ್ತು. ರಮಾ ಉಬ್ಬಿ ಹೋದಳು. ಗಂಡ ಈ ರೀತಿ ಮಾತನಾಡಿ ಯುಗಗಳೇ ಆಗಿತ್ತೆಂದುಕೊಂಡಳು. ಈ ದಿನ ಗಂಡ ಇಷ್ಟು ಖುಷಿಯಾಗಿರಲು ಏನು ಕಾರಣ ಇರಬಹುದು ಎಂದು ಅವನ ಮನಸ್ಸಿನ ಒಳಹೊಕ್ಕಲು ಪ್ರಯತ್ನಿಸುತ್ತಿದ್ದಳು.

"ಉಲ್ಲಾಸ, ಅವನ ಸ್ನೇಹಿತನ ಮನೆಗೆ ಹೋಗಿದ್ದಾನೆ.ಇನ್ನೇನು ಬರುತ್ತಾನೆ".

"ಏನು ವಿಷಯ?" ಅವಳಿಗೆ ಕುತೂಹಲ ತಡೆಯಲಾಗಲಿಲ್ಲ.

"ವಿಷಯ ಇದೆ ರಮೆ. ಅವನು ಬರಲಿ. ಅಂದಹಾಗೆ ಈ ದಿನ ಮೂರೂ ಜನ ಹೊರಗೆ ಊಟಕ್ಕೆ ಹೋಗೋಣ. ಹಾಗೆ ನೀನು ಯಾವುದಾದರೂ ಆಭರಣ ತೆಗೆದುಕೊ. ನಮ್ಮ ದಿನನಿತ್ಯದ ಬವಣೆಯಲ್ಲಿ ನಾನು ನಿನಗೆ ಏನೂ ಕೊಡಿಸಿಲ್ಲ."

"ಹೌದಾ? ಅದು ಹೇಗೆ ಇದು ಇದ್ದಕ್ಕಿದ್ದಂತೆ" ರಮಾ ತೊದಲುತ್ತಿದ್ದಳು.

ಗಂಡನ ವರ್ತನೆ ತೀರ ಹೊಸದಾಗಿತ್ತು. ಸರ್ಕಾರಿ ಕಛೇರಿಯಲ್ಲಿ ಅಧಿಕಾರಿ. 'ಸಂಬಳ ಬಿಟ್ಟರೆ ಲಂಚ-ಗಿಂಚ ಅಂತ ಒಂದು ಪೈಸೆ ಮುಟ್ಟುವುದಿಲ್ಲ' ಎಂದು ಇವರ ಮದುವೆಯ ಮಧ್ಯಸ್ತಿಕೆ ವಹಿಸಿದ್ದವರು ಹೇಳಿದ್ದರು. ಜೀವನದಲ್ಲಿ ಪ್ರಾಮಾಣಿಕತೆ ಇರಬೇಕು, ವೆಂಕಟರಮಣ ಮಾಸ್ತರರು ಸದಾ ಬೋಧಿಸುತ್ತಿದ್ದ ಪಾಠ. ಟೆಂಡರ್ ಇವನ ಮೂಲಕವೇ ಪಾಸಾಗಬೇಕು. ಎಷ್ಟು ಕಮೀಷನ್ ಬರುತ್ತದೆ. ಆದರೆ ಈ ಪುಣ್ಯಾತ್ಮ ಟೆಂಡರ್ ತೆರೆಯುವ ದಿನ ರಜೆ ಹಾಕಿ ತನ್ನ ಕೈಕೆಳಗಿನವನಿಗೆ ಚಾರ್ಜ

ಕೊಡುತ್ತಾನೆ, ಇಲ್ಲವೇ ಇನ್ಸ್‌ಪೆಕ್ಷನ್‌ಗೆ ಹೋಗುತ್ತಾನೆ. ಇವನ ಕೈಕೆಳಗಿನವನು ತಿಂದು ತಿಂದು ಹೆಗ್ಗಣವಾಗಿದ್ದಾನೆ. ರಮಾಳ ತಂದೆಗಂತೂ ಅಳಿಯನೆಂದರೆ ಅಚ್ಚುಮೆಚ್ಚು. ದುರ್ಬೀನು ಹಾಕಿ ಹುಡುಕಿದರೂ ಇಂತಹ ಅಳಿಯ ಸಿಗಲು ಸಾಧ್ಯವಿಲ್ಲ ಎನ್ನುತ್ತಿದ್ದರು ಅವರು. ಉಲ್ಲಾಸನೂ ಹುಟ್ಟಿದ ಮೇಲೆ ಮಗುವಿಗೂ ಕಾರ್ಪಣ್ಯ ಮಾಡುವುದು ರಮಾಳಿಗೆ ಇಷ್ಟವಾಗುತ್ತಿರಲಿಲ್ಲ. ಇದೇ ವಿಷಯಕ್ಕೆ ಇಬ್ಬರಿಗೂ ವಾಗ್ವಾದವಾಗುತ್ತಿತ್ತು. ಈಗ ಉಲ್ಲಾಸ ಪಿಯುಸಿ ಮುಗಿಸಿ ಒಳ್ಳೆಯ ಅಂಕ ಗಳಿಸಿದ್ದ. ಸಿಇಟಿಯಲ್ಲಿ ಸ್ವಲ್ಪ ಅಂಕಗಳು ಏರುಪೇರಾಯಿತು. ಆದರೆ ಉಲ್ಲಾಸನಿಗೆ ಮೆಡಿಕಲ್ ಸೇರಬೇಕೆಂಬ ಆಸೆ.

ಅವನ ನೆರಳು ಕಂಡ ತಕ್ಷಣ. "ಉಲ್ಲಾಸ, ಬೇಗ ಬಾ, ಅಪ್ಪ ನಿನಗೆ ಏನೋ ಗುಡ್ ನ್ಯೂಸ್ ಹೇಳಬೇಕಂತೆ" ಎಂದು ಹೆಚ್ಚು ಕಮ್ಮಿ ಅವನ ಕೈ ಹಿಡಿದು ಎಳೆದುಕೊಂಡೇ ಹೋದಳು.

"ಬಿಡಮ್ಮ, ಅಪ್ಪ ಯಾವ ಗುಡ್ ನ್ಯೂಸೂ ಕೊಡುವುದಿಲ್ಲ. ಅವರೂ ಸಂತೋಷವಾಗಿರುವುದಿಲ್ಲ ನಮ್ಮನ್ನೂ ಸಂತೋಷವಾಗಿರಲು ಬಿಡುವುದಿಲ್ಲ. ಅವರಿಗೆ ಆದರ್ಶದ ಭೂತ ಹಿಡಿದಿದೆ."

"ಹೌದು ಉಲ್ಲಾಸ, ಆದರೆ ನಿನ್ನ ನಿರೀಕ್ಷೆಯನ್ನು ಮೀರಿ ಈ ದಿನ ನಾನು ನಿನಗೆ ಒಂದು ಒಳ್ಳೆಯ ಸುದ್ದಿ ತಂದಿದ್ದೇನೆ. ಎರಡು ದಿನಗಳು ಆಫೀಸಿಗೆ ರಜೆ ಹಾಕಿದ್ದೇನೆ, ನಾಡಿದ್ದು ನಿನ್ನ ಮೆಡಿಕಲ್ ಅಡ್ಮೀಷನ್ ಮಾಡಿಸಲು. ನಿನ್ನ ದಾಖಲೆಗಳನ್ನೆಲ್ಲಾ ತೆಗೆದುಕೊಂಡು ನೀನು ಬೇಗ ತಯಾರಾಗು. ಹಾಗೆ ರಮೆ, ಇವನಿಗೆ ಈ ದಿನ ನಾವು ಹೊರಗೆ ಊಟಕ್ಕೆ ಹೋಗುವ ವಿಷಯ ತಿಳಿಸಿದೆಯಾ?"

"ಏನು ಮೆಡಿಕಲ್ ಅಡ್ಮೀಶನ್ನಾ? ಅಪ್ಪ ಮತ್ತೆ ದುಡ್ಡು?"

"ಅದರ ಚಿಂತೆ ನಿನಗ್ಯಾಕೆ?"

ಉಲ್ಲಾಸ ಚಿವುಟಿಕೊಂಡು ನೋಡಿದ. ಹೌದು ನಿಜವೇ. ಅಪ್ಪನಿಗೆ ದುಡ್ಡು ಎಲ್ಲಿಂದ ಸಿಕ್ಕಿತು? ರಮಾಮಣಿಯ ಹತ್ತಿರವೂ ಅವನ ಪ್ರಶ್ನೆಗೆ ಉತ್ತರವಿರಲಿಲ್ಲ. ರಮಾಮಣಿ ಇದ್ದುದರಲ್ಲಿ ಒಳ್ಳೆಯ ಸೀರೆಯುಟ್ಟುಕೊಂಡು ತಯಾರಾದಳು. "ನಿಮಗೇನಾದರೂ ಲಾಟರಿ ಹೊಡೀತಾ? ನೀವಂತೂ ಲಾಟರಿ ತೆಗೆದುಕೊಳ್ಳುವವರಲ್ಲ". ಬದರಿ ಮೌನ ವಹಿಸಿದ್ದ.

ಆಫೀಸಿನಿಂದ ಕಾರು ಕೊಟ್ಟಿದ್ದರೂ ಅದನ್ನು ಕೇವಲ ಆಫೀಸಿನ ಕೆಲಸಕ್ಕೆ ಮಾತ್ರ ಉಪಯೋಗಿಸುತ್ತಿದ್ದ ಬದರಿ ಟ್ಯಾಕ್ಸಿ ಬುಕ್ ಮಾಡಿ ಶ್ರೀಮಂತರ ರೆಸ್ಟೋರೆಂಟು ಗ್ರೀನ್ ಗ್ರೂಪ್ಗೆ ಹೋಗುವಂತೆ ತಿಳಿಸಿದಾಗಲಂತೂ ಅಮ್ಮಾ ಮಗ ಬಿಟ್ಟ ಬಾಯಿ ಬಿಟ್ಟ ಹಾಗೆ ನಿಂತುಬಿಟ್ಟರು.

"ಇನ್ನುಮುಂದೆ ನಿಮ್ಮ ಬೇಕುಗಳಿಗೆ ಬ್ರೇಕ್ ಹಾಕದೇ ಇರುವುದು ನನ್ನ ಸಂಕಲ್ಪ." ದಿಂಬಿಗೆ ತಲೆ ಎಷ್ಟು ಒತ್ತಿದರೂ, ಮುದುರಿಕೊಂಡು ಕಷ್ಟಪಟ್ಟು ಕಣ್ಮುಚ್ಚಿದರೂ ಒಬ್ಬರಿಗೂ ನಿದ್ದೆ ಇಲ್ಲ. ಬೆಳಗಿನ ನಿರೀಕ್ಷೆ ಅಷ್ಟು ಸೊಗಸಾಗಿತ್ತು. ಸುಂದರ ಬೆಳಗು. ಜೀವನದಲ್ಲಿ ಹೊಸ ಸೂರ್ಯನ ಉದಯವಾದಂತೆ. ನಿರೀಕ್ಷೆ ಸುಳ್ಳಾಗಲಿಲ್ಲ. ಉಲ್ಲಾಸನ ಅಡ್ಮೀಷನ್ ಮುಗಿದು, ರಮಾಮಣಿ ಬಯಸಿದ ಸೀರೆ, ನೆಕ್ಲೇಸು ತೆಗೆದುಕೊಂಡು ಮನೆಗೆ ಬಂದಾಗ ಸಂಜೆಯಾಗಿತ್ತು.

"ರಮೆ ಅದೇ ಕಾಫೀ ಸ್ಟ್ರಾಂಗ್ ಆಗಿರಬೇಕು ಕಾಫಿ ತರ್ತೀಯಾ? ತುಂಬಾ ತಲೆ ನೋಯುತ್ತಿದೆ".

“ಇಗೋ ಈಗ ತಂದೆ. ನಿಮಗೆ ಇಷ್ಟೆಲ್ಲಾ ಅಲೆದು ಅಭ್ಯಾಸವೇ ಇರಲಿಲ್ಲ. ಹಾಗಾಗಿ ತಲೆ ನೋವು. ಕಾಫಿ ಕುಡಿದು ಸ್ವಲ್ಪ ಹೊತ್ತು ರೆಸ್ಟ್ ತೆಗೆದುಕೊಳ್ಳಿ ಎಲ್ಲವೂ ಸರಿಯಾಗುತ್ತದೆ”. ರಮಾ ಇನ್ನೇನು ಅಡುಗೆ ಮನೆಯತ್ತ ಹೆಜ್ಜೆ ಹಾಕುವವಳಿದ್ದಳು. ಬದರಿ ಅವಳನ್ನು ತಡೆದು, “ರಮೆ ಬಾ ಇಲ್ಲಿ,. ಇದನ್ನು ತೆಗೆದುಕೊ ಸರಿಯಾಗಿ ಒಂದು ಕೋಟಿ ಇದೆ. ಭದ್ರವಾಗಿ ಬೀರುವಿನಲ್ಲಿಡು. ನಾನು ಯಾವ ತಪ್ಪೂ ಮಾಡಿಲ್ಲ.“

ರಮಾ ಮಾತು ಬಾರದ ಮೂಕಿಯಾದಳು. ಇದು ಯಾವ ಹಣ? ಗಂಡ ಏನೊಂದು ಹೇಳುತ್ತಿಲ್ಲ. ಆದರೆ ಹಣ ಮನೆಯಲ್ಲಿ ಓಡಾಡುತ್ತಿರುವುದು ನಿಜ. ತನ್ನ ಗಂಡ ಇಷ್ಟು ದಿನ ಆದರ್ಶ ಎಂದು ಪಾಲಿಸಿಕೊಂಡು ಬಂದವನೂ ತನ್ನ ಸಂಸಾರಕ್ಕಾಗಿ ತಪ್ಪು ಮಾಡಿದನೇ? ವಾಲ್ಮೀಕಿಯಂತೆ ಅವನ ತಪ್ಪಿನಲ್ಲಿ ನಾವೂ ಪಾಲುದಾರರೆ?

“ಇದು ನಮ್ಮ ಉಲ್ಲಾಸನ ವಿದ್ಯಾಭ್ಯಾಸಕ್ಕೆ ಮೀಸಲು. ಯಾವ ಕಾರಣಕ್ಕೂ ಇದನ್ನು ಮುರಿಯುವಂತಿಲ್ಲ.”

ರಮಾಮಣಿ ಹಣ ಬೀರುವಿನಲ್ಲಿಟ್ಟು ಕಾಫಿ ತಂದಳು. ಹಿಂದಿನ ದಿನದ ಹಾಗೆಯೇ ಬದರಿ ಕಾಫಿಯನ್ನು ಆಸ್ವಾದಿಸುತ್ತಾ ಕುಡಿದ. “ಸ್ವಲ್ಪ ಹೊತ್ತು ಮಲಗಿರುತ್ತೇನೆ. ಎಬ್ಬಿಸಬೇಡಿ” ಎಂದು ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡ.


ಛೇ! ಒಂದು ಕ್ಷಣ ಮನಸು ವಿಚಲಿತವಾಗಿತ್ತು ನಿಜ. ಮನುಷ್ಯನಲ್ಲವೇ. ದೇವರಂತಹ ಅಣ್ಣನೊಂದಿಗೆ ತನ್ನ ಕಷ್ಟ ಹಂಚಿಕೊಂಡಿದ್ದು ನೀಚನಾಗುವುದನ್ನು ತಪ್ಪಿಸಿತು. ಆ ದಿನ ಒಳ್ಳೆಯ ಮನಸ್ಸಿನಿಂದ ಧಾರೆ ಎರೆದುಕೊಟ್ಟ ಜಮೀನನ್ನು ಮಾರಿ ಅಣ್ಣ ದುಡ್ಡು ತನಗೆ ಕೊಡಬಹುದು ಎಂದು ಕನಸು ಮನಸಿನಲ್ಲಿಯೂ ನೆನಸಿರಲಿಲ್ಲ ಬದರಿ. ಕೃಷಿ ಭೂಮಿಯನ್ನು ಮಾರಿ ದುಡ್ಡೇನೋ ಕೈಗೆ ಬಂತು. ಅಣ್ಣನಿಗೆ ಕೊಟ್ಟಿದ್ದು ವಾಪಸ್ಸು ಪಡೆದೆನಲ್ಲ ಎಂಬ ಸಂಕಟ ಒಂದು ಕಡೆಯಾದರೆ, ರಮಾಮಣಿಯ ನಗುವಿನ ಮುಖ, ಬಿಳಿ ಕೋಟು ಕತ್ತಿಗೆ ಸ್ಟೇತಾಸ್ಕೋಪಿನ ಹಾರ ಹಾಕಿಕೊಂಡು ಟೀವಿಯಿಂದ ಬರುತ್ತಿರುವ ಡಾ.ಉಲ್ಲಾಸನ ಮುಖ ಕಣ್ಮುಂದೆ ಬಂತು. ಕಣ್ಣಿಂದ ಪೊರೆ ಕಳಚುತ್ತಿತ್ತು. ಬೆಳಕು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಅಲ್ಲಿ ಆದರ್ಶದ ಅಣ್ಣ, ವೆಂಕಟರಮಣ ಮಾಸ್ತರರು ಎಲ್ಲರೂ ಕಾಣಿಸುತ್ತಿದ್ದರು. ತನ್ನ ಕೆಲಸಕ್ಕೆ ತಾನು ದ್ರೋಹ ಬಗೆಯಲಿಲ್ಲ ಎಂಬ ಸಂತಸವೂ ಸೇರಿ ಬದರಿಯ ಮನಸ್ಸು ನಿರಾಳವಾಯಿತು.

***

ಪುಸ್ತಕ ಪರಿಚಯ

'ಎಲ್ಲರೊಳಗೊಂದಾಗು
– ಮಕ್ಕಳಿಗಾಗಿ ಡಿವಿಜಿ...'

– –ಶೀಲಾ ಅರಕಲಗೂಡು



ಪರಿಕಲ್ಪನೆ ಹಾಗೂ ಸಾಹಿತ್ಯ: ಸತ್ಯೇಶ್ ಎನ್. ಬೆಳ್ಳೂರ್
ಚಿತ್ರಗಳು: ಬಿ. ಜಿ. ಗುಜ್ಜಾರಪ್ಪ
ಪ್ರಕಾಶನ: ಡಿವಿಜಿ ಬಳಗ ಪ್ರತಿಷ್ಠಾನ, ಮೈಸೂರು
ಬೆಲೆ: ರೂ. 150

ಬಹುಶಃ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೊತ್ತಮೊದಲ ಬಾರಿಗೆ ಒಬ್ಬ ಸಾಹಿತಿಯ ಜೀವನ ಚರಿತ್ರೆಯನ್ನು ಮಕ್ಕಳಿಗಾಗಿ ಚಿತ್ರಗಳ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದೆಂದರೆ 'ಎಲ್ಲರೊಳಗೊಂದಾಗು' ಎಂಬುದೇ ಇರಬಹುದು. ಶೀರ್ಷಿಕೆಯೇ ಎಷ್ಟೊಂದು ಅರ್ಥಪೂರ್ಣ ಹಾಗೂ ಧ್ವನಿಪೂರ್ಣ! ಎಲ್ಲರೊಳಗೊಂದಾಗಿ ಬದುಕಿದ ಡಿವಿಜಿಯವರನ್ನು ಚಿತ್ರಿಸುವ ಪುಸ್ತಕಕ್ಕೆ ಇದಲ್ಲದೆ ಬೇರೆ ಉತ್ತಮ ಶೀರ್ಷಿಕೆ ಸಾಧ್ಯವೇ ಇಲ್ಲ ಎನಿಸುತ್ತದೆ. ಈ ಪುಸ್ತಕದ ಬಿಡುಗಡೆ ಕಳೆದ ಮಾರ್ಚ್ 16ರಂದು ಮಿಥಿಕ್ ಸೊಸೈಟಿ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು. ಬಿಡುಗಡೆ ಮಾಡಿದವರು ಖ್ಯಾತ ಶಿಕ್ಷಣ ತಜ್ಞ, ವಾಗ್ಮಿ ಹಾಗೂ ಚಿಂತಕ ಡಾ. ಗುರುರಾಜ ಕರ್ಜಗಿ ಅವರು.

ಮಾರ್ಚ್ 17, 1887 – ಡಿವಿಜಿ ಎಂದೇ ಪ್ರಖ್ಯಾತರಾಗಿರುವ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರ ಜನ್ಮದಿನ. ಅವರ ಜನ್ಮದಿನದ ಮುನ್ನಾದಿನವೇ ಈ ಪುಸ್ತಕ ಬಿಡುಗಡೆಯಾದದ್ದು ಅವರ ಜನ್ಮದಿನಕ್ಕೆ ಕೊಟ್ಟ ವಿಶೇಷ ಉಡುಗೊರೆ ಎಂದೇ ಭಾವಿಸಬಹುದು.

'ಎಲ್ಲರೊಳಗೊಂದಾಗು' ಎನ್ನುವ ಈ ಪುಸ್ತಕ ಮಕ್ಕಳಿಗಾಗಿ ಡಿವಿಜಿಯವರನ್ನು ಪರಿಚಯಿಸುವುದಕ್ಕಾಗಿ ಮಾಡಿರುವ ಪುಸ್ತಕ. ಇದು 68 ಪುಟಗಳನ್ನು ಹೊಂದಿದ್ದು, ಸುಮಾರು 189 ಚಿತ್ರಗಳಿಂದ ಒಡಗೂಡಿದೆ. ಕಪ್ಪು ಬಿಳುಪಿನ ಚಿತ್ರಗಳಾದರೂ, ಮನಸ್ಸಿಗೆ ಆಕರ್ಷಕವಾಗುವಂತೆ ಚಿತ್ರಗಳನ್ನು ಯೋಜಿಸಿ, ಪೂರಕ ವಾಕ್ಯಗಳನ್ನು ಜೋಡಿಸಲಾಗಿದೆ. ಪ್ರತಿ ಪುಟದಲ್ಲೂ ಮೂರು ಮೂರು ಚಿತ್ರಗಳನ್ನು ಜೋಡಿಸಲಾಗಿದೆ.

ಮೊದಲನೆಯ ಪುಟದ ಮೊದಲ ಚಿತ್ರದಲ್ಲಿಯೇ, ಒಂದು ತರಗತಿಯಲ್ಲಿ ಕಪ್ಪು ಹಲಗೆಯ ಮೇಲೆ ಪುಸ್ತಕದ ಶೀರ್ಷಿಕೆ 'ಎಲ್ಲರೊಳಗೊಂದಾಗು, ಮಕ್ಕಳಿಗಾಗಿ ಡಿವಿಜಿ...' ಎಂದು ಬರೆಯಲಾಗಿದ್ದು, ಒಬ್ಬ ಶಿಕ್ಷಕರು ಏನನ್ನೋ ಹೇಳುತ್ತಿರುವಂತೆ ಚಿತ್ರಿಸಲಾಗಿದೆ. ನಂತರದ ಚಿತ್ರಗಳಲ್ಲಿ, ಶಿಕ್ಷಕರು ಮಕ್ಕಳೊಂದಿಗೆ ಮಾತನಾಡುತ್ತಾ 'ಮಹಾನ್ ಸಾಧಕರ ಕಥೆ ಹೇಳುತ್ತೇನೆ' ಎಂದು ತಿಳಿಸಿ, ಡಿವಿಜಿಯವರ ಬಗ್ಗೆ ತಿಳಿವಳಿಕೆ ನೀಡಲು ಆರಂಭಿಸುತ್ತಾರೆ. ಪ್ರಶ್ನೆಗಳ ಮೂಲಕ ಮಕ್ಕಳನ್ನು ಪ್ರಚೋದಿಸಿ, ಅವರಲ್ಲಿ ಡಿವಿಜಿಯವರ ಜೀವನದ ಬಗ್ಗೆ ತಿಳಿಯಬೇಕೆಂಬ ಹಂಬಲ ಮೂಡಿಸುತ್ತಾರೆ. ಮಕ್ಕಳ ಆಸಕ್ತಿಯನ್ನು ಕೆರಳಿಸಿ, ಅದನ್ನು ತೃಪ್ತಿಗೊಳಿಸುವಂತೆ ಅವರ ಬದುಕಿನ ವಿವರಗಳನ್ನು ಅವರ ಪೂರ್ವಜರಿಂದ ಆರಂಭಿಸಿ, ಮುಂದಿನವುಗಳನ್ನು ನಿಧಾನವಾಗಿ ತಿಳಿಸುತ್ತಾ ಹೋಗುತ್ತಾರೆ.

ಡಿವಿಜಿಯವರ ವಂಶವೃಕ್ಷವನ್ನು ಚಿತ್ರದ ಮೂಲಕ ತೋರಿಸಿ, ಅವರ ಹಿರಿಯರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಡಿವಿಜಿಯವರ ಬಾಲ್ಯದ ಶಿಕ್ಷಣದ ಬಗ್ಗೆ ಬಹಳ ಚೆನ್ನಾಗಿ ಹೇಳಲಾಗಿದೆ. ಅವರ ಬದುಕಿನ ಒಂದೊಂದೇ ಹಂತವನ್ನು ಮಕ್ಕಳಿಗೆ ತಿಳಿಹೇಳುವಂತೆ ಶಿಕ್ಷಕರು ತಿಳಿಸುತ್ತಾ ಹೋಗುತ್ತಾರೆ. ಡಿವಿಜಿಯವರ ಬದುಕಿನಲ್ಲಿ ಅವರ ಚಿಕ್ಕಜ್ಜ ರಾಮಣ್ಣನವರಪಾತ್ರ, ತಾಯಿಯ ತಾಯಿ (ಅಜ್ಜಿ) ಸಾಕಮ್ಮನವರ ಪಾತ್ರ, ಸೋದರ ಮಾವನವರ ಪಾತ್ರ ಹಾಗೂ ಶಾಲೆಯ ಶಿಕ್ಷಕರುಗಳ ಪಾತ್ರವನ್ನು ಚೆನ್ನಾಗಿ ತಿಳಿಸುವ ವಿವರಗಳಿವೆ. ಶಾಲೆಯಲ್ಲಿ ಅನೇಕ ಗುರುಗಳು ಅವರ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ತಿಳಿಸಲಾಗಿದೆ. ಕನ್ನಡ ಕಾವ್ಯದ ಬಗ್ಗೆ ಆಸಕ್ತಿ ಮೂಡಿಸಿದ ಕನ್ನಡ ಪ್ರಾಧ್ಯಾಪಕರಾದ ಶ್ರೀ ಚಂದ್ರಶೇಖರ ಶಾಸ್ತ್ರಿಗಳು, ಇಂಗ್ಲಿಷ್ ಭಾಷೆಯ ಗಟ್ಟಿ ಅಡಿಪಾಯ ಹಾಕಿದ ಇಂಗ್ಲಿಷ್ ಅಧ್ಯಾಪಕರಾಗಿದ್ದ ಶ್ರೀ ಕೆ.ವಿ.ರಾಮಸ್ವಾಮಯ್ಯರ್ ಅವರು, ಇನ್ನೂ ಹೆಚ್ಚಿನ ಕಲಿಕೆಗೆ ಕಾರಣರಾದ ಮುಳಬಾಗಿಲಿನ ಸಬ್ ರಿಜಿಸ್ಟ್ರಾರ್ ಆಗಿದ್ದ ಶ್ರೀ ರಾಮದಾಸಪ್ಪನವರು, ಹೈಸ್ಕೂಲಿನಲ್ಲಿ ಪುಸ್ತಕಗಳನ್ನು ಓದಲು ಆಸಕ್ತಿ ಮೂಡಿಸಿದ ಬಾಪು ಸುಬ್ಬರಾಯ ಗುರುಗಳು, ಕೋಲಾರದಲ್ಲಿ ಇಂಗ್ಲೀಷ್ ಮಾಸ್ಟರ್ ಆಗಿದ್ದ ಖ್ಯಾತ ಆಂಗ್ಲ ಲೇಖಕ ಆರ್.ಕೆ. ನಾರಾಯಣ್ ಅವರ ತಂದೆ ಆರ್.ವಿ. ಕೃಷ್ಣಸ್ವಾಮಯ್ಯರ್ ಅವರು, ಹೀಗೆ ಬಹಳಷ್ಟು ಗುರುಗಳ ಬಗ್ಗೆ ಪರಿಚಯಗಳನ್ನು ಮಾಡಿ ಕೊಟ್ಟಿದ್ದಾರೆ. ಇದರಿಂದ ಮಕ್ಕಳ ಬದುಕಿನಲ್ಲಿ ಶಿಕ್ಷಕರ ಪಾತ್ರದ ಪ್ರಾಮುಖ್ಯತೆ ಅರಿವಾಗುತ್ತದೆ. ಹಾಗೆಯೇ, ಮಕ್ಕಳು ಕಲಿಯಬೇಕಾದ ರೀತಿಯನ್ನೂ ತಿಳಿಸಲಾಗಿದೆ. ಇದು ಮಕ್ಕಳು ಹಾಗೂ ಶಿಕ್ಷಕರು ಅರಿತುಕೊಳ್ಳಲೇಬೇಕಾದ ವಿಷಯ.

ಬಾಲ್ಯದಲ್ಲಿ ಡಿವಿಜಿಯವರು ಪ್ರತಿದಿನ ಮುಳಬಾಗಿಲಿನ ಆಂಜನೇಯನ ಗುಡಿಗೆ ಹೋಗುತ್ತಿದ್ದುದರಿಂದ, ಹನುಮನ ಸಿದ್ಧಾಂತ ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವಹಿಸಿತ್ತು ಎಂಬುದನ್ನು ತಿಳಿಸುತ್ತಾ, ತತ್ಸಂಬಂಧಿ ಮಂಕುತಿಮ್ಮನ ಕಗ್ಗವೊಂದನ್ನು ಕೂಡಾ ಉಲ್ಲೇಖಿಸಿರುವುದು ಗಮನೀಯ.

ತಮ್ಮ 17ನೇ ವಯಸ್ಸಿನಲ್ಲಿ ವಿವಾಹವಾದ ನಂತರ ಡಿವಿಜಿಯವರು ತಮ್ಮ ಬದುಕಿನ ನಿರ್ವಹಣೆಗೆ ಮಾಡಿದ ವಿವಿಧ ಉದ್ಯೋಗಗಳ ಬಗ್ಗೆ ತಿಳಿಸುತ್ತಾ, ಕಡೆಗೆ ಪತ್ರಿಕೋದ್ಯಮದಲ್ಲಿ ನೆಲೆ ಕಂಡುಕೊಂಡ ಬಗೆಯನ್ನು ಸ್ವಾರಸ್ಯಕರವಾಗಿ ಪುಟ್ಟ ಪುಟ್ಟ ವಾಕ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ, ಲೇಖಕರಾದ ಸತ್ಯೇಶ್ ಬೆಳ್ಳೂರ್ ಅವರು. ಮುಂದೆ ಡಿವಿಜಿಯವರು ರಾಜಕಾರಣ ದಲ್ಲೂ ತೊಡಗಿಕೊಂಡು ಸಾರ್ವಜನಿಕ ಸೇವೆಯತ್ತ ಕಾರ್ಯಗಳನ್ನು ವಿಸ್ತರಿಸಿ, ಎಲ್ಲರೂ ಗೌರವಿಸುವಂತಹ ಮಾದರಿ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವುದನ್ನು ತಿಳಿಸುತ್ತಾ ಹೋಗುತ್ತಾರೆ. ಜೊತೆ ಜೊತೆಗೆ ಅವರು ಸಾಹಿತ್ಯ ರಚನೆಯಲ್ಲೂ ತೊಡಗಿಕೊಂಡದ್ದನ್ನು ತಿಳಿಸುತ್ತಾರೆ.

ಈ ಕಿರು ಪುಸ್ತಕದಲ್ಲಿ ಪುಟ್ಟ ಪುಟ್ಟ ವಾಕ್ಯಗಳ ಹಾಗೂ ಚಂದದ ಚಿತ್ರಗಳ ಮೂಲಕ ಡಿವಿಜಿಯವರ ರಾಜಕೀಯ, ಕಲೆ, ಸಂಸ್ಕೃತಿ ಇತ್ಯಾದಿ ವಿಷಯಗಳ ಬಗೆಗಿದ್ದ ಪಾಂಡಿತ್ಯವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಡಿವಿಜಿಯವರಿಗೆ ಗೋಪಾಲಕೃಷ್ಣ ಗೋಖಲೆಯವರಲ್ಲಿ ಅಪಾರ ಗೌರವವಿದ್ದುದರಿಂದ, ಮುಂದೆ ಬೆಂಗಳೂರಿನ ಬಸವನಗುಡಿಯ ಒಂದು ಮನೆಯಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆ ಸ್ಥಾಪಿಸುತ್ತಾರೆ. ಈಗ ಅದು ತನ್ನದೇ ಆದ ದೊಡ್ಡ ಕಟ್ಟಡವನ್ನು ಹೊಂದಿ ಇಂದಿಗೂ ಡಿವಿಜಿಯವರ ನೆನಪಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಸಂಸ್ಥೆಯ ವಿಶೇಷತೆ ಏನೆಂದರೆ, ಇದರ ಅಧ್ಯಕ್ಷರು ಸದಾ ಕಾಲಕ್ಕೂ ಒಬ್ಬರೇ ಆಗಿದ್ದು, ಅವರು ಮತ್ಯಾರೂ ಅಲ್ಲದೆ, ಸಾಕ್ಷಾತ್ ಶ್ರೀರಾಮಚಂದ್ರನೇ ಆಗಿರುವುದು ವಿಶೇಷ. ಇದು ಡಿವಿಜಿಯವರ ಆಶಯವಾಗಿದ್ದು ಇಂದೂ ಹಾಗೆಯೇ ಮುಂದುವರೆದಿದೆ.

ಡಿವಿಜಿಯವರ ಸಾಹಿತ್ಯ ಕೃತಿಗಳ ಪರಿಚಯವನ್ನು ಹಾಗೂ ಅವುಗಳ ವಿಭಾಗೀಯ ಪಟ್ಟಿಗಳನ್ನು ಕೊಟ್ಟಿರುವುದು ಪ್ರಸಂಶನೀಯ. ಈ ಕೃತಿ ಮಕ್ಕಳಿಗಾಗಿ ಎಂದು ರಚಿಸಲಾಗಿದ್ದರೂ, ಎಲ್ಲ ವಯೋಮಾನದವರಿಗೂ ಉಪಯುಕ್ತ ಕೃತಿಯಾಗಿದ್ದು, ಒಂದು ರೀತಿ ಪುಟ್ಟ ಆಕರ ಗ್ರಂಥವೇ ಆಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

ಈ ಕೃತಿಯ ಮೂಲಕ ಡಿವಿಜಿಯವರ ಬದುಕು, ಸಾರ್ವಜನಿಕ ಸೇವೆ, ಪತ್ರಿಕೋದ್ಯಮ, ಸಾಹಿತ್ಯ ರಚನೆ, ವ್ಯಕ್ತಿತ್ವ ಚಿತ್ರಣ ಎಲ್ಲವೂ ಅತ್ಯಂತ ಆಪ್ತವೆನಿಸುವ ರೀತಿಯಲ್ಲಿ ಚಿತ್ರಿಸಲಾಗಿದ್ದು, ಮೊದಲ ಪುಟದಿಂದ ಕೊನೆಯ ಪುಟದವರೆಗೂ ಬಿಡದಂತೆ ಒಂದೇ ಓದಿಗೆ ಮುಗಿಸಿಬಿಡಬೇಕೆಂಬ ಆಸಕ್ತಿ ಕೆರಳಿಸುವ ಶಕ್ತಿ ಈ ಕೃತಿಗಿದೆ. ಅಷ್ಟೇ ಅಲ್ಲ, ಡಿವಿಜಿಯವರ ಕೃತಿಗಳನ್ನು ಓದಲೇಬೇಕೆಂಬ ತುಡಿತವೂ ಉಂಟಾಗುತ್ತದೆ. ಈ ಪುಸ್ತಕ ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಲಭ್ಯವಿದ್ದು ಸುಲಭ ದರದಲ್ಲಿ ದೊರೆಯುತ್ತಿದೆ. ಡಿವಿಜಿಯವರನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಶ್ರೀಯುತರಾದ ಸತ್ಯೇಶ್ ಬೆಳ್ಳೂರ್ ಹಾಗೂ ಗುಜ್ಜಾರಪ್ಪನವರು ಮಾಡಿದ್ದಾರೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ನಮನಗಳು.

ಈ ಪುಸ್ತಕವನ್ನು ಕೊಂಡು, ಮಕ್ಕಳಿಗೂ ಮುಟ್ಟಿಸುವ ಕರ್ತವ್ಯ ಹಾಗೂ ಜವಾಬ್ದಾರಿ ನಮ್ಮ ನಿಮ್ಮೆಲ್ಲರದ್ದಾಗಿದೆ.

***

ಅಮ್ಮ ನೀ ನಗುತಿರು... ನಾ ಬರುವೆನೆಂದು

- ಹೆಚ್. ಶ್ರೀಧರ ರಾವ್

ಅಮ್ಮ ನೀ ನಗುತಿರು... ನಾ ಬರುವೆನೆಂದು
ನಾನಂದು ಸಂಚರಿಸುತ್ತಿದ್ದೆ ನೀಲಾಕಾಶದಿ
ಚಂದಿರನ ಮನೋಲ್ಲಾಸದ ಹಾಲ್ಬೆಳಕಲಿ
ದಣಿಯುತ್ತಿದ್ದ ನಾ ಕಂಡೆ ಅಪೂರ್ವ ಜೋಡಿ

ಇರಲಿ, ನನಗಿರಲಿ ಅಪ್ಪ-ಅಮ್ಮ ಇವರೆಂದು
ಸಂಭ್ರಮದಿ ಸಂತಸದಿ ಬಂದೆ ಹರಸಿರೆಂದು
ಅಮ್ಮ ತಲೆಸುತ್ತು, ಮೂರ್ಛೆ ಕಣ್ಣು ಕತ್ತಲೆ
ಸಾಕೆ ಸಾಕು ಬೇಡವೆಂದರೂ ನಾ ಬಿಡೆನೆಂದೇ

ಎರಡು ವಾರ ಮೊಳಕೆಯೊಡಯುವ ತವಕ,
ಹಠಹಿಡಿದ ನಾ ಮೊಳೆತು ಫಲೀಕರಣವೆಂದೇ
ಇಂದು ನಾನೋ ಗೂಢವಾಗಿ ಭ್ರೂಣಾಂಶದಲ್ಲಿ
ಪಿಂಡಾಣು, ಅಂಡಾಣು ಚಿಗುರಿ ಬೆಳೆಯಲೆಂದು

ಆಯಿತೇನೋ ಐದಾರು ವಾರ ನರನಾಡಿ ಹೃದಯ
ನೀನಿತ್ತೆ ಮುದದಿ, ಕರೆದೆ ಬಾ ಬೇಗ ಮುದ್ದು ಕಂದ
ಏಳನೇ ವಾರವಿದೋ ನನ್ನೀ ಭವಿಷ್ಯ ರೂಪಿಸಮ್ಮ
ಅಮ್ಮ ನೀ ನಗುತಿರೆ ಸಂತಸ ಸಂಭ್ರಮ ಸದೃಢ

ಅರೆ, ಕೈ ಕಾಲು ಮೂಡುತ್ತಿದೆ ವಾರವಿದು ಎಂಟು
ನಿನಗಿದೋ ಈಗೇಕೆ ಕಸಿವಿಸಿ, ತೊಳಸುವಿಕೆಯೋ
ಮೂಲವಸ್ಥೆಯದು ಪಿಂಡಾಂಡಕೆ ವಾರ ಹತ್ತೋ
ಎರಡೇ ವಾರ ಕಾಯಮ್ಮಾ ನಾ ಮೂರ್ತನಾಗುವೆ

ಇದೆ ನನ್ನ ಭ್ರಮಣ ಹದಿನಾರರ ವಾರ ನಿರಂತರ
ಅಮ್ಮ ಅಲ್ಲಲ್ಲಿ ಗುದ್ದುವೇ, ಎಲ್ಲೆಲ್ಲೋ ಒದೆಯುವೆ
ಹಸಿವಾಯಿತೆಂದು ಬಾಯಾರಿಕೆಯೆಂದು ಬೇಸರವೇ
ಸಹಿಸುತ್ತಿರು ಬರುವೆ ಅಮ್ಮ ನಿನ್ನ ಸಂತೈಸಲೆಂದು

ಅಮ್ಮ ನೀ ತಗೋ, ಹಣ್ಣು ಹಂಪಲು ಸತ್ವಾಹಾರ
ಹಾಲು ಮೊಸರು ತುಪ್ಪ ಜೇನುತುಪ್ಪ ಪುಷ್ಟಿಯುತ
ಅಪ್ಪ ತರಲ್ಹೇಳು ಬೇಕಾದ ಸಮೃದ್ಧ ಸತ್ವ ತತ್ವ
ಅಮ್ಮ ನೀ ನಗು ನಗುತಲಿರು ನಾ ಬರುವೆನೆಂದು.

ನೀ ನಕ್ಕರೆ ಅದೇ ಸಕ್ಕರೆ ಸದೃಢತೆಯೇ ಶಕ್ತಿ ಚೇತನ
ನೀ ಅತ್ತರೆ ಅದೋ ಜಡತನ ದುಗುಡವೇ ನಿಶ್ಚೇತನ
ಅರಿಷಡ್ವರ್ಗ ಬಿಡು ನೀ, ನಾ ಸದೃಢ ಚೇತೋಹಾರಿ
ನಿರ್ಮಲ ಮನದಿ ನಾ ಕಾಣುವೆ ಸುಂದರ ಪ್ರಪಂಚ

ಸಹಿಸಿಕೋ ಇನ್ನಷ್ಟು ನೋವ ಬಸಿರು ಹೆರಿಗೆಯೋ
ಓದಿಕೋ ಮನತುಂಬಿ ಬರಲೆಂದು ನಾ ಕೇಳಲೆಂದು
ನೋಡ ದೇವರ ಆ ಕೃಷ್ಣ ಲೀಲೆ ನಾ ನೋಡಲೆಂದು
ನಾನಾಗ ತರುವೆ ತನು ಮನ ತುಂಬಿ ಹರ್ಷೋಲ್ಲಾಸ

ಅಮ್ಮ ನೀ ನಗು ನಗುತ್ತಲೇ ಇರು ನಾ ಬರುವೆನೆಂದು.

***

'ಛಲದಂಕಮಲ್ಲ ಪಾ.ರಾ.' ನಾಟಕ

ತೆರೆ ಏಳುವ ಮುನ್ನ

– ಧೀರೇಂದ್ರ ಎಸ್.

ಪಾ.ರಾಜಗೋಪಾಲರ ಅಭಿನಂದನಾ ಸಮಾರಂಭದಲ್ಲಿ ನಮ್ಮ ನಾಟಕ, 'ಛಲದಂಕಮಲ್ಲ ಪಾ ರಾ' ಪ್ರದರ್ಶನವನ್ನು ನೋಡಿ ಆನಂದಪಟ್ಟಿರುವಿರಿ. ಈ ನಾಟಕದ ಪ್ರದರ್ಶನಕ್ಕೂ ಮುನ್ನಿನ ತಯಾರಿಯ ಪ್ರಸಂಗಗಳು ಪ್ರೇಕ್ಷಕರಿಗೆ ತಿಳಿದಿರುವುದಿಲ್ಲ. ಅಲ್ಲಿ ಅನೇಕ ಸ್ವಾರಸ್ಯಕರ ಘಟನೆಗಳು ನಡೆದಿರುತ್ತವೆ. ಅಲ್ಲಿನ ಕೆಲವು ಪ್ರಸಂಗಗಳನ್ನು ನಿಮಗೆ ಪರಿಚಯಿಸುವ ಹಂಬಲ ನನ್ನದು. ಅವುಗಳನ್ನು ಒಂದೊಂದಾಗಿ ನಿಮ್ಮೆದುರು ಬಿಚ್ಚಿಡುತ್ತೇನೆ.

ಪಾ ರಾ ನಾಟಕ ಹುಟ್ಟಿದ ಬಗೆ:

ಪಾರಾ ಅಭಿನಂದನೆ ಸಮಾರಂಭದ ಕುರಿತು ನಡೆದ ಒಂದು ಸಭೆಯಲ್ಲಿ ನಾನೂ ಭಾಗವಹಿಸಿದ್ದೆ. ಕಾರ್ಯಕ್ರಮಗಳ ಚರ್ಚೆ ನಡೆದಾಗ ನಾಟಕ ಮಾಡುವ ಪ್ರಸ್ತಾಪವೂ ಬಂದಿತು. ಇದಕ್ಕೆ ಪ್ರೇರಣೆ – 'ಎಚ್ಚೆಸ್ಕೆ ಬೆಳಕು-9' ಕಾರ್ಯಕ್ರಮದಲ್ಲಿ ನಾವು ಮಾಡಿದ ನಾಟಕಗಳು! ಪಾ ರಾ ಬಗ್ಗೆ ಒಂದು ನಾಟಕ ಮಾಡಲು ಒಪ್ಪಿಕೊಂಡೆ. ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನವನ್ನು ರಂಗದ ಮೇಲೆ ತರುವುದು ಬಲು ಕಷ್ಟ. ಗೆಳೆಯ ಶ್ರೀರಂಗರಾಜನ್ ಜೊತೆ ಚರ್ಚೆ ಮಾಡಿದೆ. ಮೂರುನಾಲ್ಕು ದಿನಗಳಲ್ಲಿ ಐದು ನಿಮಿಷಗಳ ಒಂದು ಸಣ್ಣ ರೂಪಕ (ಸ್ಕಿಟ್) ಬರೆದು ಕಳಿಸಿದರು. ಆಯಿತು, ಇದನ್ನೇ ಬೆಳೆಸಿ ಅದಕ್ಕೊಂದು ರಂಗರೂಪ ಕೊಡೋಣ ಎಂದು ಹೇಳಿದೆ. ಅದಕ್ಕೆ ಇನ್ನಷ್ಟು ಘಟನೆಗಳನ್ನು ಸೇರಿಸಿ ಕಥೆಗೆ ಪೂರಕವಾಗುವಂತೆ ಸೂತ್ರಧಾರನ ಪಾತ್ರವನ್ನು ಮತ್ತಷ್ಟು ಬೆಳೆಸಿದೆ. ರಂಗಭೀಷ್ಮ ಬಿ.ವಿ.ಕಾರಂತರು ಮಾಡಿಸಿದ ಪಿ.ಲಂಕೇಶರ "ತೆರೆಗಳು ನಾಟಕದ (ಬಯಲಾಟ) ನೆನಪು ಬಂತು. ಅದರಲ್ಲಿ ಡಾ.ಚಂದ್ರಶೇಖರ ಕಂಬಾರರು ಬರೆದ ಹಾಡುಗಳಿದ್ದವು. ಕಾರಂತರು ಮತ್ತು ಸಿ.ಆರ್.ಸಿಂಹ ಇಬ್ಬರೂ ಅಭಿನಯಿಸಿದ್ದರು. ಈ ನಾಟಕ ಪ್ರದರ್ಶನ ಅಷ್ಟೇನೂ ಯಶಸ್ವಿಯಾಗಲಿಲ್ಲ. ಆದರೆ ಹಾಡುಗಳು ಚೆನ್ನಾಗಿದ್ದವು. ಆಗಾಗ ಗುನುಗಿಕೊಳ್ಳುತ್ತಿದ್ದುದರಿಂದ ನನ್ನ ನೆನಪಿನಲ್ಲಿ ಇದ್ದವು. ಆದರೆ ಲಿಖಿತ ರೂಪದಲ್ಲಿ ಎಲ್ಲೂ ಪ್ರಕಟವಾಗಿರಲಿಲ್ಲ.

ಅಲ್ಲಿನ ಮೂರು ಹಾಡುಗಳನ್ನು ಇಲ್ಲಿ ಸೂಕ್ತ ಬದಲಾವಣೆ ಮಾಡಿ ಬಳಸಿದೆ. ಆ ಹಾಡುಗಳೇ ೧.ಶರಣೆನ್ನುವೆನು ಶರಣೆನ್ನುವೆನು... ೨.ಮಾಡೋದೇನ್ರಿ ಸ್ವಾಮಿ ನಮ್ಮ ಮಂದೀನsssss ಹೀಂಗsss... ೩.ಕೇಳ್ರೋ ಹಡದಪ್ಪ ಮಾತsss...! ಇವು ನಮ್ಮ ನಾಟಕಕ್ಕೆ ಹೊಸ ಆಯಾಮವನ್ನು ಒದಗಿಸಿದವು.



ಇಷ್ಟಕ್ಕೇ ಸಮಾಧಾನವಾಗದೆ, ರಾಜ್ಯೋತ್ಸವ ಆಚರಣೆಯಲ್ಲಿ ಜಯ ಕರ್ನಾಟಕ ಜಯ ಕರ್ನಾಟಕ ಹಾಡನ್ನು ಬಳಸಿದೆ. ಈ ಹಾಡು ನಾನು 1966ರಲ್ಲಿ ನ್ಯಾಷನಲ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಖ್ಯಾತ ಗಾಯಕ ಮೈಸೂರು ಅನಂತಸ್ವಾಮಿ ಅವರ ಕಂಠದಲ್ಲಿ ಕೇಳಿದ್ದು! ಬೆಂ.ಶ್ರೀ. ರವೀಂದ್ರ ಅವರು ಬರೆದು ನಮ್ಮ ವೇದಿಕೆಯಲ್ಲಿ ಹಾಕಿದ್ದ ಮೂರು ಪದ್ಯಗಳನ್ನೂ ಬಳಸಿದೆ. ಅವುಗಳು– ೧)ಅಗೋ ಬಂದರು ಎಚ್ಚೆಸ್ಕೆ...' ೨) ಹೊರಟಿತು ಹೊರಟಿತು ಕನ್ನಡ ತೇರು... ೩) ಊರೂರು ತಿರುಗಿದರು ನಮ್ಮೊಂದಿಗೆ... – ಈ ಹಾಡುಗಳು ನಮ್ಮ ನಾಟಕದ ಮೌಲ್ಯವನ್ನು ಮತ್ತು ನಾಟಕೀಯತೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾದವು.

ನಾಟಕದಲ್ಲಿ ಮತ್ತಷ್ಟು ರಂಜನೀಯ ಅಂಶಗಳನ್ನು ತರಲು ಮಹಾಬಲ, ಪಾ.ರಾಜಗೋಪಾಲ, ಜಿ.ಎನ್. ನರಸಿಂಹಮೂರ್ತಿ ಅವರನ್ನು ಬ್ಯಾಂಕಿಂಗ್ ಕಮ್ಮಟಗಳ ಸ್ವಾರಸ್ಯಕರ ಪ್ರಸಂಗಗಳನ್ನು ಬರೆದು ಕಳುಹಿಸಲು ವಿನಂತಿಸಿದೆ. ಮಹಾಬಲ, ರಾಜಗೋಪಾಲರು ಕೆಲವು ಘಟನೆಗಳನ್ನು ತಿಳಿಸಿದರು ಅವುಗಳನ್ನೂ ಉಪಯೋಗಿಸಿದೆ. ಈಗ ನಾಟಕಕ್ಕೊಂದು ಸ್ವರೂಪ ಬಂದಿತು. ರವೀಂದ್ರ, ಶ್ರೀರಂಗರಾಜನ್, ಗುರುರಾಜ ಶಾಸ್ತ್ರಿ ಅವರಿಗೆ ನಾಟಕದ ಕರಡನ್ನು ಕಳುಹಿಸಿ ಅಭಿಪ್ರಾಯ ಕೇಳಿದೆ. ಚೆನ್ನಾಗಿದೆ, ಮಾಡಬಹುದು ಎಂಬ ಅಭಿಪ್ರಾಯ ಬಂದಿತು. ಹುಮ್ಮಸ್ಸು ಹೆಚ್ಚಾಯಿತು. ಪಾತ್ರಗಳನ್ನು ಹಂಚಿ ತಾಲೀಮು ಆರಂಭಿಸಿದೆವು. ಆರಂಭದಲ್ಲಿ ಸೂತ್ರಧಾರನ ಪಾತ್ರ ಬಹಳ ದೊಡ್ಡದಾಗಿತ್ತು. ಇದನ್ನು ವಿಭಜಿಸಿ ಇನ್ನಿಬ್ಬರು ಸೂತ್ರಧಾರರನ್ನು ಸೃಷ್ಟಿಸಿ ಹಂಚಿದರೆ ಚೆನ್ನಾಗಿರುತ್ತದೆ ಎಂಬ ಅಭಿಪ್ರಾಯ ಬಂದಿತು. ನನಗೂ ಇದು ಸರಿ ಎನ್ನಿಸಿ ಅದನ್ನು ಕಾರ್ಯರೂಪಕ್ಕೆ ತಂದೆ. ಇದರಲ್ಲಿ ನನ್ನ ಸ್ವಾರ್ಥವೂ ಇತ್ತು ಎನ್ನಿ. ನಾನೇ ಮುಖ್ಯ ಸೂತ್ರಧಾರನಾಗಿದ್ದುದರಿಂದ ನನ್ನ ಸಂಭಾಷಣೆಗಳು ಬಹಳ ಉದ್ದವಾಗಿದ್ದವು. ಈ ಸಲಹೆಯಿಂದ ನನ್ನ ಹೊರೆ ಕಡಿಮೆಯಾಯಿತು. ನಾಟಕಕ್ಕೆ ವೇಗದ ಗತಿ ಸಿಕ್ಕಿತು. ಏಕತಾನತೆ ಮಾಯವಾಯಿತು.

ಇನ್ನು ದೃಶ್ಯಚಿತ್ರಗಳನ್ನು ಅಳವಡಿಸುವ ಕೆಲಸ. ನಮ್ಮಲ್ಲಿ ಯಾರ ಬಳಿಯೂ ಬೆಂಗಳೂರು ಸಿಟಿ ಮಾರ್ಕೆಟ್ ಬಳಿಯಿದ್ದ ನಗರ ಶಾಖೆಯ ಚಿತ್ರ ಇರಲಿಲ್ಲ. ಈಗ ಬ್ಯಾಂಕ್ ಶಾಖೆಯೂ ಅಲ್ಲಿಲ್ಲ. ಆ ಕಟ್ಟಡ ಕೂಡ ಸಾಕಷ್ಟು ಬದಲಾವಣೆ ಹೊಂದಿದೆ. ಇದು ಸವಾಲಿನ ಕೆಲಸವಾಗಿತ್ತು. ಆದರೂ ಅಲ್ಲಿಗೆ ಹೋಗಿ ಆ ಕಟ್ಟಡದ ಚಿತ್ರ ತೆಗೆದು ಚಿತ್ರದ ಮೇಲೆ ನಮ್ಮ ಬ್ಯಾಂಕ್ ಫಲಕವನ್ನು ಅಂಟಿಸಿ ಉಪಯೋಗಿಸಿದೆವು. ಜಾಲತಾಣದಲ್ಲಿ ಶಿವರಾಮ ಕಾರಂತರ ಚಿತ್ರ, ಎಚ್ಚೆಸ್ಕೆ ಚಿತ್ರ ಸಿಕ್ಕಿತು, ಬಳಸಿದೆ. ಇನ್ನು ರಾವಣನ ಆಸ್ಥಾನಕ್ಕೂ ಜಾಲತಾಣದ ಮೊರೆಹೋದೆ, ದೊರಕಿತು. ಇನ್ನು ಗಾಜನೂರು ಕಮ್ಮಟದಲ್ಲಿ ಕಂಡುಬಂದ ಹಾವು ಗುಬ್ಬಚ್ಚಿಯ ಚಿತ್ರ ಸಂಗ್ರಹಣೆ ಸವಾಲಿನದಾಗಿತ್ತು. ಕೃತಕ ಬುದ್ಧಿಮತ್ತೆ ತಂತ್ರಾಂಶ ಈ ಚಿತ್ರವನ್ನು ಕೊಟ್ಟಿತು.

ಇನ್ನು ರಾವಣನಿಗೊಂದು ಗದೆ ಬೇಕಲ್ಲ?! ಬಾಡಿಗೆಗೆ ತರಬಹುದಿತ್ತೇನೋ! ಆದರೆ ದುಬಾರಿ ಬಾಡಿಗೆ. ಮಕ್ಕಳಾಟದ ಪ್ಲಾಸ್ಟಿಕ್ ಗದೆ ಕೊಂಡುಕೊಂಡೆ. ಇದು ಬಹಳ ಚಿಕ್ಕದಾಯಿತು ಎನ್ನಿಸಿತು. ಬೆಳಿಗ್ಗೆ ವಾಯು ವಿಹಾರಕ್ಕೆ ಹೋದಾಗ ಗರಿ ಕಳೆದುಕೊಂಡ ತೆಂಗಿನ ಗರಿಯ ತುಂಡೊಂದು ಕಾಣಿಸಿ, ಎತ್ತಿಕೊಂಡು ಬಂದೆ. ಎರಡು ದಿನ ಆ ತುಂಡಿನೊಂದಿಗೆ ತಾಲೀಮು ನಡೆಯಿತು. ಆಮೇಲೆ ಆ ತುಂಡಿಗೆ ಪ್ಲಾಸ್ಟಿಕ್ ಗದೆಯನ್ನು ಕಟ್ಟಿ, ಅದಕ್ಕೆ ನಮ್ಮಾಕೆಯ ನಾಲ್ಕು ಸೀರೆ ಗಳನ್ನು ಸುತ್ತಿ ನಿಜವಾದ ಗದೆಯ ಆಕಾರಕ್ಕೆ ತಂದೆ. ತಾಲೀಮಿನಲ್ಲಿ ಎಲ್ಲರಿಗೂ ಖುಷಿ ಯಾಯಿತು. ಇನ್ನು ರಾವಣನ ವಿಭೀಷಣರ



ವೇಷಭೂಷಣಗಳು. ಇಬ್ಬರಿಗೂ ದಪ್ಪ ಕಾಗದದಲ್ಲಿ ಕಿರೀಟ, ತೋಳುಬಂದಿ, ಮುಂಗೈ ಬಂದಿಗಳನ್ನು ಮಾಡಿಕೊಂಡು ಬರಲು ತಿಳಿಸಿದೆ. ಉತ್ಸಾಹದಿಂದ ಒಪ್ಪಿದರು. ಅವರ ಮನೆಗಳಲ್ಲಿ ಅವರ ಸೊಸೆಯಂದಿರು ಬಹಳ ಖುಷಿಯಿಂದ ತಯಾರಿಸಿ ಕೊಟ್ಟರು! ಅವರ ಮಾವಂದಿರು ಈ ವಯಸ್ಸಿನಲ್ಲಿ ನಾಟಕದಲ್ಲಿ ಅಭಿನಯಿಸುವುದು ಅವರಿಗೂ ಬಹಳ ಖುಷಿ ನೀಡಿದ ಸಂಗತಿ. ಮನೆಯಲ್ಲಿದ್ದ ರೇಷ್ಮೆ ಮಗುಟಗಳನ್ನು, ಶಲ್ಯಗಳನ್ನು ಅವರ ಉಡುಪಿಗೆ ಬಳಸಿದೆ. ಎಲ್ಲವೂ ಸರಿ, ಆದರೆ ಇಬ್ಬರಿಗೂ ನೀಳ ಕೇಶ ಬೇಕಿತ್ತು. ರಾವಣನ ಪಾತ್ರಧಾರಿಯದು ಪೂರಾ ಬಕ್ಕ ತಲೆ! ಎರಡು ಚೌರಿಗಳನ್ನು ತರಲು ತಿಳಿಸಿದೆ. ಗಾಯಕಿ ವಿಜಯಲಕ್ಷ್ಮಿ ತಮ್ಮ ಮನೆಯಿಂದ ಎರಡು ಚೌರಿಗಳನ್ನು ತಂದುಕೊಟ್ಟರು. ಅವುಗಳ ಜಡೆ ಬಿಚ್ಚಿ, ಕೂದಲನ್ನು ಬಾಚಿ, ಸಿಕ್ಕು ಬಿಡಿಸಿ, ನೇರ ಮಾಡಿ ಒಂದು ಪೇಟಕ್ಕೆ ಕ್ಲಿಪ್ ಹಾಕಿ ಕಟ್ಟಿದೆ. ಈ ಪೇಟ ನನಗೆ 'ಗ್ರಂಥದ ಗುಡಿ' ಸಾರ್ವಜನಿಕ ವಾಚನಾಲಯದಲ್ಲಿ ಹೋದ ವರ್ಷ ಸನ್ಮಾನಿತನಾದಾಗ ಸಿಕ್ಕದ್ದು. ಈಗ ಹೀಗೆ ಉಪಯೋಗಕ್ಕೆ ಬಂದಿತು. ಇನ್ನೊಂದು ಪೇಟವಿರಲಿಲ್ಲ. ಮನೆಯಲ್ಲಿದ್ದ ಉಣ್ಣೆಯ ಟೋಪಿಗೇ ಕಟ್ಟಿದೆ. ಎರಡೂ ತಯಾರಾದವು. ಆಭರಣಗಳಿಗೆ, ಮನೆಯಲ್ಲಿದ್ದ ಸರಗಳನ್ನು, ಹಾರಗಳನ್ನು ಬಳಸಿದೆ. ಎಲ್ಲವೂ ತಯಾರಾದವು.



ಭಾನುವಾರ ನಾಟಕ, ಬುಧವಾರ ಅನಿರೀಕ್ಷಿತ ಸುದ್ದಿ. ಪಾ ರಾಜಗೋಪಾಲ ಜಯದೇವ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಾಗಿದ್ದಾರೆ ಎಂದು. ಜಂಘಾಬಲವೇ ಉಡುಗಿತು. ಶುಕ್ರವಾರ ಚೇತರಿಕೆಯ ಸುದ್ದಿ ಬಂದು, ನಮಗೂ ಚೈತನ್ಯ ಬಂತು. ಮುಂದೆ ನಡೆದದ್ದು ನಿಮ್ಮ ಕಣ್ಣಮುಂದೆ! ನಾಟಕ ಯಶಸ್ವಿಯಾಯಿತು. ನಿಮ್ಮ ಮೆಚ್ಚುಗೆಗೆ ಪಾತ್ರವಾಯಿತು. ಅದರ ಹಿಂದಿನ ಕಥೆ ಈಗ ನಿಮ್ಮ ಮುಂದೆ!

***

ಸಂತೋಷ ನೆಮ್ಮದಿ ಎಂದರೇನು?

– ಸುಜಾತಾ ರವೀಶ್, ಮೈಸೂರು

ಬದುಕ ಪಯಣದಲಿ ನೆಮ್ಮದಿ ಸಂತೋಷ ಗಮ್ಯವಾಗುವದಿಲ್ಲ. ಬರೀ ತಂಗುದಾಣಗಳು ಅಷ್ಟೇ. ಈ ಮರೀಚಿಕೆಗಳ ಅನುಸರಿಸುತ್ತಾ ಬಾಳಿಡೀ ಕಳೆದುಬಿಡುತ್ತೇವೆ. ಇನ್ನೇನು ನೆಮ್ಮದಿ ಕಾಣುವೆವೆಂದಾಗ ವಾಸ್ತವತೆ ಗಹಗಹಿಸಿ ನಕ್ಕು ಬಿಡುತ್ತದೆ. ಸಂತೋಷದಲೆಗಳ ಮರ್ಮರ ಮೂಕವಾಗಿ ಬಿಟ್ಟಿರುತ್ತದೆ. ಜೀವನವಿಡೀ ಕಣ್ಣಮುಚ್ಚಾಲೆಯಾಡುವ ಇವುಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವುದೇ ಜೀವನ ಕಲೆ.

ಮಾನ್ಯ ಡಿ.ವಿ.ಜಿ ಯವರು ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳುತ್ತಾರೆ:

> ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
> ದೊರೆತುದ ಹಸಾದವೆಂದುಣ್ಣು ಗೊಣಗಿಡದೆ:
> ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ
> ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ ॥೬೦೧॥

ಒಬ್ಬ ಮನುಷ್ಯನ ಜೀವನ ಹೇಗಿರಬೇಕು ಎಂಬುದನ್ನು ಡಿವಿಜಿಯವರು ಈ ಸರಳ ನುಡಿಗಳಲ್ಲಿ ತಿಳಿಸಿಕೊಟ್ಟಿದ್ದಾರೆ ನೋಡಿ. "ಉದ್ಯೋಗಂ ಪುರುಷ ಲಕ್ಷಣಂ" ಬೇಕಾದರೆ ಇಂದಿನ ಕಾಲಮಾನಕ್ಕೆ "ಉದ್ಯೋಗಂ ಮನುಜ ಲಕ್ಷಣಂ" ಎಂದುಕೊಳ್ಳೋಣ. ಜೀವಿಸಲು ಉದ್ಯೋಗ ಬೇಕು. ಎಲ್ಲರೂ ಮೇಲುಸ್ತರದ ಉದ್ಯೋಗವನ್ನೇ ಬಯಸಿದರೆ ಕೆಳಸ್ತರದ ಉದ್ಯೋಗ ಮಾಡುವವರು ಯಾರು? ವ್ಯವಸ್ಥೆಯಲ್ಲಿ ಹಿರಿದು ಕಿರಿದು ಅನ್ನುವುದಿಲ್ಲ. ಆದರೆ ದೃಷ್ಟಿಕೋನದಲ್ಲಿದೆ. ನಮಗೆ ದೊರೆತಿರುವ ಅವಕಾಶವನ್ನು ಬಳಸಿ ಕೆಲಸವನ್ನು ಲಕ್ಷ್ಯಕೊಟ್ಟು ಮಾಡಬೇಕು. ಆಗಲೇ ಪ್ರಗತಿ ಸಾಧ್ಯ. ಮತ್ತೆ ನಮಗೆ ಲಭ್ಯವಾದುದರ ಬಗ್ಗೆ ದೇವರ ಪ್ರಸಾದ ಎಂಬ ಗೌರವ ಭಾವನೆ ಬೆಳೆಸಿಕೊಂಡು ಹಸಾದವೆಂದು ಭಾವಿಸಿ ಸ್ವೀಕರಿಸಬೇಕು. ನಮ್ಮನ್ನು ನಾವು ಎಷ್ಟೇ ಹಿರಿದಾಗಿ ಭಾವಿಸಿದರೂ ನಾವು ಏನು ಅನ್ನುವುದನ್ನು ಭಗವಂತ ನಿರ್ಧರಿಸುತ್ತಾನೆ. ಅವನ ದೃಷ್ಟಿಯಲ್ಲಿ ನಾವು ಎಷ್ಟು ಯೋಗ್ಯರೋ ಅಷ್ಟನ್ನೇ ದಯಪಾಲಿಸುತ್ತಾನೆ. ಇದಕ್ಕೆ ಪೂರ್ವಜನ್ಮದ ಕರ್ಮ ವಿಶೇಷಗಳ ಬಂಧನವೂ ಇರುತ್ತದೆ. ಹಾಗಾಗಿ ಎಲ್ಲಾ ಅವನಿಚ್ಛೆ ಎಂದು ನಡೆದರೆ ನಿರಾಶೆ, ಖಿನ್ನತೆ ಕಾಡದು. ಇದೇ ಮನೋಭಾವದಿಂದಲೇ ಸಂಸಾರದಲ್ಲಿದ್ದರೂ ಸ್ಥಿತಪ್ರಜ್ಞತೆಯನ್ನು ರೂಢಿಸಿಕೊಳ್ಳಬಹುದು. ಪಾರಮಾರ್ಥದ ಕಡೆ ಗಮನಹರಿಸಬಹುದು. ಈ ಪ್ರಾಪಂಚಿಕ ವ್ಯವಹಾರಗಳ ಲೇಪವನ್ನು ಕಮಲ ಪತ್ರದ ಮೇಲಿನ ನೀರಿನ ಹನಿಯಂತೆ ನಾವು ಮಾಡಿಕೊಂಡಾಗ ಇಹದ ಲೌಕಿಕದ ಭಾರವನ್ನು ಪರಕ್ಕೆ, ಪರಮಾತ್ಮನಿಗೆ ವಹಿಸಿ ನಾವು ನಿರಾಳರಾಗಬಹುದು ನಿಶ್ಚಿಂತರಾಗಬಹುದು. ಗೀತೆ ಹೇಳುವುದು ಇದನ್ನೇ ತಾನೆ? ಈ ರೀತಿಯ ಸಮಚಿತ್ತ ಬೆಳೆಸಿ ಕೊಂಡಾಗ ಸಾವಿನ ಭಯ ಕಾಡುವುದಿಲ್ಲ. ಕಾಲನ ಕರೆಗೆ ಓಗೊಡಲೇ ಬೇಕು. ಗೋಳಿಡುತ್ತಾ ಅಳುತ್ತಾ ಹೋಗದೆ ಸದಾ ಸಿದ್ಧರಾಗಿದ್ದು, ಬಾ ಎಂದೊಡನೆ ನಗುನಗುತ್ತಾ ಹೊರಟರೆ ಎಷ್ಟು ಚೆನ್ನ ಅಲ್ಲವೇ?

ಖಂಡಿತ ಇದನ್ನು ಅನುಸರಿಸುವವರ ಜೀವನದಲ್ಲಿ ನೆಮ್ಮದಿ ಸಂತೋಷ ಅವರನ್ನೇ ಅರಸಿಕೊಂಡು ಬರುತ್ತವೆ.

ಸಾಮಾನ್ಯವಾಗಿ ಸಮಾನಾರ್ಥದಲ್ಲಿ ಬಳಸುವ ಈ ಪದಗಳಲ್ಲಿ ಸ್ವಲ್ಪಮಟ್ಟಿನ ಭೇದವನ್ನು ಕಾಣಬಹುದು. ಮನಸ್ಸಿನ ಸಾಮಾನ್ಯ ಸ್ಥಿತಿ ಚಿಂತೆ ನೋವು ಸಮಸ್ಯೆಗಳಿಲ್ಲದಾಗ ನೆಮ್ಮದಿ ಎನ್ನಬಹುದು. ಇನ್ನಷ್ಟು ಪ್ರೌಢ ಮನಸ್ಸುಗಳು ಈ ಎಲ್ಲಾ ಪ್ರತಿಕೂಲ ಪರಿಸ್ಥಿತಿಗಳನ್ನು ಮೀರಿಯೂ ನೆಮ್ಮದಿಯಾಗಿರಬಹುದು. ನೆಮ್ಮದಿಯೆಂದರೆ ಅದು ಮಾನಸಿಕ ಸ್ಥಿತಿ. ದೀರ್ಘಕಾಲೀನ ಅನುಭವಗಳ ಮೇಲೆ ಅವಲಂಬಿತ. "ಏನೋ ಹೊಟ್ಟೆ ಬಟ್ಟೆಗೆ ಕಡಿಮೆ ಇಲ್ಲ ನೆಮ್ಮದಿಯಾಗಿದ್ದೀವಿ" ಎನ್ನುವ ನುಡಿಗಳಲ್ಲಿ ಇದು ವೇದ್ಯ.

ಇನ್ನು ಸಂತೋಷ ನೆಮ್ಮದಿಗಿಂತ ಇನ್ನೂ ಮುಂದಿನ ಸ್ಥಿತಿ. ಹೆಚ್ಚಿನ ಆನಂದದ ಅನುಭವ. ನೆಮ್ಮದಿಯಾಗಿ ದಿನ ಕಳೆಯುವ ಕುಟುಂಬಕ್ಕೆ ಅನಿರೀಕ್ಷಿತ ಧನಾಗಮನ ತರುವ ಸ್ಥಿತಿ ಸಂತೋಷ. ಇದು ಸ್ವಲ್ಪ ತತ್ಕಾಲದ ಮನಸ್ಸಿನ ಅನುಭಾವ. ಹೀಗೆ ಬಂದು ಹೀಗೆ ಮಾಯವಾಗುವ ಕೋಲ್ಮಿಂಚಿನಂತೆ ಅಂತರಂಗದ ಅನುಭೂತಿ ಸಂತೋಷವಾದರೆ ನೆಮ್ಮದಿ ಸದಾ ಆಗಸದಲ್ಲಿ ಕಾಣುವ ಬಿಳಿ ಮುಗಿಲಿನಂತೆ. ಸಂತೋಷ ಯಾವುದಾದರೂ ಘಟನೆಯ ಮೇಲೆ ಅವಲಂಬಿಸಿ ಬಹಿರಂಗಕ್ಕೆ ಆತುಕೊಂಡಿದ್ದರೆ ನೆಮ್ಮದಿ ಅಂತರಂಗದಲ್ಲಿ ನಾವಾಗಿ ತಂದುಕೊಳ್ಳುವ ಅನುಭೂತಿ, ಕಂಡು ಕೊಳ್ಳುವ ಪರಿಸ್ಥಿತಿ. ಬಾಹ್ಯದ ಘಟನೆಗಳು ಅವುಗಳನ್ನು ವಿಚಲಿತಗೊಳಿಸವು. "ಸಾಕು ಎನ್ನುವ ಶ್ರೀಮಂತ, ಬೇಕು ಎನ್ನುವ ಬಡವ" ಎಂಬಂತೆ ಇಲ್ಲಿ ಬೇಕು ಬೇಕೆಂದು ಹಪಹಪಿಸಿ ಲೌಕಿಕದ ವಸ್ತುಗಳನ್ನು ಬಯಸಿ ಸಿಕ್ಕಾಗ ಅದು ಸಂತೋಷ. ಸಾಕು ಎನ್ನುವ ತೃಪ್ತಿಯನ್ನು ಮೈಗೂಡಿಸಿಕೊಂಡವನು ಏನಿಲ್ಲದಿದ್ದರೂ ಇರುವುದರಲ್ಲಿ ಕಾಣುವ ಸ್ವಭಾವ ನೆಮ್ಮದಿ.

ಮರುಳು ಮುನಿಯನ ಕಗ್ಗ ಹೀಗೆನ್ನುತ್ತದೆ

ಮರುಳು ಮುನಿಯನ ಮನಸು ಸರಳ ಬಾಳ್ವೆಯ ಕನಸು
ಸರಸ ಋತ ಸೌಜನ್ಯ ಶಾಂತಿಗಳ ಸೊಗಸು
ಕೆರೆಯಿನೆದ್ದೆಲೆಯಿರದೆ ತಣಿವ ತುಂತುರನಿನಿತು
ಮರಳಿ ತೆರೆ ಸೇರ್ಪುದಲ – ಮರಳು ಮುನಿಯ

ಮರಳುಮುನಿಯ ಎಂದರೆ ಇಲ್ಲಿ ಜನಸಾಮಾನ್ಯ. ಸರಳಜೀವಿಯಾಗಿದ್ದಷ್ಟೂ ವಿನೋದ, ಸತ್ಯ, ವಿನಯ, ಶಾಂತಿ ಇರುತ್ತದೆ ಮತ್ತು ಅದೇ ನೆಮ್ಮದಿ. ಜಲಚಕ್ರದ ಆದಿ ಅಂತ್ಯದಂತೆ ತನ್ನಿರುವಿನಿಂದ ಸುತ್ತಣ ಜಗಕ್ಕೆ ತಂಪು ನೀಡುವುದೇ ನೆಮ್ಮದಿ. ಪ್ರಾಮಾಣಿಕತೆಯಿಂದ ಸತ್ಪಥದಲ್ಲಿ ನಡೆಯುವವನಿಗೆ ಸದಾ ನೆಮ್ಮದಿ. ಈ ಅಂತರ್ಗತ ನೆಮ್ಮದಿಯನ್ನು ಬಹಿರ್ಗತಗೊಳಿಸಿ ಹೂವು ಕಂಪು ಹರಡುವಂತೆ ಅವನು ತಾನು ಸಂತೋಷಪಟ್ಟು ಸುತ್ತಲಿನವರಿಗೂ ಸಂತೋಷ ಹಂಚುತ್ತಾನೆ.

ಸಕಾರಾತ್ಮಕ ಚಿಂತನೆ ವರ್ತನೆಗಳು ಸದಾ ನೆಮ್ಮದಿಯನ್ನುಂಟು ಮಾಡುತ್ತವೆ. ರೋಷಾದಿ ಅರಿಷಡ್ವರ್ಗಗಳನ್ನು ದಮನಿಸಿದಾಗ ಸಂತೋಷ ಉಂಟಾಗುತ್ತದೆ. ನೆಮ್ಮದಿಯು ಭಾವನೆಗಳಲ್ಲಿ ಪ್ರತಿಫಲಿಸಿದಾಗ ಸಂತೋಷದ ಸ್ಥಿತಿ ಮೂಡುತ್ತದೆ. ಮೂರು ದಿನಗಳ ಬಾಳಿನ ಘಮಘಮಿಸಿ ನಗುವ ಹೂ ತಾನು ಅಂದವಾಗಿ ಕಾಣುತ್ತದೆ, ನೋಡುವವರಿಗೂ ಆನಂದ ನೀಡುತ್ತಾ ಸೌರಭವನ್ನು ಸುತ್ತಮುತ್ತಲಿನವರಿಗೂ ಹಂಚಿ ಆಹ್ಲಾದ ತರುತ್ತದೆ. ಹಾಗೆಯೇ ಸಂತೋಷ ನೆಮ್ಮದಿ ಎರಡೂ ಹಂಚಿದಷ್ಟೂ ಹೆಚ್ಚಾಗುವ ಆಸ್ತಿ. ಇನ್ನು ಮುಂದಾದರೂ ಅವುಗಳನ್ನು ಉಳಿಸಿ ಬೆಳೆಸಿ ಸಮಾಜಕ್ಕೂ ನೀಡೋಣವಲ್ಲವೇ?

***

ಶಾಂತರಸ

– ಗಣಪತಿ ಹೆಗಡೆ

ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ।
ಯಥೋಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೆ॥
ಇದು ಕಾವ್ಯದ ಕುರಿತಾದ ಹೆಚ್ಚುಗಾರಿಕೆಯನ್ನು ಹೇಳುವ ಒಂದು ಶ್ಲೋಕ.

ಯಾವುದು ಆಸ್ವಾದ್ಯವೋ ಅದು ರಸ. 'ರಸ' ಎನ್ನುವುದು ಕಾವ್ಯದಿಂದ ಅಥವಾ ಆಹಾರದಿಂದ ಪಡೆಯುವ ಆನಂದಾನುಭವ ಎಂಬ ಅರ್ಥವನ್ನೂ ಒಳಗೊಂಡಿದೆ.

ಬ್ರಹ್ಮ ಸೃಷ್ಟಿಯಲ್ಲಿ ಆಸ್ವಾದ್ಯವಾದದ್ದು ಷಡ್ರಸಗಳು. [ಮಧುರ (ಸಿಹಿ), ಆಮ್ಲ (ಹುಳಿ), ಲವಣ (ಉಪ್ಪು), ಕಟು (ಖಾರ, ತೀಕ್ಷ್ಣ), ಕಷಾಯ (ಒಗರು), ತಿಕ್ತ (ಕಹಿ) ಇವು ಷಡ್ರಸಗಳು.] ಇವುಗಳನ್ನು ಸೌಹಿತ್ಯದ ಭಾಗ ಎನ್ನುತ್ತಾರೆ.

ಕವಿಸೃಷ್ಟಿಯಲ್ಲಿ ಆಸ್ವಾದ್ಯವಾದದ್ದು ನವರಸಗಳು. (ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಇವು ಒಂಬತ್ತು ರಸಗಳು.) ಇವುಗಳನ್ನು ಸಾಹಿತ್ಯದ ಭಾಗ ಎನ್ನುತ್ತಾರೆ.

ಷಡ್ರಸಗಳ ಉತ್ಪತ್ತಿ ಸ್ಥಾನ ನಾಲಿಗೆಯಾದರೆ, ನವರಸಗಳ ಉತ್ಪತ್ತಿ ಸ್ಥಾನ ಮನಸ್ಸು.

ಆದರೆ, ಶೃಂಗಾರ ಹಾಸ್ಯ ಕರುಣಾ ರೌದ್ರವೀರ ಭಯಾನಕಾಃ।
ಬೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ ನಾಟ್ಯೇರಸಾಃ ಸ್ಮೃತಾಃ॥
ಹೀಗೆ ರಸಗಳು ಎಂಟೇ ಅಂತಲೂ ನಾಟ್ಯ ಶಾಸ್ತ್ರದಲ್ಲಿ ಗುರುತಿಸುವದುಂಟು. ಅದಕ್ಕೆ ಕಾರಣವೂ ಉಂಟು.

ಸ್ಥಾಯೀಭಾವದ ಜೊತೆಗಿನ ಸಂಚಾರೀಭಾವದ ಸಂಯೋಗದಿಂದ ರಸೋತ್ಪತ್ತಿಯಾಗುತ್ತದೆಯಂತೆ. ಹೀಗೆ ಅಷ್ಟರಸ ಗಳಲ್ಲಿ ಪ್ರತಿಯೊಂದು ರಸವೂ ಬೇರೆ ಬೇರೆ ಸ್ಥಾಯೀಭಾವದಿಂದ ಹುಟ್ಟಿಕೊಳ್ಳುತ್ತದೆ.

ಸ್ಥಾಯೀಭಾವ ಹಾಗೂ ರಸಗಳ ಸಂಬಂಧಗಳನ್ನು ಒಮ್ಮೆ ಪರಿಶೀಲಿಸೋಣ.
ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ।
ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯೀಭಾವಾಃ ಪ್ರಕೀರ್ತಿತಃ॥ (ಭರತಮುನಿ)

ಸ್ಥಾಯೀಭಾವ	**ರಸ**
ರತಿ –	ಶೃಂಗಾರ
ಹಾಸ –	ಹಾಸ್ಯ
ಶೋಕ –	ಕರುಣ
ಕ್ರೋಧ –	ರೌದ್ರ
ಉತ್ಸಾಹ –	ವೀರ
ಭಯ –	ಭಯಾನಕ
ಜುಗುಪ್ಸಾ –	ಬೀಭತ್ಸ
ವಿಸ್ಮಯ –	ಅದ್ಭುತ

ಮನಸ್ಸು ಒಂದು ಸರೋವರವಿದ್ದ ಹಾಗೆ. ಸರೋವರದಲ್ಲಿ ಹೊರಗಿನಿಂದ ಒಂದು ಕಲ್ಲು ಬಿದ್ದರೆ ತರಂಗಗಳೆದ್ದು ಹರಡುತ್ತಾ ಹೋಗುತ್ತವೆ. ಹಾಗೆಯೆ ಮನಸ್ಸು ಕೂಡ ಹೊರಗಿನ ಪ್ರಚೋದನೆಗಳಿಗೆ ಪ್ರತಿಕ್ರಿಯೆ ತೋರಿಸುತ್ತಾ, ತರಂಗಗಳೇಳುತ್ತಲೇ ಇರುತ್ತವೆ. ಇವುಗಳೇ ಭಾವಗಳು. ಬೇರೆ ಬೇರೆ ಭಾವಗಳೇ ವಿವಿಧ ರಸಗಳಿಗೆ ಪ್ರಚೋದಕಗಳು.

ಇವುಗಳಲ್ಲಿ ಮುಖ್ಯವಾಗಿ ಎರಡು ಬಗೆ – ಸ್ಥಾಯಿ ಭಾವಗಳು, ಸಂಚಾರಿ (ವ್ಯಭಿಚಾರಿ) ಭಾವಗಳು.

ಸ್ಥಾಯಿಯಾಗಿ, ಮನಸ್ಸಿನಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸದಾ ಇರುವಂಥವೇ ಸ್ಥಾಯಿಭಾವಗಳು. ಅವುಗಳೊಂದಿಗೆ ಬಂದು ಹೋಗುವಂಥವೇ ಸಂಚಾರಿ ಭಾವಗಳು. ಲೋಕದ ಈ ಭಾವಗಳು ಕಲೆಯಲ್ಲಿ ತಮ್ಮ ಲೌಕಿಕತೆಯನ್ನು ಕಳೆದುಕೊಂಡು ಆಸ್ವಾದ್ಯವಾಗುತ್ತವೆ. ಲೋಕಾನುಭವದಿಂದ ಭಿನ್ನವಾದ ವಿಶಿಷ್ಟ ಅನುಭವಗಳಾಗುತ್ತವೆ. ಆನಂದ ಕೊಡುವ ಈ ಅನುಭವವೇ 'ರಸ'. ಸ್ಥಾಯಿಭಾವ ಲೋಕಭಾವವನ್ನು ಕಳೆದುಕೊಂಡು ಆಸ್ವಾದ್ಯವಾಗುತ್ತದೆ; ಇದೇ ರಸ.

ಎಂಟು ಸ್ಥಾಯೀಭಾವಗಳಾದಲ್ಲಿ ಶಾತರಸಕ್ಕೆ ಯಾವುದು ಸ್ಥಾಯೀಭಾವ?.

"ಭರತ ಹೇಳಿದ ಎಂಟು ರಸಗಳ ಜೊತೆಗೆ ಅನಂತರ ಕಾಲದಲ್ಲಿ ಇತರ ರಸಗಳೂ ಸೇರ್ಪಡೆಯಾದವು. ಇವುಗಳಲ್ಲಿ ಮುಖ್ಯವಾದದ್ದು ಶಾಂತರಸ. ಮೊಟ್ಟಮೊದಲಿಗೆ ಶಾಂತರಸವನ್ನು ಕುರಿತು ಪ್ರಸ್ತಾಪಿಸಿದವನು ಉದ್ಭಟ. ಇವನು ತನ್ನ ಕಾವ್ಯಾಲಂಕಾರ ಸಾರಸಂಗ್ರಹದಲ್ಲಿ ಶಾಂತವನ್ನು ಕುರಿತು ಪ್ರಸ್ತಾಪಿಸಿದ್ದಾನೆ. ಇವನು ಅದರ ಹೆಸರನ್ನು ಮಾತ್ರ ಹೇಳಿದ್ದಾನೆ; ಆ ರಸದ ಬಗೆಗೆ ವಿವರಣೆ ನೀಡಿಲ್ಲ. ರುದ್ರಟ ಶಾಂತರಸದ ಬಗೆಗೆ ವಿವರಿಸುತ್ತ ಶಾಂತರಸದ ಸ್ಥಾಯಿಭಾವ 'ಸಮ್ಯಗ್‌ಜ್ಞಾನ' ಎಂದು ಹೇಳಿದ್ದಾನೆ. ಭರತ ಹೇಳಿದ ಎಂಟು ರಸಗಳೊಂದಿಗೆ ರುದ್ರಟನು ಶಾಂತ ಮತ್ತು ಪ್ರೇಯಾನ್ ರಸಗಳನ್ನೂ ಸೇರಿಸುತ್ತಾನೆ. ಅನಂತರ ಬಂದ ಆನಂದವರ್ಧನ ತನ್ನ ಧ್ವನ್ಯಾಲೋಕದಲ್ಲಿ ಶಾಂತರಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಮಹಾಭಾರತದಲ್ಲಿ ಶಾಂತವೇ ಪ್ರಧಾನ ರಸವೆಂದೂ ಪ್ರತಿಪಾದಿಸಿದ್ದಾನೆ. ಧಜಂಜಯ ಮತ್ತು ಧನಿಕರು 'ದಶರೂಪಕ'ದಲ್ಲಿ ಅಭಿನಯವೇ ಮುಖ್ಯವಾದ ನಾಟ್ಯದಲ್ಲಿ ಅದಕ್ಕೆ ಸ್ಥಾನವಿಲ್ಲವೆಂದು ಪ್ರತಿಪಾದಿಸಿ, ಕಾವ್ಯದಲ್ಲೂ ಅದಕ್ಕೆ ಸ್ಥಾನವಿಲ್ಲ ಎಂದು ಹೇಳಿದರು. 'ಶಮ' ಶಾಂತದ ಸ್ಥಾಯಿಯಾಗುವುದಾದರೆ ಅದು ಅನಿರ್ವಚನೀಯವಾದದ್ದರಿಂದ, ನಾಟ್ಯದಲ್ಲಿಯಂತೆಯೇ ಕಾವ್ಯದಲ್ಲೂ ಇದಕ್ಕೆ ಸ್ಥಾನವಿಲ್ಲವೆನ್ನುವುದು ಅವರ ಮತ."

ರಸವು ಕಾವ್ಯದಿಂದ ಪಡೆಯುವ ಆನಂದಾನುಭವವಾಗಿದ್ದು, ರಸಸಿದ್ಧಾಂತವು ಜಾಗತಿಕ ಕಾವ್ಯ ಮೀಮಾಂಸೆಗೆ, ಭಾರತೀಯ ಕಾವ್ಯ ಮೀಮಾಂಸೆಗೆ ನೀಡಿದ ವಿಶಿಷ್ಟವೂ ಮಹತ್ತ್ವಪೂರ್ಣವೂ ಆದ ಕೊಡುಗೆಯಾಗಿದೆ.

ಸರೋವರದಲ್ಲಿ ತರಂಗಗಳೆದ್ದ ಹಾಗೆ ಬಾಹ್ಯ ಪ್ರಚೋದನೆಯಿಂದ ಮನಸ್ಸಿನಲ್ಲಿಯೂ ತರಂಗಗಳೆದ್ದು ರಸೋತ್ಪತ್ತಿ ಯಾಗುವಾಗ ಎಂಟು ಸ್ಥಾಯಿಭಾವಗಳು ಜಾಗ್ರತೆಗೊಂಡು ಕ್ರಮವಾಗಿ ಎಂಟು ರಸಗಳು ಉತ್ಪತ್ತಿಯಾಗುವದನ್ನು ತಿಳಿದಾಯಿತು. ಅಂದರೆ ರಸೋತ್ಪತ್ತಿಯಾದಾಗ ಮನಸ್ಸು ಚಂಚಲವಾಗುತ್ತದೆ, ಹಾಗೂ ಬುದ್ಧಿಯ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ ಅಂತ ಅರ್ಥ. ಆಗ ಮನಸ್ಸು ಸಹಜವಾಗಿಯೇ ಉದ್ವಿಗ್ನಗೊಳ್ಳುತ್ತದೆ.

ಶಾಂತ ಎನ್ನುವುದು ತರಂಗಗಳು ಕಳೆದು ಸರೋವರ ಸಹಜ ಸ್ಥಿತಿಗೆ ಮರಳುವದು. ಇಲ್ಲಿ ಮನಸ್ಸು ವಿಕಾರ ಹೊಂದುವದಿಲ್ಲ. ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞತ್ವ. 'ದುಃಖೇಷ್ವನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಾಃ'. ಆಗ ರಸಾನುಭೂತಿ ಇರುವದಿಲ್ಲ. ಆದುದರಿಂದಲೇ ಶಾಂತ ಎನ್ನುವದು ಒಂದು ಸ್ಥಿತಿಯೇ ವಿನಃ ರಸವಲ್ಲ. ಸ್ಥಿತಪ್ರಜ್ಞತ್ವವನ್ನು ಗಮನಿಸಿದರೆ ಶಾಂತತೆಯ ಕಲ್ಪನೆ ಬರಲು ಸಾಧ್ಯ.

ಆದರೆ ಕೆಲವರು ಕಾವ್ಯದ ರಸಾನುಭವವನ್ನು ಬ್ರಹ್ಮಾನಂದಕ್ಕೆ ಹೋಲಿಸುವದುಂಟು. ಅಂದರೆ ಆ ಸಂದರ್ಭದಲ್ಲಿ ಮನಸ್ಸು ಸುಖ-ದುಃಖಗಳ ಮೇರೆಯನ್ನು ಮೀರಿ ಆನಂದಾನುಭವವನ್ನು ಹೊಂದುತ್ತದೆ.

ದುರಂತದ ಕರ್ಣನನ್ನೋ, ದುಶ್ಶಾಸನ ವಧೆಯ ಭೀಮನನ್ನೋ ಕಂಡಾಗ ಮನಸ್ಸು ಕರುಣ ಅಥವಾ ಬೀಭತ್ಸ ರಸವನ್ನು ಗ್ರಹಿಸಿದರೂ, ಪರಿಣಾಮದಲ್ಲಿ ಆನಂದವನ್ನೇ ತರುತ್ತದೆ. ದುಃಖದ ಸನ್ನಿವೇಶವನ್ನು ಕಂಡಾಗ ಕಣ್ಣೀರಿನಿಂದ ಕಣ್ತುಂಬಿದರೂ, ಅಂತಹ ಸನ್ನಿವೇಶವನ್ನು ಪುನಃ ನೋಡಬೇಕು ಅನ್ನಿಸುತ್ತದೆ. ಈ 'ಪುನಃ ನೋಡಬೇಕು' ಎನ್ನುವ ಅನಿಸಿಕೆಗೆ ರಸಾನುಭವದಿಂದ ಉಂಟಾದ ಆನಂದವೇ ಕಾರಣ.

ಇನ್ನು ಶಾಂತರಸ?

ಭರತನಾಟ್ಯಶಾಸ್ತ್ರದಲ್ಲಿ, 'ಅಥ ಶಾಂತೋನಾಮ ಶಮಸ್ಥಾಯಿಭಾವಾತ್ಮಕೋ ಮೋಕ್ಷ ಪ್ರವರ್ತಕಃ' ಅಂತ ಶಾಂತರಸದ ಸ್ಥಾಯಿಭಾವ 'ಶಮ' ಅಂತಲೂ, ಗುರುತಿಸುವವರಿದ್ದಾರೆ.

ಇನ್ನೊಂದು ಹೇಳಿಕೆಯ ಪ್ರಕಾರ,
ಮೋಕ್ಷಕ್ಕೆ ಹೊಂದಿಕೆಯಾಗುವ ಚಿತ್ತವೃತ್ತಿಯೇ ಶಾಂತರಸದ ಸ್ಥಾಯೀಭಾವ ಎನ್ನುತ್ತಾರೆ. ತತ್ವಜ್ಞಾನದಿಂದ ಉದಿಸುವ ನಿರ್ವೇದವೇ ಶಾಂತರಸದ ಸ್ಥಾಯೀಭಾವ. ಈ ಸ್ಥಾಯಿಯನ್ನು ಶಮ ಅಂತಲೂ ಕರೆಯುತ್ತಾರೆ.

'ನಿರ್ವೇದ' ಅಥವಾ 'ವಿರಕ್ತಿ' ಎನ್ನುವದೂ, ತತ್ವಜ್ಞಾನದ ಕಾರಣಕ್ಕಾಗಿ, ಭಗವತ್ ಅನುಗ್ರಹಕ್ಕಾಗಿ ಕಾತರಿಸುವ ಮನಸ್ಸಿನ ಸ್ಥಿತಿ. ಇವನನ್ನು ಸ್ಥಿತಪ್ರಜ್ಞ ಅಂತಲೂ ತಿಳಿಯಬಹುದು. ಅದೇ 'ಸ್ಥಾಯೀಭಾವ'. ಇಂತಹ ಮನುಷ್ಯ ಲೌಕಿಕವಾದ ಎಂಟೂ ರಸಗಳಿಂದ ಅತೀತನಾದರೂ ಮುಕ್ತಿಯನ್ನು ಬಯಸಿ ಅದನ್ನು ಪಡೆಯಲು ಹಂಬಲಿಸುತ್ತಾನೆ. ಈ ಕಾರಣಕ್ಕಾಗಿಯೇ ಭಜನೆ, ದೈವೋಪಾಸನೆ, ಕೀರ್ತನೆ ಮುಂತಾದ ಮುಕ್ತಿಹೇತುವಾದ ಘಟನೆ, ನಾಟ್ಯ, ಕಾವ್ಯ ಅಥವಾ ಪರಿಸರ ಅವನ ಮನಸ್ಸಿನ ಮೇಲೆ ಪರಿಣಾಮ ಅಥವಾ ಪ್ರಭಾವವನ್ನು ಬೀರುತ್ತದೆ. ಈ ಪರಿಣಾಮದಿಂದ ಅವನು ಉದ್ವಿಗ್ನನಾಗದೇ ಶಾಂತನಾಗಿಯೇ ಪರಿಣಾಮವನ್ನು ಅನುಭವಿಸುತ್ತಾನೆ.

ಇದೇ ಶಾಂತರಸ.

ಆದುದರಿಂದ ಕೆಲವರು 'ಶಾಂತ' ವನ್ನು ರಸವೆಂತಲೂ, ಇನ್ನು ಕೆಲವರು 'ಶಾಂತ' ಕೇವಲ ಸ್ಥಿತಿಯೆಂತಲೂ ಅಭಿಪ್ರಾಯಪಡುತ್ತಾರೆ.

***

ಬದುಕಿನ ಬಹು ಮುಖಗಳು

– ರೇಣುಕಾ ದೇಸಾಯಿ

ನನ್ನ ಸ್ಟೇಟ್ ಬ್ಯಾಂಕ್ ಸಹೋದ್ಯೋಗಿಗಳೊಂದಿಗೆ, ಕನ್ನಡಕ್ಕಾಗಿ ಹೋರಾಡಿದ ಪಾ.ರಾಜಗೋಪಾಲ ಅವರ ಹೋರಾಟದ ನಾಟಕದ ಬಗೆಗೆ ಮತ್ತು ಧೀರೇಂದ್ರ ದಂಪತಿಗಳು ಕೊಡುವ ರುಚಿಕರ ಕಾಫಿ, ಕುರುಕಲು ಸೇವನೆಯ ಮಜಾ ಮತ್ತೊಮ್ಮೆ ನೆನೆಯುತ್ತಾ ಸಂತಸದ ಕ್ಷಣಗಳಿಂದ ತುಂಬಿದ ಆಹ್ಲಾದಕರ ನಾಟಕ ಪೂರ್ವಾಭ್ಯಾಸದ ನಂತರ, ನಾನು, ಮಲ್ಲೇಶ್ವರದ ನನ್ನ ಮನೆ ತಲುಪಲು ಜಯನಗರದ ಮೆಟ್ರೊ ನಿಲ್ದಾಣದಲ್ಲಿ ಕಿಕ್ಕಿರಿದ ಮೆಟ್ರೋ ಹತ್ತಿದೆ, ಇನ್ನೂ ನನ್ನ ತಲೆಯಲ್ಲಿ ನಾಟಕದ ದೃಶ್ಯಗಳು ಪುನರಾವರ್ತಿಸುತ್ತಿದ್ದಂತೆ ರೈಲು ಹಗುರವಾಗಿ ತೇಲಿದಂತೆ ಚಲಿಸುತ್ತಿರಲು, ಯಾರೋ ಅಳುವ ಧ್ವನಿ ಕೇಳಿಸಿತು. ಮೊದಲಿಗೆ ಅದು ರೋ ಒಬ್ಬರ ಫೋನ್‌ನಲ್ಲಿನ ವೀಡಿಯೊ ಎಂದು ಭಾವಿಸಿದೆ –ವಿಡಿಯೋಗಳಲ್ಲಿ ಅಳುವ ದೃಶ್ಯಗಳು ಸಾಕಷ್ಟು ಸಾಮಾನ್ಯ– ಆದರೆ ಅಳುವ ಶಬ್ದ ನಿಲ್ಲಲಿಲ್ಲ, ಮುಂದುವರೆಯಿತು.

ಕುತೂಹಲ ಮತ್ತು ಸ್ವಲ್ಪ ಚಿಂತಿತಳಾಗಿ, ಅಳುತ್ತಿರುವವರು ಯಾರೆಂದು ತಿಳಿಯಲು ಪ್ರಯತ್ನಿಸಿದೆ. ಜನಸಂದಣಿಯಲ್ಲಿ ಜಾಗ ಮಾಡಿಕೊಂಡು ತಳ್ಳುತ್ತಾ, ಅವಳನ್ನು ನೋಡಿದೆ. ಎರಡೇ ಆಸನಗಳಿರುವ ಮೂಲೆಯಲ್ಲಿ ಮಹಿಳೆಯೊಬ್ಬಳು ಕುಳಿತಿದ್ದು,ಇತರರ ಪರಿವೆಯಿಲ್ಲದೆ ಅಳುತ್ತಿದ್ದಳು. ಅವಳ ಪಕ್ಕದಲ್ಲಿದ್ದ ವ್ಯಕ್ತಿ ಇದು ತನಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ಕುಳಿತಿದ್ದರು, ಕೆಲವು ಯುವಕರು ಹತ್ತಿರದಲ್ಲಿ ನಿಂತಿದ್ದರೂ ಯಾವುದೇ ಪ್ರತಿಕ್ರಿಯೆ ಇರಲಿಲ್ಲ. ಅವರಲ್ಲಿ ಒಬ್ಬ ಹುಡುಗಿ ಮತ್ತು ಒಬ್ಬ ಹುಡುಗ, ಬಹುಶಃ ಉತ್ತರ ಭಾರತದವರಾಗಿರಬಹುದು– ಪರಸ್ಪರ ಪಿಸುಗುಟ್ಟುತ್ತಿದ್ದರು. ಇಡೀ ದೃಶ್ಯವು ಬೇರೊಬ್ಬರು ಸಹಾಯಕ್ಕೆ ಬರಲಿ ಎಂದು ಎಲ್ಲರೂ ಕಾಯುತ್ತಿರುವಂತೆ ಭಾಸವಾಯಿತು.

"ಏನಮ್ಮ ಯಾಕೆ ಅಳ್ತಾ ಇದ್ದೀರಾ? ಏನಾಯ್ತು?" ಅಂದಾಗ ಮಾತ್ರ ಅವರ ಪಕ್ಕದಲ್ಲಿ ಕುಳಿತ ಮಹನೀಯರು, "ಯಾರೋ ಅವರ ಕಡೆಯವರು ಹೋಗಿದ್ದಾರಂತೆ ಅದಕ್ಕೆ ಅಳುತ್ತಿದ್ದಾರೆ" ಅಂತ ನಿರ್ಭಾವುಕರಾಗಿ ನನ್ನ ಮುಖ ನೋಡಿದರು, ಯಾತಕ್ಕೋ ತಾವೇ ಆ ಜಾಗ ಬಿಟ್ಟು ಎದ್ದರು,

ಸರಿ, ನಾನು ಕುತ್ಕೊಂಡು ಅವರಿಗೆ ಮೈದಡವಿ ಸಮಾಧಾನ ಮಾಡುತ್ತಾ, "ಏನಾಯ್ತು ಹೇಳಿ, ಹಿಂಗೆ ಸುಮ್ನೆ ಅಳ್ತಾ ಇದ್ದೀರಲ್ಲ, ಎಲ್ಲಿಗೆ ಹೋಗ್ತಾ ಇದ್ದೀರಾ?" ಎಂದೆ. ಅವರದು ಒಂದೇಸಮನೆ ಅಳು.

ಅವರೆದುರು ನಿಂತಿದ್ದ ಆ ಹುಡುಗ, ಹುಡುಗಿಗೆ ಒಬ್ಬರು ಅವರ ಸಹಾಯಕ್ಕೆ ಬಂದರು ಎನ್ನುವ ಸಮಾಧಾನ, ಅವಳಿಗೆ ಯಾರಾದರೂ ಸಹಾಯ ಮಾಡಲಿ ಎನ್ನುವ ಸದಾಶಯ ಅವರದು. "ಅವರ ಸಂಬಂಧಿಯೊಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರಂತೆ. ರಾಮಯ್ಯ ಆಸ್ಪತ್ರೆಗೆ ಹೋಗಬೇಕು ಅಂತ ಹೇಳಿದ್ರು". ಸರಿ ಹಾಗಾದರೆ ಖಚಿತ ಮಾಹಿತಿ ಅವರಿಂದಲೇ ಪಡೆಯೋಣ ಎಂದುಕೊಂಡು ಅವರನ್ನೇ ಕೇಳಿದೆ,

"ಯಾಕೆ ಒಬ್ರೇ ಬಂದಿದಿರಾ? ರಾಮಯ್ಯ ಆಸ್ಪತ್ರೆ ಗೊತ್ತಾ? ನಿಮಗೆ"

"ಹೌದು ಗೊತ್ತು. ಅವಳಿಗೆ ಕಿಡ್ನಿ ಡಯಾಲಿಸಿಸ್ ನಡೆಯುತ್ತಿತ್ತು, ಪ್ರತಿದಿನ ನಾನೇ ಆಸ್ಪತ್ರೆಗೆ ಹೋಗ್ತಾ ಇದ್ದೆ. ಅಲ್ಲಿ ನಾನೇ ನೋಡಿಕೊಳ್ಳುತ್ತಿದ್ದೆ. ಈಗ ಆಸ್ಪತ್ರೆಯಿಂದ ವಿಷಯ ತಿಳಿಯಿತು, ನನ್ನ ತಂಗಿ ಹೋಗಿಬಿಟ್ಟಳಂತೆ" ಅಂತ ಜೋರಾಗಿ ಅಳಲು ಪ್ರಾರಂಭಿಸಿದರು. 'ಹುಟ್ಟುತ್ತ ಅಣ್ಣ ತಮ್ಮಂದಿರು, ಬೆಳೆಯುತ್ತ ದಾಯಾದಿಗಳು' ಎನ್ನುವ ಗಾದೆ ಮಾತಿದೆ. ಆದರೆ ಸುಮಾರು 55–60 ವಯಸ್ಸು ಇರುವ ಈ ಮಹಿಳೆ, ತಂಗಿಯ ಸಾವಿಗೆ ಎಷ್ಟು ರೋದಿಸುತ್ತಿದ್ದಾರೆ, ಕುಟುಂಬ ಬಾಂಧವ್ಯ ಚೆನ್ನಾಗಿದೆ, ಇಂತಹ ಅಕ್ಕತಂಗಿಯರನ್ನು ನೋಡುವದು ಹೆಮ್ಮೆ, ಖುಷಿಪಡುವ ವಿಷಯ. ಮನಸ್ಸಿನ ನಾಗಾಲೋಟಕ್ಕೆ ವೇಗದ ಮಿತಿ ಇಲ್ಲವೇ ಇಲ್ಲ!! ತಕ್ಷಣ ನನ್ನ ವಿಚಾರ ಲಹರಿ ತುಂಡರಿಸಿ, ಅವರನ್ನು ಕೇಳಿದೆ,

"ಆಸ್ಪತ್ರೆ ಎಲ್ಲಿದೆ ಅಂತ ಗೊತ್ತಾ? ಯಾವ ಮೆಟ್ರೊ ನಿಲ್ದಾಣದಲ್ಲಿ ಇಳಿದರೆ ಆಸ್ಪತ್ರೆ ಹತ್ತಿರ ಅನ್ನೋದೇನಾದ್ರೂ ತಿಳಿದಿದೆಯಾ?"

"ಗೊತ್ತಿಲ್ಲ".

"ನೀವು ಯಾವ ಮೆಟ್ರೋ ಸ್ಟೇಷನ್ನಲ್ಲಿ ಇಳಿಬೇಕು ಅನ್ನೋದೇ ಗೊತ್ತಿಲ್ಲ ಅಂದ್ಮೇಲೆ ಮೆಟ್ರೋದಲ್ಲಿ ಕುತ್ಕೊಂಡು ಅಳ್ತಾ ಇದ್ದೀರಲ್ಲ, ಆಸ್ಪತ್ರೆಗೆ ಸಮೀಪದ ನಿಲ್ದಾಣ ಬಂದ್ರೆ ಹೇಗೆ ಗೊತ್ತುಮಾಡಿಕೊಳ್ತೀರಿ?" ಆಗ ಬಾಯಿಬಿಟ್ಟರು ನಾರಿ!!

"ನಾನು ದಿನಾ ಕಾರಲ್ಲಿ ಹೋಗ್ತಾ ಇದ್ದೆ. ಹೀಗಾಗಿ ಮೆಟ್ರೊ ನಿಲ್ದಾಣ ಗೊತ್ತಿಲ್ಲ, ಕಾರಲ್ಲಿ ಹೋದ್ರೆ ಅವಳನ್ನ ತಲುಪೋದು ತಡವಾಗುತ್ತೆ ಅಲ್ವಾ, ಅದಕ್ಕೆ ಮೆಟ್ರೋ ಹತ್ತಿದೆ" ಅಂತ ಹೇಳಿದರು.

ನನಗೆ ಇನ್ನೂ ಕುತೂಹಲ ಮತ್ತು ಅವರ ಬಗ್ಗೆ ಆತಂಕವಾಯಿತು. "ನೋಡಿ ನೀವು ಯಶವಂತಪುರ ಮೆಟ್ರೊ ನಿಲ್ದಾಣದಲ್ಲಿ ಇಳಿಬೇಕು ಅಂತಾ ಅನ್ಸುತ್ತೆ, ಯಶವಂತಪುರದಿಂದ ಮತ್ತೆ ದೂರ ಹೋಗಬೇಕು".

"ನನಗೆ ಯಾವದೂ ಗೊತ್ತಿಲ್ಲ"

ನಾನು ಅಳುವ ಸ್ತ್ರೀ ಜೊತೆಗೆ ಹೀಗೆ ಸಮಾಧಾನ ಹೇಳುವದನ್ನು ಕಂಡ ಆ ಹುಡುಗರಿಗೂ ಸಹಾಯ ಮಾಡಬೇಕೆಂಬ ಅಭಿಲಾಷೆ ಆಯ್ತು ಎಂದು ಕಾಣುತ್ತೆ. ಅವನು ಮತ್ತು ಅವನೊಂದಿಗೆ ಇರುವ ಯುವತಿ ಇಬ್ಬರೂ ಸಹಾಯಕ್ಕೆ ಬಂದರು. ಅವರ ಸಾಮಾನು ಬೀಳ್ತಾ ಇತ್ತು ಅದನ್ನೆಲ್ಲಾ ಅವರಹತ್ರ ಎತ್ತಿಕೊಟ್ಟು, "ನೀವು ಸರಿಯಾಗಿ ಇಟ್ಕೊಳ್ಳಿ. ಆಮೇಲೆ ಮೆಟ್ರೋ ಎಂಟ್ರಿ ಆಗುವಾಗ ತಗೊಂಡಿರೋ ಟಿಕೆಟ್ ಬಿಲ್ಲೆ (ಕೆಳಗೆ ಬೀಳ್ತಾ ಇತ್ತು) ಸರಿಯಾಗಿ ಇಟ್ಕೊಳ್ಳಿ. ನೀವು ಹೋಗುವಾಗ ಟಿಕೆಟ್ ಬಿಲ್ಲೆ ಕಳೆದುಕೊಂಡರೆ ಕಷ್ಟ ಆಗುತ್ತೆ."

ಈಕೆಗೆ ನಾನು ಸಹಾಯ ಮಾಡಬೇಕು, ಇಲ್ಲಾಂದ್ರೆ ಆಕೆ ಆಸ್ಪತ್ರೆ ಮುಟ್ಟುವ ಬಗೆ ಹೇಗೆ? ಎನ್ನುವ ಯೋಚನೆ ಮನಸ್ಸಿಗೆ ಬಂದ ಕೂಡಲೇ ಕಾರ್ಯಪ್ರವೃತ್ತಳಾದೆ. ಯೋಚಿಸಲು ಸಮಯವಿರಲಿಲ್ಲ, ಕಾರಣ ನಾನಿಳಿವ ಮಂತ್ರಿಮಾಲ್ ನಿಲ್ದಾಣ ಬರುವುದಿತ್ತು.

"ನಾನು ಮುಂದಿನ ನಿಲ್ದಾಣದಲ್ಲಿ ಇಳಿಯುತ್ತೇನೆ, ನೀವೂ ಅಲ್ಲಿ ನನ್ನೊಟ್ಟಿಗೆ ಇಳಿಯಿರಿ, ನಾನು ನಿಮಗೊಂದು ಆಟೋ ಮಾಡಿ ರಾಮಯ್ಯ ಆಸ್ಪತ್ರೆಗೆ ತಲುಪಿಸುವ ವ್ಯವಸ್ಥೆ ಮಾಡ್ತೀನಿ. ನೀವು ಸುಮ್ಮನೆ ಯಶವಂತಪುರದಲ್ಲಿ ಇಳಿದು ಆಸ್ಪತ್ರೆಗೆ ಹೋಗಲು ಬಹಳ ಸಮಯ ಹಿಡಿಯುತ್ತದೆ" ಅಂತ ಹೇಳ್ದೆ.

"ಬರ್ತೀನಿ" ಎಂದು ಅವರು ಅಂದ ತಕ್ಷಣ ಆ ಹುಡುಗಿ, ಹುಡುಗ ಮತ್ತು ನಾನು, ಹೊರಗೆ ಬಿದ್ದ ಅವರ ಮೊಬೈಲ್, ಚಾರ್ಜರ್, ನೀರಿನ ಸೀಸೆ ಎಲ್ಲವನ್ನೂ ಅವರ ವ್ಯಾನಿಟಿ ಬ್ಯಾಗಿಗೆ ತುಂಬಿದೆವು. ಆಕೆ ನಡಿಯೋ ಸ್ಥಿತಿಯಲ್ಲೂ ಇರಲಿಲ್ಲ. ನಾನೇ ಬ್ಯಾಗ್ ಹಿಡ್ಕೊಂಡು ಅವರನ್ನು ಕೈಹಿಡಿದುಕೊಂಡು ಒಂದು ರೀತಿಯಲ್ಲಿ ಎಳೆದುಕೊಂಡೇ ಹೊರಗೆ ಬಂದೆ. ಇಳಿಸುವುದೇನೋ ಇಳಿಸಿದೆ, ಆದರೆ ಅವರು ಟಿಕೆಟ್ ಎಲ್ಲಿಗೆ ತೆಗೆದುಕೊಂಡಿದ್ದಾರೋ, ಹೊರಗೆ ಹೋಗಲು ಆಗದಿದ್ದರೆ ಮಾಡುವದೇನು? ಎನ್ನುವ ಪ್ರಶ್ನೆ ನನ್ನನ್ನು ಧೃತಿಗೆಡಿಸಿತು. ಮೊದಲೇ ದುಃಖದಲ್ಲಿರುವ ಅವರಿಗೆ ಹೇಳಿ ಹೆದರಿಸುವದು ಸರಿಯಲ್ಲ ಎಂದು ಧೈರ್ಯ ತೆಗೆದುಕೊಂಡು ಮುನ್ನಡೆದೆ.

"ಸ್ವಲ್ಪ ಸಮಾಧಾನ ತಗೋಳ್ಳಿ, ಹೋಗೋಣ, ನಾನು ನಿಮಗೆ ಆಟೋ ಹತ್ತಿಸುತ್ತೇನೆ" ಅಂತ ಹೇಳಿದೆ. ಹೇಗೋ ಅವರ ಕೈಹಿಡಿದು ಮೆಟ್ಟಿಳಿಸಿಕೊಂಡು ಬಂದು, ಹೊರಗೆ ಹೋಗುವ ಕಂಬಿಯಲ್ಲಿ ಟಿಕೆಟ್ ಬಿಲ್ಲೆ ಹಾಕಿದೆ, ಅಬ್ಬಾ!! ಬಾಗಿಲು ತೆರೆಯಿತು". ಸದ್ಯ ನನ್ನ ಚಿಂತೆ ದೂರವಾಯ್ತು!! ಹೊರಗೆ ಬಂದೆವು.

“ಯಾಕೆ ಏನಾಯ್ತು? ನೀವೊಬ್ಬರೇ ಬಂದಿದ್ದೀರಲ್ಲ ಯಾರು ಇಲ್ವಾ ನಿಮ್ಮನೇಲಿ?” ಅವಳ ಅಳು ನಿಲ್ಲಿಸುವ ಸಲುವಾಗಿ ನನ್ನ ಪ್ರಶ್ನೆ.

“ನನ್ ಗಂಡ ಇದ್ದಾರೆ. ನಾನು, ನನ್ನ ಗಂಡನೇ ಹೊರಟ್ವಿ, ಆದರೆ ಅವರು ಕಾರಲ್ಲಿ ಬರ್ತಾರೆ, ಕಾರಲ್ಲಿ ಬಂದು ರಾಮಯ್ಯ ಆಸ್ಪತ್ರೆ ತಲುಪವಷ್ಟರಲ್ಲಿ ತುಂಬಾ ಹೊತ್ತು ಆಗುತ್ತದೆ, ವೈದ್ಯರು ಅವಳ ಪ್ರಾಣ ಹೋಗ್ಬಿಟ್ಟಿದೆ ಅಂದಿದ್ದಾರೆ” ಮತ್ತೆ ಅವಳ ದುಃಖ ಇಮ್ಮಡಿಯಾಯ್ತು.

“ಅದು ಸರಿ, ಮತ್ತೆ ಅವರ ಗಂಡ, ಮಕ್ಕಳು ಯಾರೂ ಇಲ್ವಾ? ಅವರ್ಯಾರು ಬಂದಿಲ್ಲವಾ?”

“ನೋಡಿ ನಿಜ ಹೇಳ್ತೀನಿ, ನಿಮ್ಹತ್ರ ನನಗೇನೂ ಮುಚ್ಚುಮರೆ ಇಲ್ಲ, ಅವಳು ನನ್ನ ಗಂಡನಿಗೆ ಎರಡನೇ ಹೆಂಡ್ತಿ”.

ಅಬ್ಬಾ!! ಸವತಿಯರಲ್ಲೂ ಇಷ್ಟು ಅನ್ಯೋನ್ಯತೆ, ಇಂತಹ ಅಕ್ಕನಿಗೆ ಸವತಿ ಎಂದು ಹೇಗೆ ಹೆಸರಿಸಲಿ? ಸಾಮಾನ್ಯವಾಗಿ ಮತ್ಸರಕ್ಕೆ ಇನ್ನೊಂದು ಅರ್ಥವೇ ಸವತಿ ಎಂದುಕೊಂಡಿರುವ ನನಗೆ ಅವರ ಕುಟುಂಬದ ಬಗೆಗೆ ಉದಾತ್ತ ಭಾವ.

“ಓ!!, ನೀವು ಅವರಿಗಾಗಿ ಇಷ್ಟೆಲ್ಲಾ ಮಾಡ್ತಾ ಇದ್ದೀರಲ್ಲ ಅವರದು ಪುಣ್ಯ. ಆದ್ರೂ ನೀವು ಏನೂ ಗೊತ್ತಿಲ್ದೆ ಬೇಗ ಹೋಗಿ ತಲುಪಬೇಕು ಅಂತ ಬಂದಿದ್ದೀರಲ್ಲ ಮಹಾನಗರದಲ್ಲಿ ಏನೇನು ಅವ್ಯವಸ್ಥೆ ಆಗುತ್ತೋ, ಯಾರು ಮೋಸ ಮಾಡ್ತಾರೋ. ಹೀಗೆ ಹುಚ್ಚು ಧೈರ್ಯ ಮಾಡಬಾರದು. ಇಂಥಾ ಟೈಮಲ್ಲಿ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಕೊಬೇಕು”. ನನ್ನ ಈ ಬುದ್ಧಿಮಾತಿನ ಅವಶ್ಯಕತೆ ಇತ್ತಾ? ಎಂದು ತಕ್ಷಣಕ್ಕೆ ಅನ್ನಿಸಿತು ಆದರೆ ಆಗಲೇ ಮಾತನಾಡಿಬಿಟ್ಟಿದ್ದೆ.

ಅವರು ಅಳುತ್ತಲೇ, “ಇಲ್ಲಾ, ನನ್ನ ಮನೋಸ್ಥಿತಿ ನನ್ನ ಸ್ಥಿಮಿತದಲ್ಲಿ ಇಲ್ಲ, ಏನು ಮಾಡ್ತಾ ಇದ್ದೇನೆ ಎನ್ನುವದೇ ತಿಳಿಯುತ್ತಿಲ್ಲ. ಯಾಕೆಂದರೆ ಅವಳ ಮಗನಿಗೆ ಹೆಣ್ಣು ನೋಡ್ತಾ ಇದ್ವಿ. ಅವಳಿದ್ದಾಗಲೇ ಮದುವೆ ಮಾಡಬೇಕು ಅಂತ ನಮಗೆ ತುಂಬಾ ಆಸೆ ಇತ್ತು. ಅವಳೆದುರು ಮದುವೆ ಮಾಡಲಾಗಲಿಲ್ಲ. ಅದಕ್ಕೋಸ್ಕರ ತುಂಬಾ ದುಃಖ ಆಗ್ತಾ ಇದೆ”

“ನೀವು ದುಃಖಪಡೋದು ಸಹಜ. ಈಗ ತಾಯಿಯಾಗಿ ನೀವಿದ್ದೀರಲ್ಲ, ನೀವೇ ನಿಂತು ಮದುವೆ ಮಾಡಿ. ನೀವೇ ಹೇಳ್ತೀರಾ, ಅವರು ಡಯಾಲಿಸಿಸ್ನಿಂದ ನರಳುತ್ತಿದ್ದರು ಅಂತ. ಒಂದು ಲೆಕ್ಕದಲ್ಲಿ ನರಳುವ ಆ ನೋವಿಂದ ಪರಿಹಾರ ಸಿಕ್ತು ಅಂತ ಅನ್ಕೊಳ್ಳಿ”

“ಅದಲ್ಲ ವಿಷಯ ಮೇಡಂ, ಅವಳು ನನಗೆ ಸವತಿ ಅಂತ ಬರಲಿಲ್ಲ. ನಮ್ಮ ಮನೆಯವರಿಗೆ ಮದುವೆ ಮಾಡಿಸುವಾಗ, ನಾನು ಅವಳಿಗೆ ಹೇಳಿದ್ದೆ, ಯಾವಾಗಲೂ ನನ್ನ ಆರೋಗ್ಯ ಸರಿ ಇರೊಲ್ಲ, ನನ್ನನ್ನ, ನನ್ ಮಕ್ಕಳನ್ನ ಚೆನ್ನಾಗಿ ನೋಡಿಕೊಬೇಕು ಅಂತಾ. ಅದನ್ನು ಒಪ್ಪಿಕೊಂಡು ಬಂದು ನಮ್ಮನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದ್ದಾಳೆ. ಆ ಋಣಾನಾದ್ರೂ ತೀರಿಸಬೇಕು”.

ಅವರು ಅಳುತ್ತಾ ಅಳುತ್ತಾ ಹೇಳುವಾಗ, ನನಗೆ ಆಶ್ಚರ್ಯ!! ಹೀಗೂ ಒಂದು ಹೆಣ್ಣು ನಿರ್ಧಾರ ಮಾಡ್ತಾಳಾ? ಇನ್ನೊಬ್ಬ ಹೆಣ್ಣು ಅದನ್ನು ಒಪ್ಪಿ ಮದುವೆ ಆಗ್ತಾಳಾ? ಮದುವೆ ಆದರೂ ಹೀಗೆ ದೊಡ್ಡವಳು ಅಂದ್ರೆ ಅಕ್ಕ ಒಪ್ಪುವಂತೆ ಸೇವೆ ಮಾಡಬಹುದಾ? ಇಬ್ಬರೂ ತಮ್ಮ ಕುಟುಂಬದ ಮಟ್ಟಿಗೆ ಆದರ್ಶ ನಾರಿಯರೆ. ಆದರೆ ವಿಧಿಯಾಟ ನೋಡಿ, ಸದಾ ಏನಾದರೊಂದು ಕಾಯಿಲೆ ಇರುವವಳನ್ನು ಕಾಯ್ದು, ಆರೋಗ್ಯವಿರುವವಳಿಗೆ ಏನೋ ಕಾರಣ ಹೇಳಿ ಎತ್ತಿಕೊಂಡು ಬಿಟ್ಟಿತು!!

ಜೀವನದ ಎಷ್ಟೋ ಮುಖಗಳಲ್ಲಿ ಇದೂ ಒಂದು ಮುಖನಾ?

ನನಗೆ ಅವರ ವಿಷಯ ಯಾವುದೂ ಬೇಕಾಗಿರಲಿಲ್ಲ ಅವರ ದುಃಖ ಕಡಿಮೆ ಮಾಡಲು ಮಾತಿಗೆ ಶುರುಮಾಡಿದ್ದೆ. ಅವರ ಹೆಸರನ್ನೂ ಕೇಳಿರಲಿಲ್ಲ, ಮೊದಲು ಅವರನ್ನು ಆಟೋ ಹತ್ತಿಸಬೇಕಾಗಿತ್ತು, ಅವರ ಇಚ್ಛೆಯಂತೆ ಆಸ್ಪತ್ರೆಗೆ ಶೀಘ್ರ ತಲುಪಿಸುವ ವ್ಯವಸ್ಥೆ ಮಾಡಬೇಕಾಗಿತ್ತು, ಮೇಲಾಗಿ ಅವರಿಗೆ ಯಾವುದೂ ಗೊತ್ತಿಲ್ಲವೋ ಅಥವಾ ಋಣ ಸಂದಾಯ ಮಾಡಲು ಆಗುತ್ತಿಲ್ಲ ಎನ್ನುವ ದುಃಖದಲ್ಲಿ ಎಲ್ಲವನ್ನೂ ಮರೆತಿದ್ದರೋ, ಅಳ್ತಾನೆ ಇದ್ರು. ಅಷ್ಟರಲ್ಲಿ ಹೊರಗಡೆ ಬಂದೆವು. ನಾನು ಎದುರಿಗೆ ಆಟೋ ಬೇಕಾ ಎಂದು ಕೇಳುವವರ ಗುಂಪಿನಲ್ಲಿ ನಂಬಿಕಸ್ಥ ಮುಖ ಹುಡುಕುತ್ತಿದ್ದೆ,

"ನೋಡಿ, ಇವರನ್ನು ಬೇಗ ರಾಮಯ್ಯ ಆಸ್ಪತ್ರೆ ತಲುಪಿಸಿ. ತುಂಬಾ ದುಃಖದಲ್ಲಿ ಇದ್ದಾರೆ, ಅವರ ತಂಗಿ ಮರಣ ಹೊಂದಿದ್ದಾರೆ. ಅವರು ಹೇಳಿದ ಜಾಗದಲ್ಲಿ ಬಿಡಿ" ಅಂತ ಹೇಳಿದೆ. ಅವರೆಲ್ಲ ಯುವಕರೆ.

"ಒಂದು ಸಾವಿರ ರೂಪಾಯಿ ಕೊಡಿ ಮೇಡಂ, ಸಾಯಂಕಾಲ ಅಲ್ವಾ?" ಯಾವುದು ಈ ತರ್ಕ!! ಯಾಕೆ ಅಷ್ಟು ಹಣ?

"ಮೀಟರ್ ಹಾಕಿ ಅದರಂತೆ ಹಣ ಪಡೆಯಿರಿ, ಅದರಿಂದ ನಿಮಗೂ ನಷ್ಟವಿಲ್ಲ, ಅವರಿಗೂ ಕಷ್ಟವಿಲ್ಲ". ಅವರಿಗೆ ಬರಲಿಲ್ಲ ಕರುಣೆ.

ಜಗತ್ತೇನು ಹೀಗೆ ಇರುವದಿಲ್ಲ ಅಲ್ವೇ? ಒಳ್ಳೆಯವರೂ ಇರ್ತಾರೆ, ಸ್ವಲ್ಪ ದೂರದಲ್ಲಿ ಇರುವ ಮತ್ತೊಬ್ಬರನ್ನು ಕೇಳಿದೆ,

"ಮೀಟರ್ ಹಾಕಿ, ಅವರು ತುಂಬಾ ದುಃಖದಲ್ಲಿ ಇದ್ದಾರೆ. ಎಲ್ಲಿ ಅಂತ ಹೇಳ್ತಾರೋ ಆ ಜಾಗದಲ್ಲಿ ಬಿಟ್ಟು ಹಣ ಪಡೆಯಿರಿ"

"ಆಯ್ತಮ್ಮಾ, ನೀವೇನು ಯೋಚನೆ ಮಾಡಬೇಡಿ, ಅವರು ಹೇಳಿದ ಹತ್ತಿರ ಬಿಡ್ತೀನಿ"

ಅವರನ್ನ ಕೂಡ್ರಿಸಿ ಅವರ ಬ್ಯಾಗನ್ನು ಅವರ ಕೈಯಲ್ಲಿ ಕೊಟ್ಟು, "ನೋಡಿ, ನಿಮ್ಮ ಮೊಬೈಲ್ ಇಟ್ಟಿದೀನಿ, ಚಾರ್ಜರ್ ಒಳಗೆ ಇಟ್ಟಿದ್ದೀನಿ, ಚಾರ್ಜರ್ ಕಳೆದುಕೊಳ್ಳಬೇಡಿ, ಚಾರ್ಜ್ ಇಲ್ದೆ ಆಮೇಲೆ ನಿಮ್ಮವರೊಂದಿಗೆ ಕನೆಕ್ಷನ್ ಇಲ್ದಂಗೆ ಮಾಡ್ಕೋಬೇಡಿ, ಹೋಗಿ ಚಾರ್ಜ್‌ಗೆ ಹಾಕ್ಕೊಳ್ಳಿ, ಹಾಗೆಯೇ ಸಮಾಧಾನವಾಗಿರಿ. ಮುಂದಿನ ಕೆಲಸ ನೀವೇ ಮಾಡಬೇಕು" ಅಂತ ನಾನು ಹೇಳಿದೆ

"ಇಲ್ಲ ಬಿಡಿ ಮೇಡಂ, ನಾನು ಸೇಫ್ ಆಗಿ ಅವರು ಎಲ್ಲಿ ಹೇಳ್ತಾರಲ್ಲ ಅಲ್ಲಿ ತಲುಪಿಸುತ್ತೀನಿ". ಆಟೋದವರ ನಡತೆ ಮನಸ್ಸಿಗೆ ನೆಮ್ಮದಿ ತಂದಿತು.

ಅವರು, ಹೋರಟಿರುವ ಆಟೋ ನಿಲ್ಲಿಸಿ, ನನಗೆ ಕೈ ಮುಗಿದು ಕಾಲಿಗೆ ಬೀಳಲು ಬಂದ್ರು."

"ಇಲ್ಲ.. ಇಲ್ಲ... ಇದರಲ್ಲಿ ಏನು ದೊಡ್ಡ ಕೆಲಸವಿಲ್ಲ, ನಾನು ಇಲ್ಲೇ ಇಳಿಯಬೇಕಾಗಿತ್ತು ಅಷ್ಟೇ. ನೀವು ಇದೊಂದು ದೊಡ್ಡ ಸಹಾಯ ಎಂದು ಭಾವಿಸದಿರಿ".

ಇದಾದ ಎಷ್ಟೋ ದಿನದವರಗೆ ಈ ಘಟನೆಯ ಬಗೆಗೆ ಯೋಚನೆ ಮಾಡಿದೆ.

ಬದುಕಿಗೆ ಅದೆಷ್ಟು ಮುಖಗಳು!!

***

ವ್ಯೂಹದಲ್ಲಿ ಬಂಧಿ – ಲೇಖನ ಮಾಲೆ– 3

ವಿಸ್ಮಯದ ವಿಭ್ರಮೆ

– ಮಾಧುರಿ ಕೃಷ್ಣ

'ಅಬ್ಬ! ಎಷ್ಟು ಬೇಗ ಬೇಸಿಗೆ ಬಂದುಬಿಟ್ಟಿತು!' ಎಂದು ಸೆರಗಿನಿಂದ ಕತ್ತು, ಗಲ್ಲ, ಹಣೆಯ ಬೆವರೊರೆಸಿಕೊಳ್ಳುತ್ತಲೇ ನಡಿಗೆಯ ವೇಗವನ್ನು ತುಸುವೂ ಕಡಿಮೆ ಮಾಡಿಕೊಳ್ಳದೇ ನಡೆಯುತ್ತಿದ್ದೆ.

"ಇಂದೇನು ಇಷ್ಟೊಂದು ಅವಸರ, ತಡವಾಯಿತೆಂದೇ?" ಪ್ರಶ್ನೆಯೊಂದು ಕೇಳಿಬಂತು.

ಇದು ಯಾರಪ್ಪ, ನನ್ನನ್ನು ಮಾತನಾಡಿಸಿದವರು ಎಂದಕೊಳ್ಳುತ್ತ ಕತ್ತು ತಿರುಗಿಸಿದೆ.

ಇನ್ಯಾರು, ಮಾಡಲು ಕೆಲಸವಿಲ್ಲದ ಅದೇ ಆ ಹೂವು ಪತ್ರೆಯ ಶಾಲಿನವನು! ನನ್ನ ಹೆಜ್ಜೆಗೆ ತನ್ನ ನಡಿಗೆಯನ್ನು ಸೇರಿಸುತ್ತ ಬರುತಿದ್ದಾನೆ. 'ಇವತ್ತೇ ಇವನು ಸಿಗಬೇಕೇ' ಎಂದು ಮನಸ್ಸು ಗೊಣಗಿಕೊಂಡರೂ, "ಹೂಂ.. ಹಾಂ..' ಎಂಬ ಉತ್ತರ ಹೊರಬಿತ್ತು.

'ಹೂ ಪತ್ರೆಯ ಶಾಲು ಆದ್ದರಿಂದ ಅವನಿಗೇನೂ ಸೆಕೆ ಆಗುತ್ತಿಲ್ಲ' ಎಂಬ ತಾತ್ಸಾರ ಮನಸ್ಸಿನೊಳಗೇ!

"ನಿಜ, ಇದು ತಂಪು ತಂಪು ತಂಪಾಗಿ ಕೂಲ್ ಕೂಲ್ ಇದೆ" ಎಂದು ನನ್ನ ಮನಸ್ಸಿನೊಳಗೇ ಕೈ ಹಾಕಿ ಕೂಡಲೇ ಮಾತು ಎತ್ತಿಯೇಬಿಟ್ಟ.

'ಎಲಾ ಘಟಿಂಗ! ಭಾರೀ ಹುಶಾರಿದ್ದಾನೆ!' ಬೇಡಾಂದ್ರೂ ನನ್ನ ಮನ ಯೋಚಿಸಿಯೇಬಿಟ್ಟಿತು.

"ಮನಸ್ಸು ಧೂಳು ತುಂಬಿದ ಕನ್ನಡಿಯಂತೆ. ಆಗಾಗ ವರೆಸಿ ಸ್ವಚ್ಛವಾಗಿಟ್ಟುಕೊಳ್ಳಬೇಕು.

'ಅರೇ! ಯಾರಿಗೆ ಹೇಳಿದ್ದು ಈ ಮಾತು, ನನಗೇನಾ!' ಎಂದುಕೊಂಡು ಅವನ ಮುಖ ನೋಡುವ ಪ್ರಯತ್ನ ಮಾಡಿದೆ. ಅವನೋ ಅವನಷ್ಟಕ್ಕೇ ಮುಂದೆ ನೋಡಿಕೊಂಡು ನಡೆಯುತ್ತಲೇ ಇದ್ದ.

'ಈ ಪ್ರಪಂಚದಲ್ಲಿ ಎಂಥೆಂಥಾ ಅಧಿಕ ಪ್ರಸಂಗಿಗಳು ಇರುತ್ತಾರಪ್ಪ! ರಿವರ್ಸ್ ಥಿಂಕಿಂಗ್ ಮೂಡಿಗೆ ಬಂದು ಮುಖ ಕಿವಿಚಿತು.

ಬೆಳಿಗ್ಗೆ ಅದ್ಯಾಕೋ ಎದ್ದದ್ದು ಲೇಟಾಗಿ, ಯಜಮಾನರಿಗೆ ಕಾಫಿ ಕೊಟ್ಟವಳು, ನನ್ನ ಕಾಫಿ ಬಿಸಿ ಎಂದು ಹಾಗೇ ಕುಡಿಯದೇ ಬಂದಿದ್ದೆ. ಮನಸ್ಸಿನೊಳಗೆ ಅದೇ ಭಾವವಿರುವಾಗ ಇವನೊಂದಿಗೆ ಮಾತುಕತೆ ನನಗೆ ಬೇಕಿತ್ತೇ!

'ಅಲ್ಲಾ, ಎಲ್ಲಪ್ರಕಾರದ ಜೀವಿಗಳನ್ನೂ ಸೃಷ್ಟಿಸುವ ಪರಮಾತ್ಮ ಇತರರಿಗೆ ಅನಾವಶ್ಯಕ ಉಪದ್ರ ಕೊಡುವ ಇಂತಹ ಜೀವಿಗಳನ್ನು ಮದ್ಯ ಮಧ್ಯದಲ್ಲಿ ಸೃಷ್ಟಿಸಿವುದೂ ಅಲ್ಲದೇ ನನ್ನಷ್ಟಕ್ಕೆ ನಾನು ಪ್ರಾತಃಕಾಲದಲ್ಲಿ ಮನಸೋ ಅಡ್ಡಾಡಲು ಬಂದರೆ ನನ್ನ ಹಿಂದೆ ಇವನನ್ನು 'ಛೂ' ಬಿಡುವುದು ಏಕೆ? ಅಲ್ಲಾ, ಇವನಾಡಿದ ಮಾತಿನ ಅರ್ಥವಾದರೂ ಏನು? ನಾನು ಯಾರೋ, ಇವನು ಯಾರೋ? ಹುಡುಕಿ ಹುಡುಕಿ ಬೆನ್ನು ಹತ್ತುತಾನಲ್ಲ! ಅವುಡು ಕಚ್ಚಿ ಕಟಕಟನೇ ಹಲ್ಲು ಕಡಿದೆ.

ಸುಂದರ ಪ್ರಶಾಂತ ವಾತಾವರಣ, ಸಹಜ ಶುದ್ಧ ಸೊಬಗು, ಹಿತಕರವಾಗಿ ಬೀಸುವ ತಂಗಾಳಿ, ಹಕ್ಕಿಪಿಕ್ಕಿಗಳ ಇಂಪಾದ ಕಲರವ– ಬದುಕಿನ ಯಾಂತ್ರಿಕ ಜಂಜಾಟಕ್ಕೆ ಹೊರತಾದ ಸುಖ ಪಡೆಯುವ ಆಸೆಯಿಂದ ಬಂದರೆ ತಪ್ಪದೆ ಪ್ರತ್ಯಕ್ಷ ವಾಗುತ್ತಾನೆ ಈ ಬೆನ್ನಿಗೆ ಬೀಳುವ ಭೇತಾಳ!

"ನಾವು ಬೆಳೆಸಿಕೊಳ್ಳುವ ಅರಿವು ಸದಾ ಸ್ಪಷ್ಟ, ಸ್ವಚ್ಛ, ವ್ಯಾಕರಣ ನಿಬದ್ಧವಾಗಿರಬೇಕೆಂದು ಪಣತೊಡಬಾರದೇಕೆ?' ನಡೆಯುತಿದ್ದವನು ಏಕಾಏಕಿ ನಿಂತು ನನ್ನ ಕಣ್ಣುಗಳನ್ನು ಸೆರೆಹಿಡಿದು ಕೇಳಿದ.

ನನಗೂ ಉಲ್ಲಂಘಿಸಿ ನಡೆಯಲಾಗಲಿಲ್ಲ, ನಿಂತುಬಿಟ್ಟೆ. ಆದರೆ ಮನಸ್ಸಿನೊಳಗೇ ಹುಟ್ಟಿ ಬಂದಿದ್ದ ಅಸಹಾಯಕತೆಯಿಂದ ಏನೂ ಮಾತನಾಡಲಾಗದೇ ಮೌನವಾಗಿಬಿಟ್ಟೆ. ಕಳೆದ ಕೆಲವು ದಿನಗಳಿಂದ ಸಾಂಸಾರಿಕ ಜೀವನದಲ್ಲಾದ ಕೆಲವು ಏರುಪೇರುಗಳಿಂದ ಅಸ್ಥವ್ಯಸ್ಥಳಾಗಿದ್ದ ನಾನು ಇವತ್ತೇ ಮನೆಯಿಂದ ಹೊರಬಂದಿದ್ದು.

ಇಬ್ಬರೂ ಮುಖ ಮುಖ ದಿಟ್ಟಿಸಿಕೊಂಡು ಹಾಗೆಯೇ ನಿಂತಿದ್ದೆವು. ಟಕ್ ಟಕ್ ಟಕ್ ಗಡಿಯಾರದ ಮುಳ್ಳು ಮುಂಚಲಿಸುತಿತ್ತು.

"ನೀನು ಯಾರು? ನನ್ನ ವಿಷಯವೆಲ್ಲ ನಿನಗೆ ಹೇಳಿದ್ದು ಯಾರು?" ಬಹುಶ: ಕೆಂಪು ಬಣ್ಣದ ಕೆಂಡದುಂಡೆಗಳೇ ನನ್ನಿಂದ ಸಿಡಿಯುತಿದ್ದುವು

ಅವನ ಕಣ್ಣುಗಳಲ್ಲಿ ಬರೇ ಶೈತ್ಯದ ಥಂಡಿ. ಕಂಡೂ ಕಾಣದ ವಕ್ರಹಾಸ, ತುಟಿಯಲ್ಲಿ ಅರೆ ಬಿರಿದ ಮುಗುಳ್ನಗು– ಮಂದಹಾಸ.

ಆಗಲೇ ಹೊಮ್ಮಿತು ಮತ್ತೊಂದು ನುಡಿ ಅವನಿಂದ– "ಜನರು ಅಂದುಕೊಳ್ಳುವಂತೆ ಅಕ್ಷರವಂತರಾಗಿರಬಹುದು ಆದರೆ ವೈಚಾರಿಕವಾಗಿ ಪಕ್ವವಾಗಿರುವುದಿಲ್ಲ. ಮನುಷ್ಯ ಒಂದು ಸಮಸ್ಯೆಯಿಂದ ಹೊರಬರುತ್ತಿರುವಂತೆ ಇನ್ನೊಂದು ಸಮಸ್ಯೆ ತನ್ನ ಸರದಿಗಾಗಿ ಕಾಯುತ್ತಿರುತ್ತದೆ. ಯಾರಿಗೂ ಸಂಪೂರ್ಣತೆಯನ್ನು ಪಡೆಯಲಾಗುವುದೇ ಇಲ್ಲ. ಆಕಾಶದಲ್ಲಿರುವ ಕೋಟ್ಯಾನುಕೋಟಿ ನಕ್ಷತ್ರಗಳಾಗಲೀ ಭೂಮಿಯ ಮೇಲೆ ಚಿಗುರುವ ಒಂದೊಂದೂ ಪುಟ್ಟ ಗರಿಕೆ ಯಾಗಲೀ, ಬದುಕಬೇಕಾದ ಬದುಕನ್ನು ಸತತ ಅಸಮಂಜತೆಗಳಿಂದ ಸರಿಪಡಿಸಿಕೊಳ್ಳುತ್ತಲೇ ಬದುಕಬೇಕು. ನಿಮ್ಮ ನಿಮ್ಮ ಅಸ್ತಿತ್ವದ ಮರುನಿರ್ಮಾತೃಗಳು ನೀವು ನೀವೇ ಆಗಬೇಕು".

ನಾನು ಭ್ರಮೆಯಲ್ಲಿ ಬಿದ್ದವಳಂತೆ ನಿಂತೇ ಇದ್ದೆ. ಅವನು ಮಾತಾಡುತ್ತ ಮಾತಾಡುತ್ತ ಕರಗಿ ಹೋಗುತ್ತಿದ್ದಾನೆಯೇನೋ ಅನಿಸಿತು. ಅಂತೂ ಕೊನೆಗೂ ಅವನ ಮಾತು ನಿಂತಿತು ಎಂದಾಗುವಾಗ ನಾನು 4ನೇ ಹಂತದ ಡಾಲರ್ಸ್ ಕಾಲನಿಯ ದೇವಾಲಯ ಶ್ರೀಪಾದ ಕ್ಷೇತ್ರದ ಹೊರಗಿನ ಮೆಟ್ಟಿಲ ಮೇಲೆ ಕುಳಿತಿದ್ದೆ. ಎರಡೂ ಕೈನಿಂದ ಕಣ್ಣುಜ್ಜಿಕೊಂಡು ನೋಡಿದರೂ ಅವನ ಸನ್ನಿಹಿತೆಯ ಯಾವ ಕುರುಹೂ ಅಲ್ಲಿರಲಿಲ್ಲ! ವಿಸ್ಮಯದ ವಿಭ್ರಮೆಯಲ್ಲಿರುವಂತೆ ದಾಪುಗಾಲನ್ನಿಡುತ್ತ ಹಿಂದಿರುಗಿ ಮನೆಗೆ ಬಂದೆ.

***

ಜಾನಪದ ಕಥೆ

ಐಶ್ವರ್ಯಭಾ ಮತ್ತು ನಂಗತಂತ್ರಿ

– ವಿಠ್ಠಲ ಇಜೇರಿ

ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಜಾನಪದ ಹಿನ್ನೆಲೆ ಇರುತ್ತದೆ. ಆಯಾ ಪ್ರದೇಶದ ಜನರ ಆಚಾರ, ವಿಚಾರ, ನಂಬಿಕೆ, ಸಂಸ್ಕೃತಿಗನುಗುಣವಾಗಿ ಕಥೆ, ಕವನ, ಆಟಪಾಟಗಳು ಮತ್ತು ಸಾಹಿತ್ಯ ರಚನೆ, ನಾಟಕ, ಅಡುಗೆ, ವೈದ್ಯಕೀಯ ಚಿಕಿತ್ಸೆ ಇತ್ಯಾದಿ ಕಾಣುವೆವು. ಜಾನಪದ ಸಂಸ್ಕೃತಿ ಬಹಳ ಸ್ವಾರಸ್ಯಪೂರ್ಣವಾಗಿರುತ್ತದೆ. ಶಿಷ್ಟ ಸಾಹಿತ್ಯದ ಬೆಳವಣಿಗೆಯ ಮೂಲ ಜಾನಪದದಲ್ಲಿಯೇ ಇರುತ್ತದೆ. ಹಾಗೆ ನೋಡಿದರೆ ಜಾನಪದ ಮತ್ತು ಶಿಷ್ಟ ಸಾಹಿತ್ಯಗಳು ಪರಸ್ಪರ ಪೂರಕವಾಗಿವೆ. ಜಾನಪದ ಸಾಹಿತ್ಯದಲ್ಲಿ ಕಥೆಗಳು ಮಹತ್ವದ ಸ್ಥಾನ ಪಡೆದಿವೆ. ಇವು ಜೀವನ ತತ್ವಗಳೊಂದಿಗೆ, ಮನರಂಜನೆ ಹಾಗೂ ಮನೋವಿಕಾಸಕ್ಕೆ ಕಾರಣವಾಗಿವೆ. ಒಂದು ಪ್ರದೇಶದ ಕತೆಗಳನ್ನು ಓದುವುದರಿಂದ, ಕೇಳುವುದರಿಂದ ಆ ಪ್ರದೇಶದ ಜನರ ಜೀವನ ಮತ್ತು ಸಂಸ್ಕೃತಿಯ ಪರಿಚಯ ಉಂಟಾಗುತ್ತದೆ. ಸಾಮಾನ್ಯವಾಗಿ ಹೆಚ್ಚಿನ ವಿಷಯಗಳಲ್ಲಿ ಮಾನವನ ಮನಸ್ಸು ಬೇರೆ ಬೇರೆ ದೂರದ ದೇಶಗಳಲ್ಲೂ ಚಿಂತನೆ, ವಿಚಾರಗಳಲ್ಲಿ ಸಾಮ್ಯತೆ ಅಲ್ಲಿಯ ಸಾಹಿತ್ಯದ ಅಭ್ಯಾಸ ಮಾಡಿದಾಗ ತಿಳಿದು ಬರುವುದು. ಅದಕ್ಕಾಗಿ ನಮ್ಮ ಹಿರಿಯರು, "ಮನುಷ್ಯ ಜಾತಿ ತಾನೊಂದೇ ವಲಂ" ಎಂದು ಹೇಳಿದರು. ಮಹಿಳೆ ಇಂದಿಗೂ ಅಂದಿಗೂ ತಾನೊಬ್ಬ ವಿಚಾರಪ್ರಿಯಳೂ, ಸಮರ್ಥಳೂ ಎಂಬುದನ್ನು ಸಿದ್ಧಮಾಡುತ್ತಲೇ ಬಂದಿದ್ದಾಳೆ. ಜಾನಪದದಲ್ಲಿಯೂ ಆಕೆ ತನ್ನ ಬುದ್ಧಿವಂತಿಕೆಯಿಂದ ತನ್ನ ಕುಟುಂಬವನ್ನು ಮತ್ತು ಬಂಧುಬಾಂಧವರನ್ನು ಸಂಕಟಗಳಿಂದ ಪಾರುಗಾಣಿಸುತ್ತಲೇ ಬಂದಿದ್ದಾಳೆ. ಅಂತಹ ಚತುರಮತಿಯ ಕಥೆಯನ್ನು ನೋಡೋಣ.

ಪಾಟಲಿಪುತ್ರದಲ್ಲಿ ಐಶ್ವರ್ಯಭಾ ಎಂಬ ದೊರೆ ಆಳುತ್ತಿದ್ದನು. ಒಂದು ದಿನ ಅವನು ಓಡ್ಡೋಲಗದಲ್ಲಿರುವಾಗ ಅವನ ಅರಮನೆಯ ಎದುರು ಒಂದು ಮದುವೆಯ ಮೆರವಣಿಗೆ ಹಾಯ್ದು ಹೋಯಿತು. ವಾದ್ಯಗಳು ಮೊಳಗಿದ ಕಾರಣ ಸಭಾಸದರೆಲ್ಲರ ಲಕ್ಷ ಅತ್ತ ಹೋಯಿತು. ಅರಸನಿಗೆ ಈ ಪ್ರಸಂಗ ಮುಜುಗರವನ್ನುಂಟು ಮಾಡಿತು ಮತ್ತು ಅತೀವ ಕೋಪಕ್ಕೆ ಕಾರಣವಾಯಿತು. ಆದರೆ ಧರ್ಮಾಧಿಪತಿ ವಿಚಿತ್ರ ವಿಚಾರಣನೆಂಬುವನು ದೊರೆಗೆ "ಮಹಾಪ್ರಭು, ಮದುವೆಯ ಮುಹೂರ್ತವು ಪ್ರಾತ:ಕಾಲವಾದರೆ ಆ ದಂಪತಿಗಳಿಗೆ ಸರಸ್ವತಿ ಬ್ರಹ್ಮರೂ, ಮಧ್ಯಾಹ್ನವಾದರೆ ಉಮಾ ಮಹೇಶ್ವರರೂ, ಸಾಯಂಕಾಲವಾದರೆ ಲಕ್ಷ್ಮಿ ನಾರಾಯಣರೂ ಆಶೀರ್ವದಿಸುತ್ತಾರೆ. ಮದುವೆಯಾಗುವ ವರ ವಧುಗಳು ದೈವತ್ವ ಸ್ವರೂಪಿಗಳು ಮತ್ತು ನೋಡುವವರಿಗೆ ಬ್ರಹ್ಮ-ಸರಸ್ವತಿ, ಉಮಾ-ಮಹೇಶ್ವರ, ಲಕ್ಷ್ಮಿ-ನಾರಾಯಣರೇ ಆಗಿರುತ್ತಾರೆ. ಆದಕಾರಣ ಮದುವೆ ಮೆರವಣಿಗೆಯತ್ತ ಎಲ್ಲರೂ ಲಕ್ಷ ಹರಿಸುತ್ತಾರೆ, ತಾವು ದಯವಿಟ್ಟು ಕೋಪಿಸಿ ಕೊಳ್ಳಬಾರದು" ಎಂದು ಬಿನ್ನವಿಸಿಕೊಂಡನು. ದೊರೆ ಸಮಾಧಾನ ಹೊಂದಿ, ಅಂದಿನ ಸಭೆ ಮುಕ್ತಾಯವಾಯಿತು.

ಮಾರನೆಯ ದಿನ ದೊರೆ ವಿಚಿತ್ರ ವಿಚಾರಣನನ್ನು ಕುರಿತು "ಸ್ವತಃ ದೇವ, ದೇವಿಯರು ಮದುಮಕ್ಕಳನ್ನು ಆಶೀರ್ವದಿಸುವುದಾದರೆ ನಾಳೆಯಿಂದ ದಿನವೂ ಒಬ್ಬ ಕನ್ಯೆಯನ್ನು ನಾನು ಮದುವೆಯಾಗುವೆ, ದಿನ ದಿನವೂ ಒಬ್ಬ ಸುಂದರ ಕನ್ಯೆಯನ್ನು ಒದಗಿಸುವ ಜವಾಬ್ದಾರಿ ನಿಮ್ಮದು" ಎಂದು ಆಜ್ಞಾಪಿಸಿದ. ರಾಜಾಜ್ಞೆ ಕೇಳಿ ಬೇಸರವಾದರೂ ವಿಚಿತ್ರ ವಿಚಾರಣ ದಿನಾಲೂ ಒಬ್ಬ ಸುಂದರಿಯನ್ನು ರಾಜನ ಮದುವೆಗೆ ಒದಗಿಸುತ್ತ ಬಂದ. ಆದರೆ ಎಷ್ಟು ದಿನ ಅಂತಾ ಈ ಜವಾಬ್ದಾರಿ ನಿಭಾಯಿಸಲು ಸಾಧ್ಯ. ಕೊನೆಗೊಂದು ದಿನ ಯಾವುದೇ ಸುಂದರ ಕುಮಾರಿ ದೊರೆಯದೆ ಕಂಗಾಲಾಗಿ ಕುಳಿತಿದ್ದ. ಅವನ ಈ ಚಿಂತಿತ ಮುಖವನ್ನು ಕಂಡ ಅವನ ಮಗಳು ನಂಗತಂತ್ರಿ ತಂದೆಯೊಡನೆ ಅವನ ದುಃಖದ ಕಾರಣ ತಿಳಿದು, "ಅಪ್ಪಾ, ಚಿಂತೆ ಬೇಡ, ನನ್ನನ್ನು ಅರಸರ ಬಳಿ ಕಳಿಸಿ, ಇಂದು ನಾನು ಅವರನ್ನು ಮದುವೆಯಾಗುವೆ " ಅಂದಳು. ವಿಚಿತ್ರ ವಿಚಾರಣ "ಇಂದೇನೋ ಸರಿ, ನಿನ್ನಿಂದ ಸಮಸ್ಯೆಗೆ ಪರಿಹಾರ, ನಾಳೆಗೆ ಹೊಸ ಕನ್ಯೆಯನ್ನು ಎಲ್ಲಿಂದ ತರಲಿ" ಅಂದ. ಮಗಳು "ಆ ಬಗ್ಗೆ ಯೋಚನೆ ಬೇಡ, ಅಂತಹ ನಾಳೆ ಬರದಂತೆ ನಾನು ನೋಡಿಕೊಳ್ಳುವೆ" ಎಂದು ಭರವಸೆ ನೀಡಿದಳು. ಮತ್ತು ಇದೆಲ್ಲವನ್ನು

ಕೇಳಿ ದುಃಖಿತಳಾದ ತಾಯಿಗೆ "ಅಮ್ಮಾ, ನೀನು ದುಃಖಿಸಬೇಡ, ನಮ್ಮ ಸಂಕಟಗಳೆಲ್ಲ ನಿವಾರಣೆಯಾಗುತ್ತವೆ. ಇಂದು ಅರಸರು ನಿಮ್ಮ ಅಳಿಯನಾಗುತ್ತಾರೆ, ಚಿಂತೆ ಬಿಡಿ." ಎಂದು ಹೇಳಿ ಸಮಾಧಾನಪಡಿಸಿದಳು.

ರಾಜ ಆ ದಿನ ಅವಳನ್ನು ಮದುವೆಯಾದ. ಆ ದಿನ ಆಕೆ ಅಂತಃಪುರದ ಎಲ್ಲ ಸ್ತ್ರೀಯರೊಡನೆ ಅತ್ಯಂತ ವಿಶ್ವಾಸ, ಪ್ರೀತಿಯಿಂದ ನೋಡಿಕೊಂಡು, ಎಲ್ಲರೂ ನಂಗತಂತ್ರಿಯನ್ನು ಬಹುವಾಗಿ ಮೆಚ್ಚಿಕೊಂಡರು. ಸಂಜೆ ವೇಳೆಗೆ ನಂಗತಂತ್ರಿ, ತನ್ನ ಸಖಿ ಕುಲಸ್ತ್ರೀಗೆ ಕಥೆ ಹೇಳತೊಡಗಿದಳು. ರಾಜಕುಮಾರರ ಕತೆಗಳು, ನಾಲ್ಕು ಸದುಪಯೋಗಗಳು ಎಂಬ ಕಥೆ, ರಾಜಕುಮಾರಿ ಮತ್ತು ರಾಜಕುಮಾರರ ರಮ್ಯ ಕತೆಗಳು, ಅಜ್ಜ ಅಜ್ಜಿಯರ ಕತೆಗಳು – ಹೀಗೆ ಒಂದರ ನಂತರ ಒಂದು ಕಥೆ ಪೋಣಿಸುತ್ತ ಹೋದಳು. ಈ ವೇಳೆ ಅಲ್ಲಿಗೆ ಬಂದ ರಾಜ ಮರೆಯಲ್ಲಿ ಈ ಸ್ವಾರಸ್ಯಪೂರ್ಣ ಕತೆಗಳನ್ನು ಕೇಳುತ್ತ ಬೆಳಗಿನವರೆಗೂ ನಿಂತಿದ್ದನು. ಮರುದಿನ ಅರಸನು ವಿಚಿತ್ರ ವಿಚಾರಣನಿಗೆ ಈಗ ನನಗೊಬ್ಬ ನಿತ್ಯ ಸುಂದರಿ ಸಿಕ್ಕು ಅವಳೊಡನೆ ಮದುವೆಯಾಗಿದ್ದೇನೆ. ಆಕೆಯೊಡನೆ ಇನ್ನು ನನ್ನ ಜೀವನ. ಇನ್ನು ದಿನದಿನದ ಬೇರೆಬೇರೆ ಕನ್ಯೆಯರು ಮತ್ತೆ ಮದುವೆಗಳು ಬೇಡ" ಎಂದು ಹೇಳಿದ.

(ಕತೆಯ ಭಾಗ – 'ಕಣ್ಣು ತೆರೆಸುವ ಕಿರುಗತೆಗಳು' – ಸಂಪಾದನೆ : ಎಚ್. ಎಸ್. ಅಜ್ಜಪ್ಪ – 1991)

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಮನ್ವಯ ಸಮಿತಿ ಜಾಲತಾಣ

ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ...

ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com

ಹೆಣದ ಸುತ್ತ ಹಣದ ಆಟ

- ಗುರುರಾಜ ಶಾಸ್ತ್ರಿ

ಮನೆಯಲ್ಲಿ ಸಾವು ಸಂಭವಿಸಿತು ಎಂದರೆ ಊರಿನವರೆಲ್ಲಾ ಸಹಾಯಕ್ಕೆ ಬಂದು ಅಂತ್ಯಕ್ರಿಯೆ ಮುಗಿಸುವವವರೆವಿಗೂ ಜೊತೆಗಿದ್ದು ಸಾಂತ್ವನ ಹೇಳಿ ವಾಪಸ್ ಆಗುತ್ತಿದ್ದ ಆ ಕಾಲವನ್ನು ನಾವು ನೋಡಿದ್ದೇವೆ. ಈಗ ಹಾಗಿಲ್ಲ ಅಂತಲ್ಲ, ಈಗಲೂ ಅಲ್ಲಲ್ಲಿ ಇಂತಹ ಮಾನವೀಯ ಕೆಲಸಗಳನ್ನು ಮಾಡುತ್ತಿರುವವರನ್ನು ನಾವು ಕಾಣಬಹುದು. ಆದರೆ ಈಗ ನಾನು ತಿಳಿಸಲು ಹೊರಟಿರುವುದು ಒಂದು ಸಾವಿನ ನಂತರ ಆಗುವ ಹಣದ ಆಟದ ಬಗ್ಗೆ.

ಆಸ್ಪತ್ರೆಯಲ್ಲಿ ವ್ಯಕ್ತಿ ಸಾವನ್ನಪ್ಪಿದ ತಕ್ಷಣ ಎಚ್ಚೆತ್ತುಕೊಳ್ಳುವುದು ಅಲ್ಲಿನ ಆಸ್ಪತ್ರೆಯ ಸಿಬ್ಬಂದಿ. ಸಾರ್ ನಮಗೆ ಗೊತ್ತಿರುವವರ ಆಂಬುಲೆನ್ಸ್ ಇದೆ, ಇಲ್ಲಿಗೆ ಬರಲು ತಿಳಿಸಲೇ? ಶವವನ್ನು ಯಾವಾಗ ಕೊಂಡೊಯ್ಯುತ್ತೀರಿ, ಎಲ್ಲಿಗೆ, ಮನೆಗೋ ಅಥವಾ ನೇರ ಸ್ಮಶಾನಕ್ಕೋ, ಇವೆಲ್ಲಾ ವಿಚಾರಣೆ. ಹೊರಗಡೆ ನೇರವಾಗಿ ಆಂಬುಲೆನ್ಸ್ ಬುಕ್ ಮಾಡಿದರೆ ಇವರು ಹೇಳುವುದಕ್ಕಿಂತ ಕಡಿಮೆ ಬೆಲೆಗೆ ಸಿಗುತ್ತದೆ. ಆದರೆ ಆ ಸಮಯದಲ್ಲಿ ನಮ್ಮ ಬುದ್ಧಿ ಓಡುವುದಿಲ್ಲ, ಅಲ್ಲಿಗೆ ಹೆಚ್ಚಿಗೆ ಹಣಕ್ಕೆ ಅಂದರೆ ಸುಮಾರು ಎರಡರಿಂದ ಮೂರು ಸಾವಿರ ರೂಪಾಯಿಗೆ ಆಂಬುಲೆನ್ಸ್ ಕಾಯ್ದಿರಿಸಿದ್ದಾಯಿತು. ಇನ್ನು ಈ ಆಂಬುಲೆನ್ಸ್ ಜೊತೆ ಬರುವ ಸಾರಥಿ, ವ್ಯಾನ್ ಸ್ವಚ್ಛಗೊಳಿಸಲು ಮುನ್ನೂರರಿಂದ ಐನೂರು ರೂಪಾಯಿ ಕೇಳುತ್ತಾನೆ. ಈ ವಿಷಯದ ಬಗ್ಗೆ ಮೊದಲೇ ಮಾತಾಗಿರದಿದ್ದರೂ, ಆ ಸಮಯದಲ್ಲಿ ನಾವು ವಾದ ವಿವಾದ ಮಾಡುವ ಸ್ಥಿತಿಯಲ್ಲಿರುವುದಿಲ್ಲ.

ಸಾವಿನ ನಂತರ ಆಸ್ಪತ್ರೆ ಬಿಲ್ ಕಡಿಮೆಯೇ ಇರುತ್ತದೆ. ಏಕೆಂದರೆ ಬಹಳಷ್ಟು ಆಸ್ಪತ್ರೆಗಳು ಶೇಕಡ ತೊಂಬತ್ತರಷ್ಟು ಹಣ ಮುಂಗಡವಾಗಿಯೇ ತೆಗೆದುಕೊಂಡುಬಿಟ್ಟಿರುತ್ತಾರೆ.

ಮುಂದಿನ ವಿಷಯಗಳು ನನಗೆ ತಿಳಿದಿರುವ ನಮ್ಮ ಸಂಪ್ರದಾಯ, ಅಂದರೆ ಬ್ರಾಹ್ಮಣ ಸಂಪ್ರದಾಯದ ಬಗ್ಗೆ ಮಾತ್ರ ಎಂದು ನಿಮ್ಮ ಅರಿವಿಗೆ ಈಗಲೇ ತರಲು ಇಚ್ಛಿಸುತ್ತೇನೆ. ಶವ ಮನೆಗೆ ತಂದಾಯಿತು, ಈಗ ಅಂತ್ಯಕ್ರಿಯೆಗೆ ತೆಗೆದುಕೊಳ್ಳ ಬೇಕಾದ ವಿವಿಧ ನಿರ್ಣಯಗಳು. ವಿದ್ಯುತ್ ಚಿತಾಗಾರಕ್ಕೆ ಹೋಗುವುದೋ?, ಸೌದೆಯಲ್ಲಿ ಸುಡುವುದೋ? ನಿರ್ಧಾರ ಯಾವುದೇ ಇರಲಿ, ಸರ್ಕಾರಕ್ಕೆ ನಾವು ಕಟ್ಟುವ ಹಣದಲ್ಲಿ ವ್ಯತ್ಯಾಸವೇನಿಲ್ಲ. ಆದರೂ ಆ ಸರ್ಕಾರದ ಜಾಲತಾಣಕ್ಕೆ ಹೋಗಿ ಯಾವ ವೇಳೆಗೆ ನಾವು ಬರುತ್ತೀವೆಂದು ವೇಳೆ ನಿಗದಿಪಡಿಸುವವರು ಯಾರು, ಯಾರಿಗೆ ಸಮಯವಿದೆ. ಇದೆಲ್ಲದಕ್ಕೂ ಪ್ಯಾಕೇಜ್ ಸರಿ ಎಂದು ನಿರ್ಧರಿಸಿ ತಿಳಿದಿರುವವರ ಮೂಲಕ ಪುರೋಹಿತರನ್ನು ಬುಕ್ ಮಾಡುತ್ತೇವೆ. ಕೆಲವೊಂದು ಸಲ ಮುಕ್ತಿ ಮಾರ್ಗ, ಮುಕ್ತಿ ತೋಟ ಇದೇ ರೀತಿ ಅರ್ಥ ಬರುವ ಬೇರೆ ಬೇರೆ ಸಭೆಗಳು ಕಡಿಮೆ ದರದಲ್ಲಿ ಅಂತ್ಯಕ್ರಿಯೆಗೆ ಸಹಾಯ ಮಾಡಲು ಒಪ್ಪಿದರೂ, ಅವರ ಕೆಲಸ ಕೇವಲ ವ್ಯಾನ್, ಪುರೋಹಿತರು ಮತ್ತು ಅಂದು ಉಪಯೋಗಿಸಬೇಕಾದ ಸಾಮಾನು ಖರೀದಿಗೆ ಮಾತ್ರ ಸೀಮಿತವಾಗಿರುತ್ತದೆ. ಇವೆಲ್ಲದಕ್ಕೆ ಸೇರಿ ಸಾಮಾನ್ಯವಾಗಿ ಆರರಿಂದ ಎಂಟು ಸಾವಿರ ತೆಗೆದುಕೊಳ್ಳುತ್ತಾರೆ.

ಆದರೆ ಈ ಸಭೆಗಳ ಸಹಾಯ ಪಡೆಯುವವರು ಬಹಳಷ್ಟು ಜನ ಇದ್ದು, ನಮ್ಮ ಸಂಪ್ರದಾಯದಂತೆ ಗಂಟೆಗಟ್ಟಲೆ ಪೂಜೆ ಹೋಮ ಮಾಡಿಕೊಡುವ ವ್ಯವಧಾನ ಇವರಿಗಿರುವುದಿಲ್ಲ. ಹಾಗಾಗಿ ನಾವು ನಮಗೆ ತಿಳಿದಿರುವ, ಗೆಳೆಯರಿಗೆ ತಿಳಿದಿರುವ ಅಥವಾ ಬಂಧುಗಳ ಮೂಲಕ ಪುರೋಹಿತರನ್ನು ನಿಯೋಜಿಸುತ್ತೇವೆ. ಇವರು ನಮಗೆ ಏನೂ ತೊಂದರೆಯಾಗದಂತೆ ಅಂತ್ಯಕ್ರಿಯೆಯವರೆಗೆ ಎಲ್ಲವನ್ನೂ ನೋಡಿ ಕೊಳ್ಳುತ್ತಾರೆ. ಹಣ ಇಪ್ಪತ್ತೈದರಿಂದ ಮೂವತ್ತು ಸಾವಿರ ಖರ್ಚಾಗುತ್ತದೆ. "ಹಣದಿಂದ ನೆಮ್ಮದಿ ಕೊಂಡುಕೊಳ್ಳಲು ಸಾಧ್ಯವಾಗುವುದಾದರೆ, ಹಣ ಪಾವತಿಸಲು ಹಿಂಜರಿಯಬೇಡ" ಎಂಬ ಗಾದೆಯಂತೆ ಈ ಆಯ್ಕೆ ತೆಗೆದುಕೊಳ್ಳುವುದು ಸೂಕ್ತ ಎಂಬುದು ನನ್ನ ಅನಿಸಿಕೆ. ಪುರೋಹಿತರು ಕೂಡ ಏನೂ ಮಾಡಲು ಸಾಧ್ಯವಿಲ್ಲ, ಅವರಿಗೆ ಈ ಮೊತ್ತದಲ್ಲಿ ಬರುವುದು ಸ್ವಲ್ಪ ಪಾಲಷ್ಟೆ. ಈ ಅಂತ್ಯಕ್ರಿಯ ಕೆಲಸಗಳಿಗೆ ಬರುವ ಪುರೋಹಿತರನ್ನು ಸಾಮಾನ್ಯ ಪೂಜೆಗಳಿಗೆ ಜನ ಕರೆಯುವುದೂ ಅತಿ ವಿರಳ. ಹಾಗಾಗಿ ಕೆಲವೊಮ್ಮೆ ಅವರು ಹಣ ಸ್ವಲ್ಪ ಹೆಚ್ಚಾಗಿಯೇ ಕೇಳುತ್ತಾರೆ.

ಮನೆಯ ಹತ್ತಿರ ನಡೆವ ಶವಸಂಸ್ಕಾರದ ಕೆಲಸಗಳು ಕಡಿಮೆ, ಬಹಳಷ್ಟು ಕೆಲಸಗಳು ಸ್ಮಶಾನ ಅಥವಾ ಚಿತಾಗಾರದಲ್ಲೇ ನಡೆಯುವುದು.

ವಿದ್ಯುತ್ ಚಿತಾಗಾರಗಳಲ್ಲಿ ಈ ಕೆಲಸಗಳಿಗೆ 8 ಅಡಿ ಉದ್ದ 8 ಅಡಿ ಅಗಲದ ಒಂದು ಕೋಣೆ ಕೊಟ್ಟಿರುತ್ತಾರೆ. ಕೆಲಸದ ನಂತರ ಆ ಕೋಣೆ ಸ್ವಚ್ಛಗೊಳಿಸಲು ಒಂದರಿಂದ ಒಂದು ಸಾವಿರ ಹಣ ಕೊಡಬೇಕಾಗುತ್ತದೆ. ಹೀಗೆ ಒಮ್ಮೆ "ನಾನೇ ಸ್ವಚ್ಛ ಮಾಡಿಕೊಡುತ್ತೇನೆ" ಎಂದಾಗ, "ತೊಂದರೆ ಇಲ್ಲ ಸಾರ್, ನೀವೇ ಸ್ವಚ್ಛ ಮಾಡಿ, ಆದರೆ ಹಣ ಮಾತ್ರ ನಮಗೆ ಕೊಡಿ" ಎಂದಿದ್ದರು. ಚಟ್ಟದ ವಿಷಯ ಇಲ್ಲಿ ನಾನು ಹೇಳಲೇಬೇಕು. ಚಟ್ಟ ಅಂದರೆ ಎರಡು ಬಿದಿರು ಕಡ್ಡಿಗಳನ್ನು ಉಪಯೋಗಿಸಿ ಏಣಿಯಂತೆ ಮಾಡುವ ಶವವನ್ನು ಮಲಗಿಸುವ ಒಂದು ಬಿದಿರಿನ ಪಲ್ಲಕ್ಕಿ. ಅಗ್ನಿಸ್ಪರ್ಶಕ್ಕೆ ಮುಂಚೆ ಇದರಲ್ಲಿರುವ ಒಂದು ಬಿದಿರಿನ ಕಡ್ಡಿಯನ್ನು ಎಸೆದುಬಿಡುತ್ತಾರೆ. ಅಂದರೆ ಚಟ್ಟ ಮಾಡುವವನಿಗೆ ಅದು ಮರು ಬಳಕೆಯ ವಸ್ತುವಾಗುತ್ತದೆ. ನಂಬಲಾಗದ ವಿಷಯವೆಂದರೆ, ಈ ಎರಡು ಬಿದಿರುಕಡ್ಡಿಯಿಂದ ಮಾಡಿದ ಚಟ್ಟಕ್ಕೆ ಅವರು ತೆಗೆದುಕೊಳ್ಳುವ ಹಣ ಮೂರರಿಂದ ಮೂರುವರೆ ಸಾವಿರ. ಹೆಚ್ಚು ಮಾತನಾಡಲು ಹೋದರೆ, "ಸಾರ್, ಈ ಟೆಂಡರ್ ಸಿಗೋದಕ್ಕೆ ನಾವು ಎಷ್ಟು ಖರ್ಚು ಮಾಡಿದ್ದೀವಿ ಗೊತ್ತಾ" ಎನ್ನುತ್ತಾರೆ.

ಸೌದೆ ಉಪಯೋಗಿಸಿ ಮಾಡುವ ಅಂತ್ಯಕ್ರಿಯೆಯಲ್ಲಿ ನಡೆಯುವ ಹಣದ ಆಟ ವಿಚಿತ್ರದಲ್ಲಿ ಸಚಿತ್ರ. ಇಲ್ಲಿ ಸೌದೆ ಜೋಡಿಸುವವನೇ ಬೇರೆ, ನಾವು ತೆಗೆದುಕೊಂಡು ಹೋದ ತುಪ್ಪದ ಪ್ಯಾಕೆಟ್ಟನ್ನು ಕಟ್ ಮಾಡಿ ಶವದ ಮೇಲೆ ಸುರಿಯುವವನೇ ಬೇರೆ, ಹಾಲು ಮೊಸರು ಪ್ಯಾಕೆಟ್ಟನ್ನು ಕತ್ತರಿಸಲು ಕತ್ತರಿ ಕೊಡುವವನೇ ಬೇರೆ. ಅಂತ್ಯಕ್ರಿಯೆ ಮುಗಿದ ತಕ್ಷಣ ಇವರೆಲ್ಲಾ ಮುಂದೆ ನಿಂತು, ತಾವು ಮಾಡಿದ ಸಹಾಯಕ್ಕೆ ಟಿಪ್ಸ್ ಕೇಳುತ್ತಾರೆ. ನೂರು ಇನ್ನೂರಕ್ಕೆ ಇವರು ಜಗ್ಗುವುದಿಲ್ಲ. ಕನಿಷ್ಠ ಐನೂರು ಕೊಡಬೇಕು. ಹೀಗೆ ಒಮ್ಮೆ ಅಂತ್ಯಕ್ರಿಯೆ ಸಮಯದಲ್ಲಿ ಐನೂರು ರೂಪಾಯಿ ಕೇಳಲು ಬಂದ ಒಬ್ಬನನ್ನು ನಾನು ನೋಡೇ ಇರಲಿಲ್ಲ. "ನೀನೇನು ಸಹಾಯ ಮಾಡಿದೆ ಮಾರಾಯ?" ಎಂದು ಕೇಳಿದ್ದಕ್ಕೆ, "ಸಾರ್ ಬೆಂಕಿಪೊಟ್ಟಣ ತಂದುಕೊಟ್ಟೆನಲ್ಲ" ಎಂದ. "ಆಗಲೇ ಉಪಯೋಗಿಸಿ, ಮೂರೋ ನಾಲ್ಕೋ ಕಡ್ಡಿಗಳಿದ್ದ ಬೆಂಕಿಪೊಟ್ಟಣಕ್ಕೆ ಐನೂರು ರೂಪಾಯಿಯೇ?" ಎಂದೆ. "ಹೋಗಲಿ ಬಿಡಿ ಸಾರ್, ಏನೋ ಸಹಾಯ ಅಂತ ನಾನೂರು ರೂಪಾಯಿ ಕೊಡಿ ಸಾಕು" ಎಂಬುದು ಅವನ ಉತ್ತರ. ಇವೆಲ್ಲದರ ನಂತರ ಅಲ್ಲಿಗೆ ಬರುವವನೇ ಮುಖ್ಯವಾದ ವ್ಯಕ್ತಿ ಕ್ಷೌರಿಕ. ಒಂದು ಹೊಸ ಬ್ಲೇಡ್ ಉಪಯೋಗಿಸಿ, ಐದೇ ನಿಮಿಷದಲ್ಲಿ ತಲೆಯನ್ನು ನುಣ್ಣಗೆ ಬೋಳಿಸುವವನ ಬೆಲೆ ಕನಿಷ್ಠ ಏಳುನೂರು ರೂಪಾಯಿಗಳು. ಇಲ್ಲಿಗೆ ಅಂತ್ಯಕ್ರಿಯೆ ಕತೆ ಸಾಕು.

ಈಗ ಮಾರನೇ ದಿನ ಕಾವೇರಿ ನದಿಯಲ್ಲಿ ಬೂದಿ ಅಥವಾ ಅಸ್ತಿಯನ್ನು ಬಿಡಲು ಹೋಗುವ ಮೊದಲು ಸ್ಮಶಾನಕ್ಕೆ ಭೇಟಿ. ಅಲ್ಲಿ ಬೂದಿ ತೆಗೆದು ಮಡಕೆಗೆ ತುಂಬಿಕೊಡುವ ಒಬ್ಬನಿಗೆ ಹಣ ಕೊಡಬೇಕು ಮತ್ತು ದಾರಿಯಲ್ಲಿ ಹೋಗುವಾಗ ಬೂದಿ ಚೆಲ್ಲದಂತೆ ಆ ಮಡಕೆಗೆ ಬಟ್ಟೆ ಕಟ್ಟಿಕೊಡುವ ಮತ್ತೊಬ್ಬನಿಗೆ ನೂರರಿಂದ ಇನ್ನೂರು ರೂಪಾಯಿ. ಶ್ರೀರಂಗಪಟ್ಟಣದ ನದಿಯಲ್ಲಿ ಬೂದಿ ಚೆಲ್ಲಲು ಆ ನದಿಯ ಪಕ್ಕದ ತೋಟದ ಮಾಲೀಕನಿಗೆ ಕನಿಷ್ಟ ಮುನ್ನೂರು ರೂಪಾಯಿಗಳನ್ನು ನೀಡಬೇಕು.

ಮನುಷ್ಯ ಬದುಕಿದ್ದಾಗ ಅವನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂಬ ಒಂದೇ ನಂಬಿಕೆ ಇರುವ ನನಗೆ ಈ ಸಾವಿನ ನಂತರದ ಯಾವುದೇ ಕೆಲಸಗಳಲ್ಲಿ ನಂಬಿಕೆ ಇಲ್ಲ. ಆದರೆ ಸಂಪ್ರದಾಯ ಹಾಗೂ ಸಮುದಾಯಕ್ಕೆ ಹೆದರಿ ಇವೆಲ್ಲಾ ನಡೆಸಲೇಬೇಕಾಗುತ್ತದೆ ಹಾಗೂ ಇಲ್ಲಿಯವರೆವಿಗೂ ಇದು ನಡೆದುಕೊಂಡು ಬಂದಿರುವುದಕ್ಕೆ ಈ ಭಯವೇ ಕಾರಣವಾಗಿದೆ. ಇಲ್ಲವಾದರೆ ಮುಂದೆಂದೋ ಒಂದು ದಿನ ಜ್ಯೋತಿಷಿಗಳು, "ನಿಮ್ಮ ಮನೆಯಲ್ಲಿ ನಿಮಗೆ ಆಗಾಗ ಅನಾರೋಗ್ಯ, ತೊಂದರೆ ಬರಲು, ನೀವೋ ನಿಮ್ಮ ಪೂರ್ವಜರೋ ಪೂರ್ಣವಾಗಿ ಮಾಡದಿದ್ದ ಒಂದು ಅಂತ್ಯಕ್ರಿಯೆಯೇ ಕಾರಣ" ಎಂದು ಹೇಳಿ ಸಾವಿರಾರು ರೂಪಾಯಿ ಖರ್ಚು ಮಾಡಿಸಿ ಶಾಂತಿಯನ್ನು ಮಾಡಿಸುವುದಂತೂ ನಿಜ.

ಇಲ್ಲಿಗೆ ಲೇಖನ ಮುಗಿಸುತ್ತೇನೆ. ಈಗಾಗಲೇ ಹೇಳಿದಂತೆ ಈ ವಿಷಯಗಳನ್ನು ಸಾಮನ್ಯವಾಗಿ ಯಾರೂ ಬರೆದದ್ದು ನಾನು ಓದಿಲ್ಲ, ಆದರೆ ಬರೆಯುವ ಧೈರ್ಯವಂತೂ ಮಾಡಿದ್ದೇನೆ. ಇನ್ನು ಸತ್ತ ನಂತರ ನಮ್ಮ ಒಂದು ವರ್ಷದಲ್ಲಿ ಆ ಪ್ರೇತ ಹಾದುಹೋಗುವ ಹದಿನಾರು ಊರುಗಳಿಗೆ ಅನುಗುಣವಾಗಿ ಒಂದು ವರ್ಷದಲ್ಲಿ ಮಾಡಲೇಬೇಕಾದ ಹದಿನಾರು ಶ್ರಾದ್ದಗಳ ಬಗ್ಗೆ ಮುಂದಿನ ಲೇಖನದಲ್ಲಿ ಬರೆಯುತ್ತೇನೆ.


***

ಪುಸ್ತಕ ಪರಿಚಯ

'ಸ್ತಂಭದೀಪಿಕೆ' – ಸ್ಮರಣೀಯ ವ್ಯಕ್ತಿಚಿತ್ರಗಳು

(ಲೇಖಕರು: ಕೆ.ಜನಾರ್ದನ ತುಂಗ – ಪ್ರಕಾಶಕರು; ಭಾರತೀ ಪ್ರಕಾಶನ, ಮೈಸೂರು)
ಪುಟಗಳು ; ೧೯೬. ಬೆಲೆ ; ₹೨೫೦/-

– ಬೆಂ.ಶ್ರೀ.ರವೀಂದ್ರ



ಹಿರಿಯ ಕಾರ್ಮಿಕ ನಾಯಕರೂ, ರಾಷ್ಟ್ರೀಯವಾದಿಗಳೂ, ಆಧ್ಯಾತ್ಮಿಕ ಜಿಜ್ಞಾಸುವೂ ಆದ ತೆರೆದ ಮನಸ್ಸಿನ ಸೂಕ್ಷ್ಮಗ್ರಾಹಿ ಬರಹಗಾರ ಜನಾರ್ದನ ತುಂಗ ಅವರ ಎರಡನೇ ಕೃತಿ "ಸ್ತಂಭದೀಪಿಕೆ". ಉಬ್ಬರದ ಕಡಲಿನಲ್ಲಿ, ದಿಕ್ಕು ಕಾಣದ ರಾತ್ರಿಯಲ್ಲಿ, ಜಹಜಿಗೆ ಬಂದರಿನ ಹಾದಿಯನ್ನು ತೋರುವ ಲೈಟ್ ಹೌಸ್‌ನಂತೆಯೇ ಬದುಕಿನ ಸವಾಲಿನ ಕ್ಷಣಗಳಲ್ಲಿ ದಾರಿದೀಪವಾಗುವ ನಮ್ಮ ಹಿರಿಯರು ಬದುಕಿದ ರೀತಿ ಮತ್ತು ಅವರು ಅನುಸರಿಸಿದ ತತ್ವ ಆದರ್ಶಗಳು, ಸ್ಮರಣೀಯ ವ್ಯಕ್ತಿಚಿತ್ರಗಳನ್ನು ಬಿಡಿಸಿರುವ ಲೇಖಕರು ಪುಸ್ತಕಕ್ಕೆ ಅನ್ವರ್ಥವಾಗಿ 'ಸ್ತಂಭದೀಪಿಕೆ' ಎಂದು ಕರೆದಿದ್ದಾರೆ. ಹಾಗೆಯೇ ನಿಶಾ ತುಂಗ ಅವರ ಮುಖಪುಟವು ಸಮರ್ಥವಾಗಿ ಪುಸ್ತಕದ ಆಶಯವನ್ನು ವ್ಯಕ್ತಪಡಿಸುತ್ತದೆ.

೧೬ನೆಯ ಶತಮಾನದಿಂದ ೨೧ನೆಯ ಶತಮಾನದವರೆಗೆ ಆದರ್ಶಗಳ ಬೆಂಬತ್ತಿ ದೇದೀಪ್ಯಮಾನವಾಗಿರುವ ೩೮ ವ್ಯಕ್ತಿಗಳ ಬದುಕಿನ ಚಿತ್ರಣವಿಲ್ಲಿದೆ. ಆರು ಅವಧಿಗಳಿಗೆ ಬೆಂಗಳೂರು ದಕ್ಷಿಣ ಕ್ಷೇತ್ರವನ್ನು ಲೋಕಸಭೆಯಲ್ಲಿ ಪ್ರತಿನಿಧಿಸಿದ್ದ ದಿವಗಂತ ಶ್ರೀ ಅನಂತಕುಮಾರ್ ಅವರ ಆದರ್ಶಗಳ ಮೂಸೆಯಲ್ಲಿ ಉತ್ತಮ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಕ್ಷೇತ್ರದಲ್ಲಿ ತೊಡಗಿಕೊಂಡಿರುವ "ಅದಮ್ಯ ಚೇತನ ಫೌಂಡೇಶನ್"ನ ಮಾಸಪತ್ರಿಕೆ "ಅನಂತ ಪಥ" ದಲ್ಲಿ ಜನಾರ್ದನ ತುಂಗರು ಮೂಡಿಸಿದ ವ್ಯಕ್ತಿಚಿತ್ರಗಳಿವು.

ಅಂಕಣ ಬರಹಗಳು ತಮ್ಮದೇ ಆದ ಮಿತಿಗಳನ್ನು ಸವಾಲುಗಳನ್ನು ಉಳ್ಳದ್ದಾಗಿವೆ. ಕ್ಯಾಮರಾ ಕಣ್ಣಿನಲ್ಲಿ ಅಗಾಧ ಪ್ರಕೃತಿಯ ಚಿತ್ರವನ್ನು ಸೆರೆಹಿಡಿದು ನೋಟಕರ/ಓದುಗರ ಚಕ್ಷು/ಅಂತಃಚಕ್ಷುಗಳಿಗೆ ರಸಧಾರೆಯನ್ನು ಎರೆಯುವ ರೀತಿಯಲ್ಲಿ ಅಂಕಣ ಬರಹಗಳು ವಿಜೃಂಭಿಸಬೇಕು. ತುಂಗರ ಅಂಕಣದ ವ್ಯಕ್ತಿಚಿತ್ರಗಳು ಅಂತಹ ಕ್ಯಾಮರಾ ಯಶವನ್ನು ಸಾಧಿಸಿವೆ. ಕನ್ನಡದಲ್ಲಿ ವ್ಯಕ್ತಿಚಿತ್ರಗಳನ್ನು ಅಕ್ಷರಗಳಲ್ಲಿ ಬಿಡಿಸುವಲ್ಲಿ ವಿಶಿಷ್ಟವಾದ ಶೈಲಿಯನ್ನು ರೂಪಿಸಿದ ಡಾ ಎಚ್ಚೆಸ್ಕೆ ಅವರ ಪ್ರಭಾವವನ್ನು ತುಂಗಾ ಅವರ ಅಂಕಣ ಬರೆಹದಲ್ಲಿ ಕಾಣಬಹುದಾಗಿದೆ.

ಇತ್ತೀಚಿನ ಕೆಲವು ವ್ಯಕ್ತಿ ಚಿತ್ರಕಾರರು, ತಮ್ಮ ಬರೆಹಕ್ಕಾಗಿ ಗೂಗಲ್ ಮೊರೆಹೋಗುವ ಪ್ರವೃತ್ತಿ ಕಂಡುಬರುತ್ತಿದೆ. ಅಂತಹ ಬರಹಗಳು ರಸಹೀನವಾಗುವುದು ನಿಸ್ಸಂಶಯ. ಆದರೆ ಪ್ರಸ್ತುತ ಲೇಖಕರು ಹಲವಾರು ಗ್ರಂಥಗಳನ್ನು ಪರಾಮರ್ಶಿಸಿ, ಸಂಗ್ರಹಿಸಿ, ವಿಶ್ಲೇಷಿಸಿ ಅಂಕಣಕ್ಕೆ ಸೂಕ್ತವಾದಷ್ಟು ಓದುಗರ ರುಚಿಗನುಗುಣವಾಗಿ ವಿಷಯಗಳನ್ನು ಉಣಬಡಿಸಿದ್ದಾರೆ. ಮುಖ್ಯ ಅಂಶಗಳನ್ನು ಬಿಡದಿರುವುದು ಹೆಚ್ಚುಗಾರಿಕೆ.

ವೀರ ರಾಣಿಯರಾದ ಅಬ್ಬಕ್ಕ, ಚೆನ್ನಭೈರಾದೇವಿ, ಅಹಲ್ಯಾ ಬಾಯಿ ಹೋಳ್ಕರ್, ಮಾದರಿ ಮೈಸೂರಿನ ನಿರ್ಮಾತೃ ನಾಲ್ಮಡಿ ಕೃಷ್ಣರಾಜರು, ಆಧ್ಯಾತ್ಮದ ಧ್ರುವ ತಾರೆಗಳಾದ ನಾರಾಯಣ ಗುರುಗಳು, ಶ್ರದ್ಧಾನಂದ ಸರಸ್ವತಿ, ಅಂಬಾಬಾಯಿ, ಸಿದ್ಧೇಶ್ವರ ಸ್ವಾಮಿಗಳು, ರಾಮಾನಂದಾಚಾರ್ಯ ಮತ್ತು ಶ್ರೀ ಶ್ರೀ ರವಿಶಂಕರ್ ಅವರುಗಳ ಚಿತ್ರಣದ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರು, ಸರ್ದಾರ್ ವಲ್ಲಭ ಭಾಯಿ ಪಟೇಲ್, ಸಾವರ್ಕರ್, ಶಾಮಪ್ರಸಾದ್ ಮುಖರ್ಜಿ, ಜಗನ್ನಾಥ ರಾವ್ ಜೋಷಿ, ಜಾರ್ಜ್‌ಫರ್ನಾಂಡಿಸ್ ಮತ್ತು ಎಲ್.ಕೆ.ಅದ್ವಾನಿ. ಮೊದಲಾದ ರಾಷ್ಟ್ರೀಯ ನಾಯಕರು ಇಲ್ಲಿನ ಪುಟಗಳ ಮೂಸೆಯಲ್ಲಿ ಪುಟಿದ್ದೆದ್ದಿದ್ದಾರೆ. ಕಾರ್ಮಿಕ ಮುಖಂಡರಾದ ದತ್ತೋಪಂತರು, ವಿವೇಕಾನಂದ ಶಿಲಾಸ್ಮಾರಕದ ರೂವಾರಿ ಏಕನಾಥ ರಾನಡೆಯವರು, ಆಲೂರು ವೆಂಕಟರಾಯರಂತಹ ಕನ್ನಡ ಹೋರಾಟಗಾರರೂ, ಸಾಮಾಜಿಕ ಕಾರ್ಯಕರ್ತರು, ಸಮಾಜಸೇವೆಯಲ್ಲಿ ತಮ್ಮ ಬದುಕನ್ನು ಅರ್ಪಿಸಿಕೊಂಡ ಮಹನೀಯರು ಸ್ತಂಭದೀಪಿಕೆಗಳಾಗಿ ಬೆಳಗಿದ್ದಾರೆ. ಹರಿದಾಸ ಕವಯತ್ರಿ ಅಂಬಾಬಾಯಿ, ಬಿರ್ಸಾ ಮುಂಡಾ, ರಾಮಚಂದ್ರ ದತ್ತಾತ್ರೇಯ ರಾನಡೆ, ಕೆಎಂ ಚಿಣ್ಣಪ್ಪ ಅವರುಗಳ ವ್ಯಕ್ತಿಚಿತ್ರಗಳು ಗಮನ ಸೆಳೆಯುತ್ತವೆ. ಕ್ಲೀಷೆಗಳಿಲ್ಲದ ಬರಹದ ಸರಳ ಶೈಲಿ ಮೆಚ್ಚುಗೆಯಾಗುತ್ತದೆ.

"ಸ್ತಂಭದೀಪಿಕೆ"ಯ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಎಲ್ಲಾ ೩೮ ವ್ಯಕ್ತಿಗಳ ರೇಖಾಚಿತ್ರಗಳು. ಚಿತ್ರಕಾರ ಶ್ರೀ ಕೆಎಸ್ ಕೃಷ್ಣಮೂರ್ತಿ ಅವರು ಅಭಿನಂದನೀಯರು.

"ಅನಂತ ಪಥ" ಪತ್ರಿಕೆಯು ಒಂದು ಸಿದ್ಧಾಂತಕ್ಕೆ ಬದ್ಧವಾದ ಪತ್ರಿಕೆ. ಲೇಖಕರು ಸಿದ್ಧಾಂತಗಳ ಎಲ್ಲೆಯನ್ನು ದಾಟಿ ಪ್ರಮುಖ ವ್ಯಕ್ತಿಗಳನ್ನು ಗುರುತಿಸಲು ಯತ್ನಿಸಿದ್ದಾರೆ. ಆದರೂ ಆ ಚೌಕಟ್ಟು ಬರಹದ, ವಿಚಾರಗಳ ವ್ಯಾಪ್ತಿಯನ್ನು ಮಿತಿಗೊಳಿಸಿದೆ.

ಶ್ರೀ ಜನಾರ್ದನ ತುಂಗರಿಗೆ ಅಭಿನಂದನೆಗಳು. ಎಲ್ಲರೂ ಓದಬೇಕಾದ ಪುಸ್ತಕವನ್ನು ರಚಿಸಿದ್ದಾರೆ. ಅವರಿಂದ ಹೆಚ್ಚಿನ ನಿರೀಕ್ಷೆಗಳು ನಮಗಿವೆ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 235 ನಡೆದ ದಿನಾಂಕ: 22 ಮಾರ್ಚ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 12 ಏಪ್ರಿಲ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 235

ಅಧ್ಯಕ್ಷರ ಅನಿಸಿಕೆಗಳು



– ಶ್ರೀಧರ ರಾವ್ ಹೆಚ್.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ವೇದಿಕೆಯಲ್ಲಿ 235ನೇ ಸಾಹಿತ್ಯ ದಾಸೋಹಕ್ಕೆ ಅಧ್ಯಕ್ಷತೆ ವಹಿಸುವ ಅವಕಾಶವನ್ನು ನೀಡಿದ ಸಂಚಾಲಕ ಸಮಿತಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು. ಸಾಹಿತ್ಯ ಶಿರೋಮಣಿಗಳು, ದಿಗ್ಗಜರು, ಸಂಪನ್ನರೂ ಇರುವಂತಹ ಈ ವೇದಿಕೆಯಲ್ಲಿ ನನ್ನನ್ನು ಬರಮಾಡಿಕೊಂಡು, ನನ್ನ ಸಾಹಿತ್ಯ ಆಸಕ್ತಿಗೆ ಪೋಷಣೆಯನ್ನು ನೀಡುತ್ತಿರುವ ಸಮಿತಿಯ ಎಲ್ಲಾ ಸಾಹಿತ್ಯಾಸಕ್ತರಿಗೂ ನಾನು ಆಭಾರಿಯಾಗಿದ್ದೇನೆ. ಅದರಲ್ಲೂ ಪ್ರಮುಖವಾಗಿ ಇಂದಿನ ಈ ಕಾರ್ಯಕ್ರಮದ ರೂವಾರಿಗಳಾದ ಶ್ರೀ ಬೆಂ.ಶ್ರೀ.ರವೀಂದ್ರ, ಶ್ರೀ ಮಹಾಬಲ, ಶ್ರೀ ಗುರುರಾಜ ಶಾಸ್ತ್ರಿ ಹಾಗೂ ಶ್ರೀ ಶೃಂಗೇಶ್ವರ ಶರ್ಮಾ ಅವರನ್ನು ನೆನಪಿಸಿಕೊಳ್ಳದೆ ಇದ್ದಲ್ಲಿ ಅಧ್ಯಕ್ಷ ರಥ, ನಿರ್ಧರಿತ ಪಥದಲ್ಲಿ ಸಾಗಿದೆ ಎಂದೆನಿಸದು.

ಇಂದಿನ ದಾಸೋಹಕ್ಕೆ ತಮ್ಮ ಕೃತಿಗಳನ್ನು ನೀಡಿದ ಎಲ್ಲಾ ಸಾಹಿತ್ಯ ಉಪಾಸಕರಿಗೂ ಆದರದ ಸ್ವಾಗತ. ನನ್ನಲ್ಲಿ ಸಾಹಿತ್ಯ ಸೇವಾಕಾಂಕ್ಷೆ ಬಾಲ್ಯದಿಂದಲೂ ಇದ್ದರೂ ನಿಜವಾದ ಸೇವೆ ಆರಂಭಿಸಿ ಕೆಲವೇ ವರ್ಷಗಳಾದವು. ನಾನು ಸಾಹಿತ್ಯದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದ್ದೇನೆ. ಹಾಗಾಗಿ, ಈ ಜವಾಬ್ದಾರಿಯಲ್ಲಿ ಲೋಪದೋಷಗಳೇನಾದರೂ ಕಂಡರೆ ಸಾಹಿತ್ಯದಲ್ಲಿ ಹಿರಿಯರಾದ ನೀವು ಮನ್ನಿಸುವಿರಿ ಎಂಬ ವಿಶ್ವಾಸದಿಂದ ಮುಂದಿನ ನಡೆಯನ್ನು ನಡೆಸುತ್ತಿದ್ದೇನೆ.

ಈ ದಾಸೋಹದಲ್ಲಿ ನಾವು ಕಾಣುವಂತಹುದು ಕೇವಲ ಆಧುನಿಕ ಕನ್ನಡ ಸಾಹಿತ್ಯ. ಅದರಲ್ಲಿ ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಕಾವ್ಯ, ಕವನ, ಕಗ್ಗ, ಭಾವಗೀತೆ, ಅನುಭವ ಕಥನ, ರಗಳೆ ಇತ್ಯಾದಿ ಇದ್ದರೂ, ಇಂದಿನ ದಾಸೋಹದಲ್ಲಿ ಕಂಡದ್ದು, ಪುಸ್ತಕಗಳ ಪರಿಚಯ, ನಾಟಕದ ತೆರೆಯ ಮರೆಯ ಅನುಭವ, ಚಿಂತನ ಲಹರಿ, ವಿಚಾರ ಮಂಥನ, ವಿಮರ್ಶೆ, ಸಣ್ಣ ಕಥೆಗಳು, ಅನುಭವ ಕಥನ ಮತ್ತು ಕವಿತೆಗಳು.

ಈ ದಾಸೋಹವನ್ನು ಒಂದು ಔತಣಕ್ಕೆ ಹೋಲಿಸಿಕೊಂಡಾಗ ಎಲ್ಲಾ ಖಾದ್ಯಗಳು ಬಂದಿಲ್ಲವೇಕೆ, ಇನ್ನಷ್ಟು ಖಾದ್ಯಗಳಿರಬಹುದಿತ್ತಲ್ಲ ಎಂದೆನಿಸುತ್ತದೆ. ಆದರೆ ದಾಸೋಹದಲ್ಲಿ ಬಡಿಸಿದ ಖಾದ್ಯಗಳೆಲ್ಲವೂ ಸ್ವಾದಿಷ್ಟ, ರುಚಿಭರಿತ ಮತ್ತು ಪೋಷಕಾಂಶಗಳಿಂದ ಕೂಡಿತ್ತು.

ಖ್ಯಾತ ವಿಮರ್ಶಕರ ಅಭಿಪ್ರಾಯದಂತೆ ಒಂದು ಕೃತಿ ಸಾಹಿತ್ಯಿಕ ದೃಷ್ಟಿಯಿಂದ ಶ್ರೇಷ್ಠ ಎಂದು ಅನಿಸಿಕೊಳ್ಳಬೇಕಾದರೆ,

- ಅದು ಓದುಗನ ಬದುಕಿಗೆ ಬಣ್ಣವನ್ನು ಕಟ್ಟಿಕೊಡಬೇಕು ಮತ್ತು ಅರ್ಥವನ್ನು ಮನನ ಮಾಡಿಸಿಕೊಡಬೇಕು.
- ಓದುಗನ ತಿಳುವಳಿಕೆಯನ್ನು ಮತ್ತಷ್ಟು ವಿಸ್ತಾರಗೊಳಿಸಬೇಕು.
- ಓದುಗನು ಸಮಾಜ ಹಾಗೂ ಬದುಕನ್ನು ನೋಡುವ ದೃಷ್ಟಿಯಲ್ಲಿ ಹೊಸತನವನ್ನು, ಹೊಸ ಅರ್ಥಗಳನ್ನು ನೀಡಬೇಕು.
- ಜೀವನದ ಬಗ್ಗೆ ಗೌರವ ಪ್ರೀತಿಗಳನ್ನು ಬೆಳೆಸಿಕೊಳ್ಳುವಂತಹ ಸೂಕ್ಷ್ಮತೆಗಳನ್ನು ನೀಡಬೇಕು.

ಇದೆಲ್ಲವೂ ಒಂದು ಕೃತಿಯಲ್ಲಿ ಮೇಳೈಸಿದಾಗ, ಆ ಕೃತಿ ಒಂದು ಶ್ರೇಷ್ಠ ಕೃತಿ ಎಂದೆನಿಸುತ್ತದೆ.

ಶ್ರೀ ಹೆಚ್. ಶ್ರೀಧರ ರಾವ್

1950ರಲ್ಲಿ ಜನಿಸಿದ ಶ್ರೀ ಶ್ರೀಧರ ರಾವ್ ಅವರು 'ಮೂಲತಃ ಶಿವಮೊಗ್ಗ ಜಿಲ್ಲೆ ಮೇಗರವಳ್ಳಿ ಬಳಿಯ ಹುಲಿಗಾರಿನವರು. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸ ಮಂಗಳೂರು, ಪುತ್ತೂರು, ಮೇಗರವಳ್ಳಿಯಲ್ಲಿ ಮುಗಿಸಿ, ಶಿವಮೊಗ್ಗದ ಡಿ.ವಿ.ಎಸ್. ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು.

ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಶ್ರೀಧರ ರಾವ್, 1972ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು, ಅಧಿಕಾರಿಯಾಗಿ ಬಡ್ತಿ ಪಡೆದು, ಬ್ಯಾಂಕು ಗಣಕೀಕರಣ ವಿಭಾಗವನ್ನು ಆರಂಭಿಸಿದಾಗ ಅದಕ್ಕೆ ಮೊದಲ ತಂಡದಲ್ಲಿಯೇ ಆಯ್ಕೆಯಾದರು. ನಂತರ ಅಂತಾರಾಷ್ಟ್ರೀಯ ಬ್ಯಾಂಕಿಂಗ್ ವಿಭಾಗ, ವ್ಯವಹಾರ ಪ್ರಕ್ರಿಯೆ ಮರುವಿನ್ಯಾಸ (ಬಿಸಿನೆಸ್ ಪ್ರೊಸೆಸ್ ರೀ-ಇಂಜಿನಿಯರಿಂಗ್) ಮುಂತಾದ ಹೊಸ ಆವಿಷ್ಕಾರಗಳ ವಿಭಾಗಗಳಲ್ಲಿ ಸೇವೆ ಸಲ್ಲಿಸಿ, ಯಶಸ್ಸು ಹಾಗೂ ನೈಪುಣ್ಯತೆ ಗಳಿಸಿದರು. ಉಪ ಪ್ರಧಾನ ವ್ಯವಸ್ಥಾಪಕರಾಗಿ ಬಡ್ತಿ ಪಡೆದ ನಂತರ ನಿಯೋಜನೆ ಮೇರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂದೂರಿನಲ್ಲಿಯೂ ಸೇವೆ ಸಲ್ಲಿಸಿದ ಇವರು, 2011ರಲ್ಲಿ ಮೈಸೂರು ಬ್ಯಾಂಕಿನ ಸೇವೆಯಿಂದ ನಿವೃತ್ತರಾದರು. ನಿವೃತ್ತಿಯ ನಂತರವೂ ಹಲವು ಭಾರತೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲ ಸಲಹೆಗಾರರಾಗಿ ಸಕ್ರಿಯರಾಗಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕನ್ನಡ ಬಳಗದ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀಧರ ರಾವ್, ಕನ್ನಡ ಬಳಗದ ಖಜಾಂಜಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಬಾಲ್ಯದಲ್ಲಿ ಆಧ್ಯಾತ್ಮ, ಸಾಹಿತ್ಯ, ಸಾಮಾಜಿಕ ಕಳಕಳಿಯುಳ್ಳ ಕುಟುಂಬದಲ್ಲಿ ಬೆಳೆದು, ಕಾಲೇಜು ದಿನಗಳಲ್ಲಿ ಸಾಹಿತ್ಯ, ನಾಟಕ, ಕ್ರೀಡೆ, ಚರ್ಚಾಸ್ಪರ್ಧೆಗಳಲ್ಲಿ ತೊಡಗಿಸಿಕೊಂಡಿದ್ದರೂ, ಕೋವಿಡ್-19ರ ಕಾಲಘಟ್ಟದಲ್ಲಿನ ಬಿಡುವು ಇವರಿಗೆ ಸಾಹಿತ್ಯ ರಚನೆಗೆ ಅವಕಾಶ ಕಲ್ಪಿಸಿತು. ಇವರು ರಚಿಸಿದ '70ರಲ್ಲಿ 20ರ ಕತೆಗಳು' (ಸಣ್ಣ ಕಥಾ ಸಂಕಲನ) 'ಪ್ರಾಜೆಕ್ಟ್ ಸರ್ಕೋಮಾ' (ಸ್ವಾನುಭವ ಕಥನ) ಹಾಗೂ 'ಏಳು ಸಹೋದರಿಯರು ಮತ್ತು ಇಪ್ಪತ್ತೊಂದು ದಿನಗಳು' (ಈಶಾನ್ಯ ರಾಜ್ಯಗಳ ಪ್ರವಾಸ ಕಥನ), 'ಉದ್ಯೋಗದಲ್ಲಿ ಉತ್ತುಂಗಕ್ಕೆ' (ಕಾರ್ಪೊರೇಟ್ ಜಗತ್ತು-ನಿರೀಕ್ಷಿತ ಸಾಮರ್ಥ್ಯಗಳು) ಪ್ರಕಟವಾಗಿವೆ.. ನಮ್ಮ ವೇದಿಕೆಯು 2024ರ ಮೇ ತಿಂಗಳಿನಲ್ಲಿ ನಡೆಸಿದ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮದಲ್ಲಿ ಇವರು ನೀಡಿದ 'ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು' ಎಂಬ ಉಪನ್ಯಾಸ ಅನೇಕ ಕುತೂಹಲಕರ ಮಾಹಿತಿಯನ್ನು ಒಳಗೊಂಡಿತ್ತು.

ಶ್ರೀಧರ ರಾವ್ ಅವರ ಪತ್ನಿ ಶ್ರೀಮತಿ ಶೋಭಾ ಅವರೂ ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಉದ್ಯೋಗಿ.

ಬರವಣಿಗೆಯಲ್ಲಿ, ನವರಸಗಳನ್ನು ಶೃಂಗಾರ, ಹಾಸ್ಯ, ಕರುಣಾ, ರೌದ್ರ, ವೀರ, ಭಯಾನಕ, ಭೀಬತ್ಸ, ಅದ್ಭುತ, ಶಾಂತತೆಯನ್ನು ನವಿರಾಗಿ ಬೆಸೆದಾಗ ಅದೊಂದು ಅತ್ಯುತ್ತಮ ಕೃತಿಯಾದೀತು. ಸತ್ವ, ರಜೋ, ತಮೋ ಗುಣಗಳನ್ನೂ ಸಮಾಜದ ಸ್ವಾಸ್ಥ್ಯ ಕೆಡದ ರೀತಿಯಲ್ಲಿ ಬಳಸಿಕೊಂಡಾಗ, ಅರಿಷಡ್ವರ್ಗಗಳ ಅರಿಷ್ಟವನ್ನು ಸುಧಾರಿಸಲು ಯತ್ನಿಸಿದಾಗ ಸಾಹಿತ್ಯ ಅಮೋಘ ಎಂದೆನಿಸುತ್ತದೆ. ನವರಸ, ಉತ್ತಮ ಗುಣ ಮತ್ತು ಅರಿಷ್ಟ ನಿವಾರಿಸಲು ಪ್ರಯತ್ನಿಸಿದಾಗ ಆತ ಉತ್ತಮ ಸಾಹಿತಿಯಾಗುತ್ತಾನೆ. ಅವುಗಳ ಹೂರಣವು ಬರವಣಿಗೆಗಾರನ ಮೂಲಗುಣ ಸ್ವಭಾವಕ್ಕೆ ಅನುಗುಣವಾಗಿಯೇ ಇರಬಹುದು. ಅಂದರೆ ನವರಸಗಳಲ್ಲಿ ತನಗೆ ಇಷ್ಟವಾದ ರಸಗಳನ್ನು ವೈಭವೀಕರಿಸುವುದು ತ್ರಿಗುಣಗಳಲ್ಲಿ ತನ್ನ ಇಷ್ಟವಾದ ಗುಣಗಳ ತಾಳಮೇಳವನ್ನು ಸರಿಹೊಂದಿಸುವುದು, ಅರಿಷಡ್ವರ್ಗಗಳ ಅರಿಷ್ಟವನ್ನು ಸುಧಾರಿಸುವ ಮಾರ್ಗವನ್ನು ಕಂಡುಕೊಳ್ಳುವುದು. ಅದರಲ್ಲಿ ಯಾವುದು ಸರಿ ಅಥವಾ ತಪ್ಪು ಎನ್ನುವುದು ಮುಖ್ಯವಲ್ಲ. ಆದರೆ ಅವನ ಒಟ್ಟಾರೆ ದೃಷ್ಟಿ, ಮೇಲೆ ಹೇಳಿದ ಅಭಿಪ್ರಾಯಗಳಿಗೆ ತಕ್ಕಂತೆ ಇದ್ದರೆ ಆ ಬರವಣಿಗೆಗಾರನ ಕೃತಿ ಶ್ರೇಷ್ಠ ಎನಿಸಿ ಕೊಳ್ಳುವುದು ಖಂಡಿತ.

ನಾನು ಛಂದಸ್ಸು, ವ್ಯಾಕರಣ, ಅಲಂಕಾರದ ಬಗ್ಗೆ ಹೆಚ್ಚು ಅರಿತವನಲ್ಲ. ಆದರೆ ಸಾಮಾನ್ಯ ಓದುಗನಾಗಿ, ಸಾಮಾಜಿಕ ಕಳಕಳಿ ಹೊಂದಿದವನಾಗಿ, ಸಾಹಿತ್ಯದ ಅಭಿಮಾನಿಯಾಗಿ ಮೇಲೆ ಹೇಳಿದ ವಿಮರ್ಶಕರ ಚಿಂತನೆಯಂತೆ ನನ್ನ ಚಿಂತನೆಯೂ ಇರುವುದರಿಂದ, ಅದರಂತೆ ನನ್ನ ವಿಮರ್ಶೆಯನ್ನು ಮುಂದುವರಿಸುತ್ತೇನೆ. ನನ್ನ ವಿಮರ್ಶೆಯಲ್ಲಿ ಮೊದಲೇ ಹೇಳಿದಂತೆ

ಲೋಪದೋಷಗಳು ಕಂಡಾವು. ಅದನ್ನು ಯಾರೂ ವೈಯಕ್ತಿಕವಾಗಿ ತೆಗೆದುಕೊಳ್ಳ ಬಾರದೆಂಬ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ದಾಸೋಹದಲ್ಲಿ ಸ್ವೀಕರಿಸಿದ 13 ಲೇಖನಗಳ ಕುರಿತಾದ ನನ್ನ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಿದ್ದೇನೆ.

ಸ್ವೀಕೃತಿ 1 – ಜಾನಪದ ಕಥೆ 'ಐಶ್ವರ್ಯ ಬಾ ಮತ್ತು ನಂಗತಂತ್ರಿ' – ಶ್ರೀ ವಿಠ್ಠಲ ಇಜೇರಿ

ಮೊದಲ ಸ್ವೀಕೃತಿ ಶ್ರೀ ವಿಠಲ ಇಜೇರಿಯವರ ಜಾನಪದ ಕಥೆ 'ಐಶ್ವರ್ಯ ಬಾ ಮತ್ತು ನಂಗತಂತ್ರಿ'. ಸಂಪಾದನಾ ಕಥೆಯ ಉದ್ದೇಶವನ್ನು ಇಜೇರಿಯವರು ತಮ್ಮ ಮೊದಲ ನುಡಿಗಳಲ್ಲಿ ಪ್ರಸ್ತುತಿಪಡಿಸಿದ್ದಾರೆ. ಇಜೇರಿಯವರ ಬರವಣಿಗೆಯ ತಂತ್ರಗಾರಿಕೆಯನ್ನು ಮತ್ತು ಹಿಡಿತವನ್ನು ನಾವು ಮೊದಲೇ ಅವರ 'ನಮ್ಮವರ ಪರಿಚಯ' ಬರವಣಿಗೆಯಲ್ಲಿ ಕಂಡಿದ್ದೇವೆ.

ಈ ಜಾನಪದ ಕಥೆಯನ್ನು ಸಂಪಾದಿಸುವಲ್ಲಿ, ಇಜೇರಿಯವರು ಮನೋರಂಜನೆ ಜೊತೆಗೆ ಜೀವನ ತತ್ವ ಹಾಗೂ ಮನೋವಿಕಾಸವನ್ನು ಅನಾವರಣಗೊಳಿಸುವ ಹಂಬಲವನ್ನು ತೋರ್ಪಡಿಸಿದ್ದಾರೆ. ಮಿಗಿಲಾಗಿ ಮಹಿಳೆಯರ ಸಾಮಾನ್ಯ ಚತುರತೆ, ಧರ್ಮಸಂಕಟಗಳನ್ನು ಎದುರಿಸುವ ಪರಿಯನ್ನು ಈ ಕಥೆಯ ನಂಗತಂತ್ರಿ ಪಾತ್ರದಲ್ಲಿ ಕಾಣಬಹುದು. ಇದೊಂದು ಸುಂದರ ಜಾನಪದ ಕತೆ. ಪ್ರಸಕ್ತ ಸಮಯಕ್ಕೆ ಹೊಂದಿಕೊಳ್ಳುವಂತಹ ಚಾಣಾಕ್ಷತೆಯನ್ನು ಇಲ್ಲಿಯ ಮಹಿಳಾ ಪಾತ್ರದಲ್ಲೂ ಕಾಣಬಹುದು. ನಿಮ್ಮ ಪ್ರಯತ್ನಕ್ಕೆ ಅಭಿನಂದನೆಗಳು.

ಸ್ವೀಕೃತಿ 2 – 'ವಿಸ್ಮಯದ ವಿಭ್ರಮೆ' – ಶ್ರೀಮತಿ ಮಾಧುರಿ ಕೃಷ್ಣ

ಭ್ರಮೆಯಲ್ಲಿಯೇ ಒಂದು ಸಾಮಾನ್ಯನ ಪಾತ್ರ ಸೃಷ್ಟಿಸಿ, ಆತನಿಂದ ಒಂದು ಜೀವನ ಸತ್ಯವನ್ನು ನುಡಿಸುತ್ತಾರೆ. 'ಮನಸ್ಸು ಧೂಳು ತುಂಬಿದ ಕನ್ನಡಿಯಂತೆ. ಆಗಾಗ ಒರೆಸಿ ಸ್ವಚ್ಛವಾಗಿಟ್ಟುಕೊಳ್ಳಬೇಕು'. ತಾನು ನಡೆದಾಡುವ ಆ ಸುಂದರ ವಾತಾವರಣದಲ್ಲಿ ನೆಮ್ಮದಿಯನ್ನು ಅರಸುತ್ತಿದ್ದರೂ ದೊರೆಯದೆ ಇರುವಾಗ ಮತ್ತೊಂದು ವೇದಾಂತವನ್ನು ತನ್ನ ಅಂತರ್‌ಮನ ಸ್ವರೂಪಿ ಸಾಮಾನ್ಯನಿಂದ ಆಡಿಸುತ್ತಾರೆ. ಬುದ್ಧಿವಾದವನ್ನು ಹೇಳಿಸುತ್ತಾರೆ. 'ಅಕ್ಷರವಂತರಾದರೆ ಸಾಲದು, ವಿಚಾರವಂತರಾಗಿರಬೇಕು. ಸಮಸ್ಯೆಗಳು ಪುಂಖಾನುಪುಂಖವಾಗಿ ಬರುತ್ತಲೇ ಇರುತ್ತವೆ. ಪರಿಪೂರ್ಣತೆ ಮರೀಚಿಕೆಯೇ. ಅಸಮಂಜತೆಗಳಿಂದ ಬದುಕನ್ನು ಸರಿಪಡಿಸಿಕೊಂಡು ನಿಮ್ಮ ಅಸ್ತಿತ್ವದ ಮರು ನಿರ್ಮಾತೃಗಳಾಗಬೇಕು' ಎನ್ನುತ್ತಾ ದೇವಸ್ಥಾನದ ಮೆಟ್ಟಿಲ ಮೇಲೆ ಕುಳಿತಿರುವುದು ದೇವರಿಗೆ ಶರಣಾಗಲಿರಬೇಕೇನೋ? ಈ ಪ್ರಸ್ತುತಿಯಲ್ಲಿ ಕರ್ತೃವಿನ ಮಾನಸಿಕ ತೊಳಲಾಟ ಹಾಗೂ ತನ್ನನ್ನು ತಾನೇ ಸಾಂತ್ವನಪಡಿಸಿಕೊಳ್ಳುವ ಜೀವನ ಸತ್ಯ ಚೆನ್ನಾಗಿ ಮೂಡಿಬಂದಿದೆ. ಓದುಗರ ಚಿಂತನೆಗೂ ಮುಕ್ತ ಅವಕಾಶವನ್ನು ಕಲ್ಪಿಸಿದ್ದಾರೆ. ಅತ್ಯುತ್ತಮ ಬರವಣಿಗೆ.

ಸ್ವೀಕೃತಿ 3 – 'ನನ್ನ ನೀನು ಗೆಲ್ಲಲಾರೆ' – ಸ್ನೇಹ ಶಶಿಧರ

ಆಶಯ ಚೆನ್ನಾಗಿದೆ. ಹೆಣ್ಣಿನ ಕುರಿತಾಗಿ ಸಮಾಜದ ದೃಷ್ಟಿ ಬದಲಾಗುತ್ತಿದೆ. ಸಮಾಜದ ಏಳಿಗೆಗಾಗಿ ಇನ್ನಷ್ಟು ಬದಲಾವಣೆ ಬೇಕಾಗಿದೆ. ಹೆಣ್ಣು ಗಂಡುಗಳಲ್ಲಿ ಯಾರೂ ಮೇಲಲ್ಲ ಕೀಳಲ್ಲ. ಸೃಷ್ಟಿಯ ಕಾರ್ಯ ನಿರ್ವಹಣೆಗೆ ಇಬ್ಬರೂ ಬೇಕು. ಇಲ್ಲವಾದಲ್ಲಿ ಅಸಮತೋಲನವಾಗುತ್ತದೆ ಎಂಬುದನ್ನು ಪ್ರತಿಪಾದಿಸಲು ಕೆಲವು ಪ್ರಸಕ್ತ ಹಾಗೂ ಪೌರಾಣಿಕ ಉದಾಹರಣೆಗಳನ್ನು ನೀಡಿದ್ದಾರೆ. ಒಟ್ಟಾರೆಯಾಗಿ ನೋಡಿದಾಗ, ತನ್ನ ವಿಚಾರಗಳನ್ನು ಮಂಡಿಸುವಲ್ಲಿ, ಪೋಷಿಸುವಲ್ಲಿ ಆತುರತೆಯಿಲ್ಲದಿದ್ದರೆ ಬರವಣಿಗೆ ಇನ್ನಷ್ಟು ರಸವತ್ತಾಗಿರುತ್ತಿತ್ತು ಎಂದೆನಿಸುತ್ತದೆ. ನಿಮ್ಮ ಭಾವನೆಗಳಲ್ಲಿ ಧನಾತ್ಮಕ ಸ್ಪಂದನೆ ಇದೆ.

ಸ್ವೀಕೃತಿ 4 – 'ಛಲದಂಕಮಲ್ಲ ಪಾ ರಾ ನಾಟಕದ ತೆರೆ ಏಳುವ ಮುನ್ನ' – ಧೀರೇಂದ್ರ ಎಸ್.

ನಾಟಕ ರಂಗಸ್ಥಳವೇರುವ ಮುನ್ನ ಮತ್ತು ಪರದೆಯ ಹಿಂದಿನ ಸ್ವಾರಸ್ಯಕರ ಘಟನೆಗಳನ್ನು ನಮಗೆ ಪರಿಚಯಿಸಿದ್ದಾರೆ. ನಾಟಕವನ್ನು ನೋಡಿ ಸಂತೋಷಪಡುವ, ಚಪ್ಪಾಳೆ ತಟ್ಟುವ ವೀಕ್ಷಕರಿಗೆ ನಾಟಕಕಾರನ, ನಟರ ಪರಿಶ್ರಮ, ಬವಣೆ ಇದಾವುದರ ಅರಿವಿರುವುದಿಲ್ಲ. ಅವುಗಳನ್ನು ನವಿರಾಗಿ ತಿಳಿಸುವ ಚಾಣಾಕ್ಯತೆಯನ್ನು ಕ್ರಿಯಾಶೀಲ ಶ್ರೀ ಧೀರೇಂದ್ರ ಅವರು

ತೋರ್ಪಡಿಸಿದ್ದಾರೆ. ಪಾ ರಾ ಅವರ ನಿಜ ಸಂಘರ್ಷ ಜೀವನದ ಕುರಿತಾದ ನಾಟಕವಾದುದರಿಂದ ಅದರಲ್ಲಿ ನೈಜತೆಗೆ ಭಂಗಬಾರದಂತೆ ನಾಟಕವನ್ನು ಬರೆಯುವುದು, ಪೋಷಿಸಿಕೊಂಡು ಹೋಗುವುದು ಅತ್ಯಂತ ಕಠಿಣ ಸವಾಲೇ ಸರಿ. ಧೀರೇಂದ್ರ ಅವರ ನಾಟಕವನ್ನು ನೋಡಿದ ವೀಕ್ಷಕರು ಭಲೇ ಅಂದಿದ್ದಾರೆ.

ಧೀರೇಂದ್ರ ಹಾಗೂ ಅವರ ತಂಡ ನಿಜಾಂಶವನ್ನು ಕಲೆಹಾಕುವಲ್ಲಿ, ಘಟನಾವಳಿಗಳನ್ನು ಸಕ್ರಮಗೊಳಿಸುವಲ್ಲಿ, ತಮ್ಮ ಹಲವಾರು ದಶಕಗಳ ನಾಟಕ ವೃತ್ತಿಯ ದಿಗ್ಗಜರ ಅನುಭವಗಳನ್ನು ಉಪಯೋಗಿಸಿಕೊಂಡು ನಿರೂಪಣೆ, ರಂಗಸಜ್ಜಿಕೆ, ಅಪೇಕ್ಷಿತ ರಂಗಗೀತೆ, ಆವಶ್ಯಕ ವಿಡಿಯೋ ತುಣುಕುಗಳನ್ನು ಆಪ್ತವಾಗಿ ಬಳಸಿಕೊಂಡಿರುವುದನ್ನು ಬಣ್ಣಿಸಿದ್ದಾರೆ. ಹಣವನ್ನು ವ್ಯಯಿಸದೆ, ಬೇಕಾದ ರಂಗಪರಿಕರಣೆಗಳನ್ನು ಸಂಪಾದಿಸಿದುದನ್ನು ತೆಳು ಹಾಸ್ಯ ಲೇಪನದೊಂದಿಗೆ ಪ್ರಸ್ತುತಪಡಿಸಿರುವುದು ಶ್ಲಾಘನೀಯ. ಅವರ ತಂಡದ ಉತ್ಸುಕತೆ, ಸಹಯೋಗ, ಸಮಾಲೋಚನೆ, ಸಂಧರ್ಭಾನುಸಾರ ಬದಲಾವಣೆಗಳನ್ನೂ ಮಾಡಿರುವುದು, ವ್ಯಕ್ತಿ ಕೇಂದ್ರಿತ ನಾಟಕದ ಯಶಸ್ಸಿಗೆ ಕಾರಣ ಎಂಬುದನ್ನು ಪರೋಕ್ಷವಾಗಿಯೂ ಮುಕ್ತವಾಗಿಯೂ ಶ್ಲಾಘಿಸಿದ್ದಾರೆ. ಒಂದು ಉತ್ತಮ ಮುನ್ನೋಟದ ಹಿನ್ನೋಟ ಈ ಬರಹ.

ಐದು ದಶಕಗಳ ಹಿಂದಿನ ಮಾತು. ನಾನು ಮತ್ತು ನನ್ನ ಸ್ನೇಹಿತ ಶ್ರೀ ತೆಮ್ಮೆಮನೆ ರಾಮಮೂರ್ತಿ ಒಂದು ನಾಟಕ ಬರೆದು ಆಡಿಸಿದ್ದು ಇಲ್ಲಿ ನೆನಪಿಗೆ ಬಂತು. ಇಲ್ಲಿ ನಿಮ್ಮ ಪ್ರಯತ್ನ ವ್ಯಕ್ತಿಯ ಸಾಧನೆಯನ್ನು ಬಿಂಬಿಸುವುದಾಗಿತ್ತು. ಅಲ್ಲಿ ನಮ್ಮ ಪ್ರಯತ್ನ ಒಬ್ಬ ನಟನ ಕೇಂದ್ರೀಕೃತವಾಗಿತ್ತು. ಅವನು ಮಾತನಾಡಿದರೆಂದರೆ ಎಂತಹ ಗಂಭೀರಸ್ಥನೂ ನಗುತ್ತಿದ್ದನು. ಅಂತಹ ಹಾಸ್ಯಗಾರ. ಆತನ ಪ್ರತಿಭೆಗೆ ಅವಕಾಶ ನೀಡಬೇಕಿತ್ತು. ತುರ್ತು ಪರಿಸ್ಥಿತಿಯ ಸಮಯ. ರಾಜಕೀಯ ವಿಡಂಬನೆಯನ್ನು ಮೂಲ ವಸ್ತುವಾಗಿಟ್ಟುಕೊಂಡು ನಾವು 'ಇವರೀಸಭ್ಯರು' ಎಂಬ ನಾಟಕ ಬರೆದು ಹಲವುಕಡೆ ಪ್ರದರ್ಶಿಸಿದೆವು. ಕೈ ಬರಹದಲ್ಲಿದ್ದ ನಾಟಕವನ್ನು ಆಡಿಸುತ್ತೇನೆಂದು ತೆಗೆದುಕೊಂಡು ಹೋದವರು ಹಿಂದಿರುಗಿಸಲಿಲ್ಲ. ಅದನ್ನು ಹುಡುಕಾಡುವ ಸಮಯ ನಮಗೂ ಇದ್ದಿಲ್ಲ. ಆದರೆ ವ್ಯಕ್ತಿ ವಿಶೇಷ ನಾಟಕ ಬರೆಯುವುದು ಎಷ್ಟು ಕಷ್ಟ ಎನ್ನುವ ಅನುಭವ ಅದರಿಂದ ಬಂತು.

ಸ್ವೀಕೃತಿ 5 – 'ಶಾಂತರಸ' – ಶ್ರೀ ಗಣಪತಿ ಹೆಗಡೆ

ಶ್ರೀ ಗಣಪತಿ ಹೆಗಡೆಯವರು ಆಗಾಗ ತಮ್ಮ ಪಾಂಡಿತ್ಯವನ್ನು ಈ ವೇದಿಕೆಯಲ್ಲಿ ಹಂಚಿಕೊಂಡು ನಮಗೆಲ್ಲರಿಗೂ ಸಾಹಿತ್ಯದ ಹಲವು ಪ್ರಕಾರಗಳ ಲಾಭವನ್ನು ನೀಡಿದ್ದಾರೆ. ಅಂತಹುದೇ ಇನ್ನೊಂದು ಮಾಹಿತಿ ಈ ಬರವಣಿಗೆಯಲ್ಲಿದೆ. ಕಾಕತಾಳೀಯವೆಂಬಂತೆ ನನ್ನ ಪ್ರಸ್ತಾವನೆಯಲ್ಲಿ ಸಾಹಿತ್ಯದಲ್ಲಿ ರಸಾನುಸ್ವಾದದ ಕುರಿತಾಗಿ ಬರೆದಿದ್ದೆ. ಅದಕ್ಕೆ ಪೂರಕವಾಗಿ ಶ್ರೀ ಹೆಗಡೆಯವರು ಮಂಡಿಸಿರುವ ಈ ಪ್ರಸ್ತುತಿಯನ್ನು ಕೇವಲ ಶಾಂತರಸಕ್ಕೆ ಸೀಮಿತಗೊಳಿಸದೆ ನವರಸಗಳನ್ನೂ ವಿಮರ್ಶಿಸಿದ್ದಾರೆ. ಉದಯೋನ್ಮುಖ ಬರಹಗಾರರಿಗೆ ರಸಾನುಭೂತಿಯ ಹಿಡಿತ ಸಾಧಿಸುವುದರ ಬಗ್ಗೆ ಉತ್ತಮ ಮಾಹಿತಿ ಅವರ ಈ ಲೇಖನದಲ್ಲಿದೆ. ಅದರ ಸದ್ವಿನಿಯೋಗ ಪಡೆಯುವುದು ಓದುಗರ ಆಸಕ್ತಿಯ ಮೇಲಿದೆ.

ಷಡ್ರಸಗಳನ್ನು ಪ್ರಸ್ತಾಪಿಸುತ್ತಾ, ನವರಸಗಳು ಮತ್ತದರ ಸ್ಥಾಯೀಭಾವಗಳನ್ನು ವಿವರಿಸುತ್ತಾ, ನಾಟಕಗಳಲ್ಲಿನ ಅಥವಾ ನೃತ್ಯಗಳಲ್ಲಿನ ಅಷ್ಟರಸಗಳನ್ನು ವಿಮರ್ಶಿಸುತ್ತಾ ನಂತರದಲ್ಲಿ ಶಾಂತರಸದ ಹುಟ್ಟು, ಚಿತ್ತವೃತ್ತಿಯನ್ನು ವ್ಯಾಖ್ಯಾನಿಸುತ್ತಾರೆ. ರಸೋತ್ಪತ್ತಿ, ಮನದಲ್ಲಿ ಭಾವಗಳ ಜಾಗೃತಿ ಹಾಗೂ ಚಂಚಲತೆಗಳನ್ನು ವಿವರಿಸುತ್ತಾ, ಶಾಂತ ಭಾವದ ಸ್ಥಿತಿಯನ್ನು ವಿವರಿಸುತ್ತಾರೆ. ಕೊನೆಯಲ್ಲಿ ಶಾಂತ ರಸವೋ? ಸ್ಥಿತಿಯೋ? ಎಂಬ ಹಲವರ ಅನುಮಾನವನ್ನು ವಿಮರ್ಶೆಗೆ ಬಿಡುತ್ತಾರೆ.

ನನ್ನ ಅನಿಸಿಕೆ ಶಾಂತ ರಸವೇ!. ಶಾಂತ ರಸದ ಉತ್ಪತ್ತಿಯಾದಾಗಲೇ, ಶಾಂತ ಸ್ಥಿತಿ. ಲೇಖಕರು ಹೇಳುವಂತೆ ಮಾನಸ ಸರೋವರದಲ್ಲಿ ಅಲೆಗಳ ಹೊಯ್ದಾಟ, ತೊಯ್ದಾಟ ನಿಂತಾಗ ಅದುವೇ ಶಾಂತ ಸ್ಥಿತಿ! ಆನಂದಮಯ ಸ್ಥಿತಿ!! ಚಿದಾನಂದ ಸ್ವರೂಪ!!!

ಸ್ವೀಕೃತಿ 6 – ಕೆ.ಜನಾರ್ದನ ತುಂಗರ 'ಸ್ತಂಭದೀಪಿಕೆ' – ಪುಸ್ತಕ ಪರಿಚಯ: ಶ್ರೀ ಬೆಂ.ಶ್ರೀ.ರವೀಂದ್ರ

ಒಂದಾದರೂ ಪುಸ್ತಕ ವಿಮರ್ಶೆ ಬಂದಿದ್ದರೆ ಚೆನ್ನಾಗಿರುತ್ತಿತ್ತು ಅಂದುಕೊಳ್ಳುವಷ್ಟರಲ್ಲಿಯೇ, ನೆನೆದವರ ಮನದಂತೆ ಬಂದೆಬಿಟ್ಟಿತು ಪುಸ್ತಕ ಪರಿಚಯ. ಬರೆದವರೂ ನಮ್ಮವರೇ, ವಿಮರ್ಶಿಸಿದವರೂ ನಮ್ಮವರೇ ಎಂದುಕೊಳ್ಳುವಾಗ ಈ ಸಮಿತಿಯ ಸದಸ್ಯರ ವಿದ್ವತ್ತು, ಪ್ರತಿಭೆ, ಸಾಹಿತ್ಯಾರಾಧನೆಯ ಬಗ್ಗೆ ಬಹಳ ಹೆಮ್ಮೆ ಎನಿಸುತ್ತದೆ. ಸಮಿತಿಯ ಮೂಲ ಕರ್ತೃ ಮತ್ತು ಸಂಘಟನಾ ಚತುರ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಮತ್ತೊಬ್ಬ ಸಂಘಟನಾ ಚತುರನ ಪುಸ್ತಕದ ಕುರಿತಾಗಿ ವಿಮರ್ಶಿಸುವ ಕಲೆ ಅದ್ವಿತೀಯ.

'ಸ್ತಂಭದೀಪಿಕೆ'ಯ ಅನ್ವರ್ಥತೆಯನ್ನು ತುಂಗ ಅವರ ಬರಹಗಳ ಒಳನೋಟದಿಂದ ನೋಡಿ, ಹಿರಿಯರು ಅನುಸರಿಸಿದ ತತ್ವ, ಆದರ್ಶ, ಮೌಲ್ಯಗಳು ಜೀವನದ ಸವಾಲಿನ ಕ್ಷಣಗಳಲ್ಲಿ ಹೇಗೆ ದಾರಿದೀಪವಾಗುತ್ತವೆ ಎಂಬುದನ್ನು ಅರ್ಥೈಸಿದ್ದಾರೆ. ದಿ.ಅನಂತಕುಮಾರ್ ಕುಟುಂಬದ ಅದಮ್ಯ ಚೇತನ ಟ್ರಸ್ಟ್‌ನ ಸಾಂಸ್ಕೃತಿಕ ಮತ್ತು ಸಾಹಿತ್ಯ ಕ್ಷೇತ್ರದ ಮಾಸಪತ್ರಿಕೆಯಲ್ಲಿ ಶ್ರೀ ತುಂಗ ಅವರ ಅಂಕಣ ಬರಹದಿಂದ ಮೂಡಿಸಿದ ವ್ಯಕ್ತಿಚಿತ್ರಗಳನ್ನು ರವೀಂದ್ರ ಅವರು ವಿಮರ್ಶಿಸುವಾಗ, ಡಾ.ಎಚ್ಚೆಸ್ಕೆ ಅವರ ಪ್ರಭಾವವನ್ನು ತುಂಗರ ಬರಹದಲ್ಲಿ ಕಾಣುತ್ತಾರೆ.

ವೀರ ರಾಣಿಯರಾದ ಅಬ್ಬಕ್ಕ, ಅಹಲ್ಯಬಾಯಿ ಹೋಳ್ಕರ್, ರಾಣಿ ಚೆನ್ನಭೈರಾದೇವಿ, ನಾಲ್ವಡಿ ಕೃಷ್ಣರಾಜರು, ನಾರಾಯಣ ಗುರುಗಳು, ಸಿದ್ದೇಶ್ವರ ಸ್ವಾಮಿಗಳು, ಸರ್ದಾರ್ ವಲ್ಲಭಭಾಯಿ ಪಟೇಲ್, ಎಲ್.ಕೆ.ಅಡ್ವಾಣಿ, ಆಲೂರು ವೆಂಕಟ ರಾಯರು ಹೀಗೆ ಸಮಾಜದ ಹಲವಾರು ಕ್ಷೇತ್ರದ ಮುತ್ಸದ್ದಿಗಳ ಸರಳ ಚಿತ್ರಣಕ್ಕೆ ತುಂಗ ಅವರನ್ನು ಶ್ಲಾಘಿಸುತ್ತಾರೆ. ಒಂದು ಸಿದ್ಧಾಂತಕ್ಕೆ ಬದ್ಧವಾದ ಅಂಕಣ ಬರಹಗಳು ಎಲ್ಲೂ ಎಲ್ಲೇ ಮೀರದಿರುವುದು, ಒಮ್ಮೊಮ್ಮೆ ವಿಚಾರ ವ್ಯಾಪ್ತಿಯನ್ನು ಮಿತಿಗೊಳಿಸಿದೆ ಎಂಬ ಕಾಳಜಿಯನ್ನು ರವೀಂದ್ರ ಅವರು ಹೊರಹಾಕಿದ್ದಾರೆ. ಎಲ್ಲರೂ ಈ ಪುಸ್ತಕವನ್ನು ಓದುವಂತೆ ಪ್ರೇರೇಪಿಸುತ್ತಾರೆ.

ಸ್ವೀಕೃತಿ 7 – 'ಪೊರೆ ಕಳಚಿತು' – ಶ್ರೀಮತಿ ಉಷಾರಾಣಿ ಟಿ.ಆರ್.

ಒಂದು ಸಾಮಾನ್ಯ ಮಧ್ಯಮ ಕುಟುಂಬ, ಮಗನ ವಿದ್ಯಾಭ್ಯಾಸಕ್ಕಾಗಿ ಹಣ ಹೊಂದಿಸುವ ಬವಣೆಯನ್ನು ಮೂಲ ವಸ್ತುವನ್ನಾಗಿಸಿಕೊಂಡು ಸಣ್ಣಕಥೆಯ ಸಾರವನ್ನು, ಗೌಪ್ಯತೆಯನ್ನು ಕತೆಯ ಕೊನೆಯವರೆವಿಗೂ ಕಾಪಾಡಿ ಕೊಂಡಿರುವುದು ಲೇಖಕಿಯ ಸಾಹಿತ್ಯದ ಅನುಭವ, ಆಳ ಮತ್ತು ಹಿಡಿತವನ್ನು ತೋರಿಸುತ್ತದೆ. ಕತೆಯ ನಾಯಕನ ಆದರ್ಶಗಳಲ್ಲಿ ದಾನ ಕೊಟ್ಟಿರುವುದನ್ನು ಕೇಳಿ ಪಡೆಯುವುದೋ, ತನ್ನ ಆದರ್ಶಕ್ಕೆ ಹೊರತಾಗಿ ಲಂಚ ಸ್ವೀಕರಿಸುವುದೋ ಎಂಬ ಗುಮಾನಿಯಲ್ಲಿ ಸಾಗುವ ಕತೆ, ಅಣ್ಣನಿಗೆ ಜಮೀನು ಬೇಡವೆಂದು ಕೊಟ್ಟಿದ್ದ ಆಶ್ವಾಸನೆಯನ್ನು ಹಿಂತೆಗೆದುಕೊಳ್ಳುವುದೇ ಸೂಕ್ತ ಎಂದೆನಿಸಿ ತಾನು ಕಾಪಾಡಿಕೊಂಡು ಬಂದಿದ್ದ ಆದರ್ಶವನ್ನೇ ಪಾಲಿಸುತ್ತಾನೆ ನಾಯಕ ಬದರಿ.

ಪ್ರಸಕ್ತ ಸರ್ಕಾರಿ ಕಚೇರಿಗಳಲ್ಲಿ ವೈಭವದಿಂದ ಮೆರೆಯುತ್ತಿರುವ ಲಂಚಾವತಾರವನ್ನು ಅನಾವರಣಗೊಳಿಸಿ, ಅದಕ್ಕೆ ಹೊರತಾದ ನಾಯಕನನ್ನು ಆ ಬಲೆಗೆ ಬೀಳದಂತೆ ನೋಡಿಕೊಂಡದ್ದು ಲೇಖಕಿಯ ಜೀವನ ಮೌಲ್ಯದ ಬಗ್ಗೆ ಇರುವ ಆದರ ಮತ್ತು ಗೌರವವನ್ನು ಪ್ರತಿಬಿಂಬಿಸುತ್ತಿದೆ. ಲಂಚಾವತಾರಿ ಹನುಮಂತಪ್ಪನನ್ನು ಪೆಚ್ಚಾಗಿಸುವುದು, ಕಂಟ್ರಾಕ್ಟರ್ ಸಣ್ಣಯ್ಯನವರ ಕಿರು ನಗು, 'ಅಪ್ಪನಿಗೆ ಆದರ್ಶದ ಭೂತ ಹಿಡಿದಿದೆ' ಎಂಬ ಮಗನ ಬೇಸರ, 'ಬೇಕುಗಳಿಗೆ ಬ್ರೇಕ್ ಹಾಕುವುದು' ಎಲ್ಲವೂ ನಾಯಕನ ಜೀವನಾದರ್ಶಗಳಿಗೆ ಪೂರಕವೇ. ಒಟ್ಟಿನಲ್ಲಿ ಒಂದು ಕಥಾ ಹಂದರದೊಳಗಿನ ನೀತಿ ಕತೆ ಎನ್ನಬಹುದು. ಇವರ ಸಣ್ಣಕತೆ ಈ ವೇದಿಕೆಯಲ್ಲಿರುವ ಕಿರಿಯ ಕತೆಗಾರರಿಗೆ ಮಾರ್ಗಸೂಚಿ ಎಂದರೆ ಅತಿಶಯೋಕ್ತಿಯಲ್ಲ.

ಸ್ವೀಕೃತಿ 8 – 'ಗೊರಕೆ ಪುರಾಣ' – ಶ್ರೀಮತಿ ಸಿಂಧು ಹರಿಥಸ್

ಇದನ್ನು ಮಕ್ಕಳ ಕಥೆಗಳ ಸಾಲಿಗೆ ಸೇರಿಸಬಹುದು. ಇಂತಹ ಕಥೆಗಳು ಚಿಕ್ಕ ಮಕ್ಕಳಿಗೆ ಮುದ ನೀಡುತ್ತವೆ. ಬಾಲ್ಯಾವಸ್ಥೆಯಲ್ಲಿ ಕತೆ ಹೇಳುವುದರಿಂದ ಮಕ್ಕಳಿಗೆ ಬೇಕಾದ ಜ್ಞಾನವನ್ನು, ಜಾಣ್ಮೆಯನ್ನು ಉದ್ದೀಪನಗೊಳಿಸುವುದು ಸುಲಭವಾಗುತ್ತದೆ. ಕಲ್ಪನೆಯ

ಹಲವಾರು ಆಯಾಮಗಳು ಈ ಕಥೆಯಲ್ಲಿ ಕಂಡುಬರುತ್ತದೆ. ಕತೆಗಾರನಿಗೆ ಬೇಕಿರುವ ಕಲ್ಪನಾ ಚತುರತೆ ಈ ಕಥೆಯಲ್ಲಿದೆ. ಶ್ರೀಮತಿ ಸಿಂಧು ಇನ್ನೂ ಹೆಚ್ಚಿನ ಶ್ರಮ ಹಾಕಿದರೆ, ಇನ್ನಷ್ಟು ಉತ್ತಮ ಸಾಹಿತ್ಯವನ್ನು ನೀಡಬಹುದು. ಅವರು ಕಥಾ ನಿರೂಪಣೆಯನ್ನು ಭಾವನಾತ್ಮಕವಾಗಿ ಏಕಪಾತ್ರಾಭಿನಯದಂತೆ ಮಾಡಿರುವುದು, ವಿಡಂಬನೆಗಳನ್ನೂ ಆಪ್ತವಾಗಿ ಬಳಸಿದ್ದು ಆಕರ್ಷಕ ಆಗಿತ್ತು. ಶುಭವಾಗಲಿ.

ಸ್ವೀಕೃತಿ 9– 'ಎಲ್ಲರೊಳಗೊಂದಾಗು' – ಪುಸ್ತಕ ಪರಿಚಯ: ಶ್ರೀಮತಿ ಶೀಲಾ ಅರಕಲಗೂಡು

ಸಾಹಿತಿಯ ಜೀವನ ಚರಿತ್ರೆಯನ್ನು ಮಕ್ಕಳಿಗಾಗಿ ಚಿತ್ರಗಳ ಮೂಲಕ ಪ್ರಸ್ತುತಪಡಿಸಿರುವುದು ಇನ್ನೊಬ್ಬ ಮಕ್ಕಳ ಸಾಹಿತ್ಯದ ಇತ್ತೀಚಿನ ರೂವಾರಿ ಶ್ರೀಮತಿ ಶೀಲಾ ಅರಕಲಗೂಡು ಅವರು. ತಮ್ಮ ಶಿಕ್ಷಣ ಕ್ಷೇತ್ರದ ಅನುಭವದ ಜೊತೆಗೆ ಈ ಪುಸ್ತಕವನ್ನು ಮಕ್ಕಳ ಮನೋಭಿಲಾಷೆ, ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಿಸಿರುವುದು ಶ್ಲಾಘನೀಯ. ಅವರ ನಿರರ್ಗಳ ಬರವಣಿಗೆಯಲ್ಲಿ ಪುಸ್ತಕದ ಶೀರ್ಷಿಕೆಯಿಂದ ಆರಂಭಿಸಿ, ವಿನ್ಯಾಸವನ್ನು ಮೆಚ್ಚಿ, ಡಿ.ವಿ.ಜಿ. ಅವರ ವಂಶವೃಕ್ಷ, ವಿದ್ಯಾಭ್ಯಾಸ, ಅವರ ಗುರುಗಳ ಕುರಿತಾಗಿ ಬರೆಯುತ್ತಾರೆ. ಅವರ ಆಧ್ಯಾತ್ಮಿಕ ಚಿಂತನೆ, ಪತ್ರಿಕೋದ್ಯಮದಲ್ಲಿನ ಸಾಹಸ, ರಾಜಕೀಯದಲ್ಲಿನ ಪಾತ್ರ ಹಾಗು ಸಾಮಾಜಿಕ ಕಳಕಳಿಯ ಬಗ್ಗೆ ವಿಸ್ತೃತ ವಿವರಣೆಯನ್ನು ನೀಡಿದ್ದಾರೆ. ಪೂರ್ತಿ ವಿಮರ್ಶೆಯನ್ನು ಓದಿದಾಗ ಅವರ ಸಂಕ್ಷಿಪ್ತ ಜೀವನ ಚರಿತೆಯು ನಮ್ಮ ಅನುಭವಕ್ಕೆ ಬರುತ್ತದೆ. ಅತ್ಯುತ್ತಮ ಪ್ರಯತ್ನ. ಅಭಿನಂದನೆಗಳು.

ಸ್ವೀಕೃತಿ 10 – 'ಹೆಣದ ಸುತ್ತ ಹಣದ ಆಟ' – ಶ್ರೀ ಗುರುರಾಜ ಶಾಸ್ತ್ರಿ

ವ್ಯಕ್ತಿಯ, ಕುಟುಂಬದ ದುಃಖದ ಸಮಯದಲ್ಲಿ ಹಲವು ಅವಕಾಶವಾದಿಗಳು ಹೇಗೆಲ್ಲ ದುಃಖಿತನ ಮತ್ತು ಅವನ ಕುಟುಂಬದ ಭಾವನೆಗಳ ಜೊತೆ ಆಟವಾಡುತ್ತಾರೆ ಮತ್ತು ವಂಚಿಸುತ್ತಾರೆ ಎಂಬುದನ್ನು ಕೂಲಂಕಷವಾಗಿ ಸ್ವಾನುಭವವೇನೋ ಎನ್ನುವಂತೆ ನಿರೂಪಿಸಿದ್ದಾರೆ.

ಆಸ್ಪತ್ರೆಯವರು ಬಿಲ್ ವಸೂಲುಮಾಡುವ ಪರಿ, ಆಂಬುಲೆನ್ಸ್ ಹಾಗು ಸಹಾಯಕರು ಹಣಕ್ಕಾಗಿ ಪೀಡಿಸುವಿಕೆ, ಅಂತ್ಯಕ್ರಿಯೆಯ ಸಂದಿಗ್ಧಗಳು, ಪುರೋಹಿತರು, ಶವಸಂಸ್ಕಾರದ ಸಾಮಗ್ರಿಗಳು, ಚಟ್ಟ, ಚಿತಾಗಾರ, ನಂತರದ ವಿಧಿ ವಿಧಾನಗಳನ್ನು ನೆರವೇರಿಸುವ ಪೇಚಾಟವನ್ನು ಒಂದು ಬೆಂಕಿಪೊಟ್ಟಣಕ್ಕೆ 400 ರೂಪಾಯಿಗಳನ್ನು ಪೀಡಿಸಿ ಪಡೆಯುವ ಅಮಾನವೀಯ ಚಿತಾಗಾರದ ಕೆಲಸಗಾರರು, ದುಃಖಿತರಿಗೆ ನೀಡುವ ಬವಣೆ ಅವರಿಗೆ ಸಾಮಾನ್ಯ ವಿಷಯವೇ. ಅಸ್ತಿ ವಿಸರ್ಜನೆಯ ಪರಿಪಾಟಲು ನಮ್ಮ ಸಮಾಜದ ಅವಕಾಶವಾದಿಗಳ ಕೊಳಕು ಮನಃಸ್ಥಿತಿಗೆ ಸಾಕ್ಷಿ. ತಮ್ಮ ಸಾಮಾಜಿಕ ಕಳಕಳಿಯನ್ನು ಹೊರಹಾಕುತ್ತಾ, ನಮ್ಮ ನಮ್ಮ ಆಚಾರ ವಿಚಾರಗಳನ್ನು ಪುಷ್ಟೀಕರಿಸಿದ್ದಾರೆ. ಲೇಖಕ ಅಂದುಕೊಂಡಂತೆ ಅಪರೂಪದ ಕೃತಿ.

ಸ್ವೀಕೃತಿ 11 – 'ಸಂತೋಷ=ನೆಮ್ಮದಿ ಎಂದರೇನು' – ಶ್ರೀಮತಿ ಸುಜಾತಾ ರವೀಶ್

'ಬದುಕಿನಲ್ಲಿ ನೆಮ್ಮದಿ ಸಂತೋಷ ಮರೀಚಿಕೆಗಳಂತೆ, ಇನ್ನೇನು ಲಭಿಸೀತು ಎನ್ನುವಾಗ ವಾಸ್ತವತೆ ಗಹಗಹಿಸಿ ನಗುತ್ತದೆ. ಇವುಗಳನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವುದು ಜೀವನ ಕಲೆ.' ಎಂದು ಆರಂಭಿಸಿದ ಲೇಖಕಿ ಒಂದು ಜೀವನ ಸತ್ಯವನ್ನು ಗಹನವಾಗಿ ಪ್ರತಿಪಾದಿಸುತ್ತಾರೆ. ಮಾನ್ಯ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ಜೀವನ ಹೇಗಿರಬೇಕೆಂಬ ಸರಳ ನುಡಿಗಳನ್ನೂ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಸಾರಿದ ಸಮಚಿತ್ತತೆಯನ್ನೂ, ಜನಸಾಮಾನ್ಯನ ಪ್ರತೀಕ ಮರಳು ಮುನಿಯನ ನೆಮ್ಮದಿಯ ಮೂಲ ಮಂತ್ರವನ್ನೂ ಸುಜಾತಾ ಅವರು ಮನದಟ್ಟಾಗುವಂತೆ ವಿವರಿಸಿದ್ದಾರೆ.

ಇಹದ ಭಾರವನ್ನು ಪರಕ್ಕೆ ಅಂದರೆ ಪರಮಾತ್ಮನಿಗೆ ವಹಿಸಿದಾಗ, ಜೀವನದ ನೆಮ್ಮದಿ ಸಂತೋಷ ಅರಸಿಕೊಂಡು ಬರುತ್ತದೆ ಎಂಬ ಸಾಂತ್ವನದ ಮಾರ್ಗೋಪಾಯವನ್ನು ನೀಡಿದ್ದಾರೆ. ಸಂತೋಷದ ಸ್ಥಿತಿ ಹೀಗೆ ಬಂದು ಹಾಗೆ ಹೋಗುವ ಕೋಲ್ಮಿಂಚಿನಂತೆ. ನೆಮ್ಮದಿ ಅಂತರಂಗದಲ್ಲಿ ನಾವಾಗಿ ತಂದುಕೊಳ್ಳುವ ಅನುಭೂತಿ, ಆಗಸದಲ್ಲಿ ಸದಾ ಕಾಲವು ಕಾಣುವ ಬಿಳಿ ಮುಗಿಲಿನಂತೆ.

ಈಗ ನಾವೂ ಒಪ್ಪಿಕೊಳ್ಳುತ್ತೇವೆ, ನೀವೇ ಅಂದಂತೆ ಮಾರ್ಚ್ 20 ಸಂತಸದ ದಿನ ಅಂತ. ನಿಮ್ಮಲ್ಲಿ ಮೂಡಿದ ಅಂದಿನ ಚಿಂತನಾ ಲಹರಿ ನಮ್ಮಲ್ಲಿಯೂ ನೆಮ್ಮದಿ ಸಂತಸವನ್ನು ತಂದಿತು. ಅಂದಮೇಲೆ ಸದ್ವಿಚಾರದ ಮಂಥನ ಮಾಡಿಸಿ ಎಲ್ಲರಲ್ಲೂ ನೆಮ್ಮದಿ ಬಗ್ಗೆ ಬೆಳಕು ಚೆಲ್ಲಿದ ನಿಮಗದು ಸಂತಸದ ದಿನವೇ. ನಿಮ್ಮ ಚಿಂತನೆಗೆ ಹೃದಯಪೂರ್ವಕ ಅಭಿನಂದನೆಗಳು.

ಸ್ವೀಕೃತಿ 12 – ಎರಡು ಕವನಗಳು – ಶ್ರೀಮತಿ ಪೂರ್ಣಿಮಾ ಭಗವಾನ್

'ಧೀರೋದಾತ್ತ ಮಹಿಳೆ ಅಹಲ್ಯಾಬಾಯಿ' – ಮೂರು ಶತಮಾನಗಳ ಹಿಂದೆ ಮಾಳ್ವ ಸಾಮ್ರಾಜ್ಯವನ್ನು ಆಳಿದ ಧೀರ ವೀರ ಮಹಿಳೆ ರಾಣಿ ಅಹಲ್ಯಾಬಾಯಿ ಹೋಳ್ಕರ್ ಬಗ್ಗೆ ಪದ್ಯ ಗದ್ಯ ಮಿಶ್ರಿತ ಬರವಣಿಗೆ ಪೂರ್ಣಿಮಾ ಅವರದ್ದು. ನರ್ಮದಾ ತೀರದ ಮಹೇಶ್ವರವನ್ನು ರಾಜಧಾನಿಯಾಗಿಟ್ಟುಕೊಂಡು ಮೂವತ್ತು ವರ್ಷಕಾಲ ರಾಜ್ಯವನ್ನಾಳಿ ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣಳಾದ ಆ ರಾಣಿ ಇಂದಿಗೂ ಮಾಳ್ವ ಪ್ರದೇಶದ ಜನಮನದಲ್ಲಿ ರಾರಾಜಿಸುತ್ತಿದ್ದಾಳೆ. 'ಧರ್ಮಮ್ ರಕ್ಷತಿ ರಕ್ಷಿತಃ' ಎಂಬ ಸದ್ವಿಚಾರವನ್ನಿಟ್ಟುಕೊಂಡು ಮೊಗಲರ ದುರಾಡಳಿತದಿಂದ ಹಾಳುಗೆಡವಿದ್ದ ಹಲವಾರು ಧಾರ್ಮಿಕ ಕ್ಷೇತ್ರಗಳ ಪುನರುತ್ಥಾನ ಮಾಡಿದ ಸಾಧ್ವೀಮಣಿ ರಾಣಿ ಅಹಲ್ಯಾಬಾಯಿ. ಕವಯಿತ್ರಿ ಹೇಳುವಂತೆ 'ಆದರ್ಶ ನಾರಿ, ಪರಿವರ್ತನೆಗೆ ಸ್ಫೂರ್ತಿ, ಸಂಸ್ಕೃತಿಯನ್ನುಳಿಸಿದಾಕೆ, ಈಶ ಭಕ್ತೆ, ಎಚ್ಚರದ ನಡೆ ನುಡಿಯ ಕೆಚ್ಚೆದೆಯ ಧೀಮಂತೆ' ರಾಣಿಯ ಮುನ್ನೂರನೇ ವರ್ಷದ ಆಚರಣೆಗೆ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ ಪೂರ್ಣಿಮಾ ಅವರು. ಕವನವನ್ನು ಇನ್ನಷ್ಟು ಪ್ರಾಸಬದ್ಧವಾಗಿಸ ಬಹುದಿತ್ತೇನೋ?

ನಾನು, ನಮ್ಮ ಮನೆಯವರೆಲ್ಲರೂ, ಇಂದೋರಿನಲ್ಲಿ ಇದ್ದಾಗ ಮಹೇಶ್ವರಕ್ಕೆ ಹೋಗುವುದೆಂದರೆ ಬಹಳ ಸಂತೋಷ ಪಡುತ್ತಿದ್ದೆವು. ವಿಶಾಲ ನರ್ಮದಾ ನದಿಯ ಒಂದು ತೀರದಲ್ಲಿ ರಾಣಿ ಅಹಲ್ಯಬಾಯಿ ಅವರ ಅರಮನೆ ಇನ್ನೊಂದು ತೀರದಲ್ಲಿ ಹಚ್ಚಹಸಿರಿನ ಕಾನನ, ನರ್ಮದೆಯಲ್ಲಿ ಸಂಜೆಯ ಸೂರ್ಯಾಸ್ತದ ವೇಳೆಯಲ್ಲಿ ದೋಣಿ ವಿಹಾರ ಮಾಡುವುದು ಅನುಭವಿಸಬೇಕೇ ಹೊರತು ವರ್ಣಿಸಲಸಾಧ್ಯ. ಆ ಪರಿಸರವೆಲ್ಲ ಇಂದಿಗೂ ಪ್ರಶಾಂತ ದೈವೀ ಅನುಭೂತಿಯನ್ನು ನೀಡುತ್ತದೆ. ಅವಕಾಶವಾದರೆ ನೀವೆಲ್ಲರೂ ಅನುಭವಿಸಿ.

'ಕಾವ್ಯ ಕನ್ನಿಕೆಯ ಮಹಿಮೆ' – ಪೂರ್ಣಿಮಾ ಅವರ ಇನ್ನೊಂದು ಕವಿತೆ ಸ್ವಾನುಭವದ ಕವಿತೆ. 'ಕಾವ್ಯ ಕನ್ನಿಕೆಯ ಮಹಿಮೆ', ಕಾವ್ಯ ಕನ್ನಿಕೆಯ ಕೃಪೆಗೆ ಪಾತ್ರರಾದವರು ಮಾತ್ರ ಬರೆಯಲು ಶಕ್ಯರು. ಆ ಭಾಗ್ಯ ಪೂರ್ಣಿಮಾ ಅವರದ್ದಾಗಿದೆ. ಅವರು ಅನುಭವಿಸಿದುದನ್ನು ಚೆನ್ನಾಗಿ ವಿವರಿಸಿದ್ದಾರೆ. ನಿತ್ಯ ಪ್ರೇರಕಳೂ, ಸಾರ್ಥಕಭಾವ ಸೃಷ್ಟಿಸುವವಳು, ಮನಕೆ ಮದ್ದಾಗುವವಳು, ಅಂಧಕಾರದಲ್ಲಿ ಕೋಲ್ಮಿಂಚು, ಸಂಸ್ಕರಿಸಿ ಸಂಸ್ಕಾರ ಸುಜ್ಞಾನ ತಿಳಿಸುವ ಕಾವ್ಯ ಕನ್ನಿಕೆ ಅನುಭವಾಮೃತವನ್ನು ಬಡಿಸುತ್ತಾ, ಸಾಹಿತ್ಯದ ಆಹ್ಲಾದದಿಂದ ಉತ್ಕರ್ಷಕೆ ಒಯ್ಯುವಳು ಎಂದಿದ್ದಾರೆ. ನಿತ್ಯ ಸುಂದರ ಕಲ್ಪನೆ. ಅಭಿನಂದನೆಗಳು.

ಸ್ವೀಕೃತಿ 13 – 'ಬದುಕಿನ ಬಹು ಮುಖಗಳು' – ಶ್ರೀಮತಿ ರೇಣುಕಾ ದೇಸಾಯಿ

ನಮ್ಮ ಜೀವನದ ಆಗು–ಹೋಗುಗಳಲ್ಲಿ ಅನವರತವೂ ಒಂದಿಲ್ಲೊಂದು ಘಟನೆಗಳು ನಡೆಯುತಿರುತ್ತವೆ. ಅವುಗಳನ್ನು ಗ್ರಹಿಸುವ ಮತ್ತು ಕಲಾತ್ಮಕವಾಗಿ ನಿರೂಪಿಸುವ ಕಲೆ ಕೆಲವರಿಗೆ ಮಾತ್ರ ಕರಗತವಾಗಿರುತ್ತವೆ. ಹಾಗಾಗಲು ನೀವು ನೋಡುವ ದೃಷ್ಟಿಯಲ್ಲಿ ಸಾಹಿತ್ಯವಿರಬೇಕು, ಮನದಲ್ಲಿ ಭಾವನಾತ್ಮಕ ಸ್ಪಂದನೆ ಇರಬೇಕು. ಹೃದಯದಲ್ಲಿ ಮಾನವೀಯ ಮಿಡಿತವಿರಬೇಕು. ಅಂತಹ ಸಜ್ಜನರ ಸಾಲಿನಲ್ಲಿ ಶ್ರೀಮತಿ ರೇಣುಕಾ ದೇಸಾಯಿ ಇದ್ದಾರೆ ಎಂಬುದನ್ನು ಇಲ್ಲಿ ದೃಢೀಕರಿಸಿದ್ದಾರೆ. ಒಂದು ಸತ್ಯ ಘಟನೆಯನ್ನು ಸಾಕ್ಷೀಕರಿಸಿ ನಮ್ಮ ಮುಂದಿಟ್ಟಿದ್ದಾರೆ.

ಮೆಟ್ರೋ ರೈಲಿನಲ್ಲಿ ಅಳುತ್ತಿರುವ ಮಹಿಳೆ, ಆಕೆಗೆ ಹೆಚ್ಚಿನ ಕಾಳಜಿ ತೋರಿಸದ ಸಹಪ್ರಯಾಣಿಕರು, ಇವರು ನೀಡಿದ ಸಾಂತ್ವನ, ಆಕೆಯನ್ನು ತಲುಪಬೇಕಾದ ಆಸ್ಪತ್ರೆಗೆ ತಲಪಿಸುವಲ್ಲಿನ ಮುಂದಾಳತ್ವ, ಅಮಾನವೀಯ ಆಟೋ ಡ್ರೈವರುಗಳ ನಡುವೆ ಸಿಕ್ಕ

ಓರ್ವ ಮೃದು ಹೃದಯದ ಡ್ರೈವರ್, ಎಲ್ಲವನ್ನೂ ವಿಭಿನ್ನ ಮಾನವೀಯ ಗುಣಲಕ್ಷಣಗಳೊಂದಿಗೆ ತನ್ನ ಭಾವನಾತ್ಮಕ ಬುದ್ಧಿವಂತಿಕೆಯಿಂದ ನೋಡಿದ್ದಾರೆ. ಆ ಮಹಿಳೆಯ ಸಾಂಸಾರಿಕ ಸಂಕಷ್ಟ, ಸಂಸಾರದ ನಡೆಗಾಗಿ ಆಕೆ ಮಾಡಿದ ತ್ಯಾಗ, ಸವತಿ ಯಾದರೂ ತಂಗಿಯಲ್ಲಿ ಕಂಡ ಅನುಬಂಧ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ಈ ಘಟನೆಯ ನಂತರ ಎಷ್ಟೋ ದಿನಗಳವರೆಗೆ ನೆನಪಿರುವುದರ ಬಗೆಗೆ ವಿಶ್ಲೇಷಿಸುತ್ತಾ, ಮಾನವೀಯ ಸ್ವಾಭಾವಿಕ ಮಜಲುಗಳನ್ನು ಬಿಡಿಸುತ್ತಾ ಹೋಗುತ್ತಾರೆ.

ಸಮಯದ ಅಭಾವವಿದ್ದರೂ ರೇಣುಕಾ ದೇಸಾಯಿ ಅವರ ಈ ಬರವಣಿಗೆ ನಮಗೂ ಸ್ಮರಣೆಯಲ್ಲಿ ಉಳಿಯುವಂತಹುದು. ಇದನ್ನು ಓದಿದಾಗ ನಾನೊಮ್ಮೆ ಎದುರಿಸಿದ ಪರಿಸ್ಥಿತಿಯ ನೆನಪಾಯಿತು. ಸುಮಾರು ನಾಲ್ಕು ದಶಕಗಳ ಹಿಂದಿನ ಕತೆ. ನಾನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಪ್ರಧಾನ ಕಚೇರಿಯಲ್ಲಿದ್ದೆ. ನನ್ನ ಹೆಂಡತಿ ಶೋಭಾ ರಾವ್ ಎಸ.ಬಿ.ಐ. ನ ರೀಜನಲ್ ಆಫೀಸಿನಲ್ಲಿ ಇದ್ದಳು. ಮನೆಯಿಂದ ಹೊರಟು ನನ್ನಾಕೆಯನ್ನು ಆಫೀಸಿಗೆ ಬಿಟ್ಟು ನಾನು ನಮ್ಮ ಹೆಡ್ ಆಫೀಸಿಗೆ ತೆರಳುತ್ತಿದ್ದೆ. ಕಂಠೀರವ ಸ್ಟೇಡಿಯಂ ರಸ್ತೆಯಲ್ಲಿ ಹೋಗುತ್ತಿದ್ದೆ. ನನ್ನ ಎದುರಿನಲ್ಲಿಯೇ ನಡೆದುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿ ಫುಟ್ ಪಾತ್ ಮೇಲೆ ಬಿದ್ದ. ನಾನು ಸ್ಕೂಟರ್ ನಿಲ್ಲಿಸಿದೆ. ಆತನ ಮೈ ಕೈ ಕಾಲು ಎಲ್ಲವೂ ನಡುಗುತ್ತಿದೆ. ಬಾಯಿಂದ ನೊರೆ ಬರುತ್ತಿದೆ. ನನಗೆ ತಕ್ಷಣಕ್ಕೆ ಹೊಳೆಯಿತು. ಇದು ಫಿಟ್ಸ್ ರೋಗ ಎಂದು. ತಕ್ಷಣ ಪರ್ಸಿನಲ್ಲಿದ್ದ ಮನೆ ಕೀ ಗೊಂಚಲು ಅವನ ಕೈಗಿತ್ತೆ. ಅವನ ನಡುಕ ಶಾಂತವಾಗುತ್ತ ಬಂತು. ಅಷ್ಟರಲ್ಲಿಯೇ ಒಂದೆರಡು ವಾಹನ ಸವಾರರು ಅಲ್ಲಿ ಬೈಕ್ ನಿಲ್ಲಿಸಿದರು. ಆತನ ಶುಶ್ರುಷೆಗೆ ಕೈ ಜೋಡಿಸಿದರು. ಒಬ್ಬರು ತಮ್ಮಲ್ಲಿದ್ದ ನೀರಿನ ಬಾಟಲಿ ತೆಗೆದು ಕುಡಿಸಿ ಎಂದು ನನ್ನ ಕೈಗಿತ್ತರು. ಕೆಲವೇ ನಿಮಿಷಗಳಲ್ಲಿ ಆ ವ್ಯಕ್ತಿ ಚೇತರಿಸಿಕೊಂಡರು. ನಮ್ಮೆಲ್ಲರನ್ನೂ ನೋಡಿ ಕಣ್ಣಿನಲ್ಲಿಯೇ ಧನ್ಯತೆಯನ್ನು ತೋರಿದರು. ಏನಾದರೂ ಸಹಾಯ ಬೇಕೇ ಎಂದಾಗ, ಬೇಡವೆಂದು ಸುಧಾರಿಸಿಕೊಂಡು ಹೋಗುವೆ ಎಂದರು. ಆದರೂ ಅವರ ಕಚೇರಿಗೆ ಆಟೋ ಮಾಡಿಸಿ ಕಳುಹಿಸಿದಾಗ ನಮಗೆ ನೆಮ್ಮದಿ ಎನಿಸಿತು.

ಶ್ರೀ ಗುರುರಾಜ ಶಾಸ್ತ್ರಿಗಳು ನಿಮ್ಮದೂ ಒಂದು ಪ್ರಸ್ತುತಿ ಇರಲಿ ಎಂದರು. ಆಗಲಿ ಎಂದೆ. ಕೆಲದಿನಗಳ ಹಿಂದೆ ಕುಟುಂಬದ ಒಬ್ಬ ಸದಸ್ಯೆ, ಬಸುರಿ ಪಡುತ್ತಿದ್ದ ಬವಣೆಯನ್ನು ನೋಡಿ ಸಾಂತ್ವನ ನೀಡಲೆಂದು ಬರೆದ ಕವನ. ಓದಿದಾಗ ಅವಳ ಮುಖವರಳಿದ್ದಂತೂ ಸತ್ಯ. ಆ ಕವನವೇ 'ಅಮ್ಮಾ ನೀ ನಗುತ್ತಿರು ನಾ ಬರುವೆನೆಂದು.' ಅದನ್ನು ಈಗ ಪ್ರಸ್ತುತಪಡಿಸುತ್ತಿದ್ದೇನೆ.

ಒಟ್ಟಾರೆಯಾಗಿ ನೋಡಿದಾಗ, ದಾಸೋಹದ ಔತಣ ಚೆನ್ನಾಗಿತ್ತು. ಖಾದ್ಯ ಮಾಡಿ ಬಡಿಸಿದ ಎಲ್ಲರಿಗೂ ವಂದನೆಗಳು, ಅಭಿನಂದನೆಗಳು.

ಇನ್ನೆರಡು ವಿಚಾರ. ಕಳೆದ ಬಾರಿ ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ.ವಿ.ಅರುಣ ಅವರು ಹೇಳಿದಂತೆ ಕಾಗುಣಿತ ತಪ್ಪುಗಳು, ವ್ಯಾಕರಣ ದೋಷಗಳು, ವಿರಾಮ ಚಿಹ್ನೆಗಳನ್ನು ಬೇಕಾದಲ್ಲಿ ಬಳಸದಿರುವುದು ಕೆಲವು ಬರಹಗಳಲ್ಲಿ ಕಾಣಿಸಿದುವು. ತಿದ್ದಿಕೊಳ್ಳುವ ಅವಕಾಶವಿದೆ. ಇಲ್ಲವಾದಲ್ಲಿ ಶೃಂಗೇಶ್ವರ ಶರ್ಮ ಅವರಂತೂ ಬಿಡುವುದಿಲ್ಲ ಸರಿಪಡಿಸುತ್ತಾರೆ.

ಎರಡನೆಯ ವಿಚಾರ ಈ ವೇದಿಕೆಯಲ್ಲಿ ಬಹಳಷ್ಟು ಬರಹಗಾರರು ಇದ್ದಾರೆ. ಹಲವರ ಪುಸ್ತಕಗಳು ಪ್ರಕಟಗೊಂಡಿವೆ. ನಮ್ಮ ನಮ್ಮ ಪ್ರಕಟಿತ ಪುಸ್ತಕಗಳ ಆಂತರಿಕ ಮಾರಾಟಕ್ಕಾಗಿ, ಮತ್ತು ಅವುಗಳ ಬಿಡುಗಡೆಗಾಗಿ ಪ್ರಯತ್ನಗಳನ್ನು ಮಾಡಬಹುದೇ? ಎಲ್ಲರಿಗೂ ಅನುಕೂಲವಾದೀತು. ಪ್ರಾಯಶಃ ಪುಸ್ತಕ ಮೇಳ ಆಯೋಜಿಸಬಹುದು. ಯೋಚಿಸಿ ನೋಡಿ.

ಇದರೊಂದಿಗೆ ನನ್ನ ಅಧ್ಯಕ್ಷ ಭಾಷಣವನ್ನು ಮುಗಿಸುತ್ತಿದ್ದೇನೆ. ಸಾಹಿತ್ಯ ದಾಸೋಹದ ಸಂಚಾಲಕ ಸಮಿತಿಗೆ ನನ್ನ ಹೃತ್ಪೂರ್ವಕ ವಂದನೆಗಳು.

***